ಕರ್ಮವೀರ

ಹುಬ್ಬಳ್ಳಿ ತಾ. ...

ಸಂಪುಟ ೨೮]

ಜನಪ್ರಿಯ ಸಚಿತ್ರ ವಾರಪತ್ರಿಕೆ

ಸಂಪಾದಕರು:
ಹ. ರಾ. ಪುರೋಹಿತ]

ವಿವೇಕಾನಂದರ ವಿಚಾರ

೧

ನೀವೆಲ್ಲ ಪರಮಾತ್ಮನ ಮಕ್ಕಳು. ಪವಿತ್ರ, ಪ್ರಾಜ್ಞ ಜೀವಿಗಳು. ಮಾನವನನ್ನು ಪಾಪಿಯೆಂದು ಕರೆಯುವದೇ ಮಹಾಪಾಪ. ಸಿಂಹಗಳೇ ಎದ್ದೇಳಿ! ಕುರಿಗಳೆಂಬ ಭಾವನೆ ಕಿತ್ತೊಗೆಯಿರಿ. ನೀವು ಅಮರ ಜೀವಿಗಳು, ಸ್ವತಂತ್ರಾತ್ಮರು. ನೀವು ದೈವದ ಆಳಲ್ಲ. ದೈವವೆ ನಿಮ್ಮ ಆಳು.

೨

ತನ್ನಲ್ಲಿಯೇ ನಂಬಿಗೆಯಿಲ್ಲದವನು ನಾಸ್ತಿಕ. ಪುರಾತನ ಧರ್ಮಗಳು ದೇವರನ್ನು ನಂಬದವನನ್ನು ನಾಸ್ತಿಕನೆಂದು ಕರೆದವು. ಹೊಸ ಧರ್ಮ ಆತ್ಮವಿಶ್ವಾಸವಿಲ್ಲದವನನ್ನೇ ನಾಸ್ತಿಕನೆಂದು ಹೇಳುತ್ತದೆ.

೩

ವಿಶ್ವಾಸ, ವಿಶ್ವಾಸ, ಆತ್ಮವಿಶ್ವಾಸ, ಪರಮಾತ್ಮನಲ್ಲಿ ನಂಬಿಗೆ ಇವೇ ಹಿರಿತನದ ದಾರಿ. ನಿಮ್ಮ ಪುರಾಣಗಳ ಮೂವತ್ತುಮೂರು ಕೋಟಿ ದೇವತೆಗಳಲ್ಲಿ ನಂಬಿಗೆಯಿಟ್ಟು, ನಿಮ್ಮಲ್ಲಿ ಅಪನಂಬಿಗೆ ಇದ್ದರೆ ನಿಮಗೆ ಮುಕ್ತಿಯಿಲ್ಲ. ಸ್ವಂತ ಶಕ್ತಿಯಿಂದಲೇ ಬೆಳೆದು ಬಾಳಿರಿ.

೪

ಜೀವನದಲ್ಲಿ ಯಶಸ್ವಿಯಾಗಲು ನಿಮ್ಮಲ್ಲಿ ಅಪಾರ ತಾಳ್ಮೆ, ಸಂಯುತಶಕ್ತಿ ಬೇಕು. ತಾಳ್ಮೆಯುಳ್ಳ ಜೀವ ಹೇಳುತ್ತದೆ, 'ನಾನು ಸಮುದ್ರವನ್ನು ಕುಡಿಯುವೆ. ನನ್ನ ಹೊಡೆತಕ್ಕೆ ಪರ್ವತಗಳೆಲ್ಲ ಪುಡಿಪುಡಿಯಾಗುತ್ತವೆ.'

ಸಂಗ್ರಾಹಕ:-
ಕೊರಟೂರ ರಾಮಚಂದ್ರ



ಫೋಟೋ: ಶ್ರೀ. ಬಿ. ಸಿ. ನಾಲೆ ಹುಬ್ಬಳ್ಳಿ

ಕಡಪಾ ಜಿಲ್ಲೆಯ ರಾಚೋಟಿಯಲ್ಲಿಯ ಶ್ರೀವೀರಭದ್ರ ದೇವ ಮಂದಿರದ ಮಹಾದ್ವಾರದ ದೃಶ್ಯವು ಪ್ರಾಚೀನ ಶಿಲ್ಪಕಲಾಕೃತಿಯ ಸುಂದರ ಮಾದರಿ.

ಗ್ರಾಮಸೇವೆಯ ನಿಜವಾದ ರೀತಿ

— ಪುಟ ೫

ವಧುವಿನ ಕೈಫಿಯತ್ತು

— ಪುಟ ೧೩



ಚಿಕ್ಕಕತೆ

ಭೂಕಂಪ

ಬರೆದವರು:
ಶ್ರೀಕೃಷ್ಣ ಪಾಟೀಲ
ಕಲಾಮಂಟಪ ಬೆಳಗಾವ

ಭಿಕ್ಷುಕಿಯು ಮತ್ತೆ ಬಂದಳು. ಬಾಗಿಲಲ್ಲಿ ಯಾರ ಸುಳಿವೂ ಇರಲಿಲ್ಲ. ಇಂಥ ದೊಡ್ಡ ಮನೆಯ ಮುಂದೆ ನಾಲ್ಕು ಸಾರೆ ಬಂದು ಬರಿಗೈಯಿಂದ ಹೋಗುವದು ಆಕೆಗೆ ನಾಚಿಕೆ ಎನಿಸಿತು. ಸ್ವಲ್ಪ ಹೊತ್ತು ನಿಂತು ತನ್ನ ವೃತ್ತಿ ಮಂತ್ರವನ್ನು ಆರಂಭಿಸಿದಳು.

–ತಾಯೀ, ಹಸೀ ಬಾಣತೀ ನಾಲ್ಕು ಸಾರೆ ಬಂದು ಹೋಗಿರುವೆ. ತಾಯೀ, ಮೈಮುಚ್ಚಲು ಒಂದು ಹರಕು ಸೀರೆಯನ್ನು ಕೊಡು. ದೇವರು ನಿನಗೆ ಕಡಿಮೆ ಮಾಡಿಲ್ಲ– ಎಂದು ಬಾಗಿಲಲ್ಲಿ ಅಚೆ ನಿಂತ ನಗ್ನ ಭಿಕ್ಷುಕಿಯು ಅಂಗಲಾಚಿ ಬೇಡಹತ್ತಿದಳು.

ಯಜಮಾನಿಯ ಕಿವಿಗೆ ಈ ಕರ್ಮಹೀನ ವಾಕ್ಯಗಳು ಮುಟ್ಟಬಾರದೆಂದು ನಡುಮನೆಯಲ್ಲಿ ಮೆತ್ತನ್ನ ಗಾದಿಯ ಮೇಲೆ ಒರಗಿದ ಹೃಷ್ಟ-ಪುಷ್ಟ -ನಾಯಿಯು ಬೊಗಳಿಯೇ ಬೊಗಳುತ್ತಿದ್ದಿತು.

ಭಿಕ್ಷುಕಿಯು ಧೂಳಿ ತುಂಬಿದ ಗಾಳಿಗೆ ಮೈಯೊಡ್ಡಿ ಹಾರಾಡುವ ಚಿಂದಿಯ ಅರಿವೆಗಳನ್ನು ಎದೆಯ ಮೇಲೆ, ತೊಡೆಯ ಮೇಲೆ ಎಳೆದುಕೊಂಡು ಕಣ್ಣು ಬಿಡುತ್ತ ಮತ್ತೆ ಕೂಗಿದಳು.

ಭಿಕ್ಷುಕಿಯು ಸ್ತ್ರೀಯೆಂದು ಸಂಪೂರ್ಣ ಅರಿಯಲು ನಾಯಿದೇವನ ಈ ವಿಕೃತ ಚೇಷ್ಟೆಗಳು ಅವಶ್ಯವಾಗಿರಲಿಲ್ಲ.

ಮೆತ್ತನ್ನ-ಗಾದಿಯ ಮೇಲೆ ಎದ್ದು ನಿಂತು ನಾಯಿಯು ಅಷ್ಟೇ ಏರು ದನಿಯಿಂದ ಉತ್ತರಿಸುತ್ತಿದ್ದಿತು.

ನಾಯಿಯು ಒದರಿ ನಿಂತಿತು. ಭಿಕ್ಷುಕಿಯು ಯಾಚಕ ದಂತಪಂಕ್ತಿಗಳನ್ನು ಬಿಚ್ಚಿ,

ತಾಯೀ, ಬಾಗಿಲಲ್ಲಿ ಭಿಕ್ಷುಕಿ, ಹಸಿ ಬಾಣತಿ! ನಿನ್ನದೊಂದು ಹರಕು ಸೀರೆಯನ್ನು ಕೊಡು! ಪೀಡೆಯು ತೊಲಗಲಿ ಎಂದು– ಕೊಡು ತಾಯೀ ಎಂದು ಚೀರಿದಳು.

ನಾಯಿಯು ತನ್ನ ಓಂಕಾರ–ಭೋಂಕಾರ ರಾಗವನ್ನು ಮತ್ತೆ ಎಳೆಯಿತು.

ಯಜಮಾನಿಯು ಹೊರಗೆ ಬಂದಳು.

ಯಜಮಾನಿಯು ಕಿಡಿಗೂಡಿದ ಕಣ್ಣುಗಳನ್ನು ಬಿಟ್ಟು ನೋಡಿದಳು. ಬಾಗಿಲಲ್ಲಿ ನಿಂತು ಹೀಗೆ ಕೂಗುವದು ಇನ್ನಷ್ಟು ಹೊಲಸು ಎನಿಸಿತು, ಕ್ರೋಧವೂ ತುಂಬಿತು.

ಏನೇ ಗಯ್ಯಾಳಿ ಎಂದು ಹುಬ್ಬು ಏರಿಸಿ ಇಳಿಸಿ, ಮೂಗು ಹಿಗ್ಗಿಸಿ–ತಗ್ಗಿಸಿ ಆರಂಭಿಸಿದಳು. ನಿಮ್ಮ ಕಷ್ಟ-ಕಾರ್ಪಣ್ಯಕ್ಕೆ ಹೊಟ್ಟೆ–ಬಟ್ಟೆಗೆ, ಅತಿ-ಪಾತಗಳಿಗೆ ನಮ್ಮ ರಕ್ತ ನೀರಾಗಬೇಕೇನೇ? ಭಿಕ್ಷಾದಯೆಯ ಮೇಲೆಯೇ ನಿಮ್ಮ ವಂಶವೃದ್ಧಿಯೇನು!" ಎಂದು ಬಾಗಿಲಲ್ಲಿ ನಿಂತು ಸುವರ್ಣ ಕಂಕಣಾಲಂಕೃತ ಹಸ್ತವನ್ನು ಎಲ್ಲ ದಿಕ್ಕುಗಳಿಗೆ ತಿರುಗಾಡಿಸುತ್ತ ಗುಡುಗಿದಳು.

ನಡುಮನೆಯಲ್ಲಿಯ ನಾಯಿಯು ತಾರ ಸ್ವರದ ಹೊ ಹೊ ಹೋ ಕಾರದಿಂದ ಹಿನ್ನೆಲೆಯಲ್ಲಿ ನಿಂತು ಅನುಮೋದಿಸುತ್ತಿದ್ದಿತು.

ಅಹುದು ತಾಯೀ! ನಿಮ್ಮ ದಯೆಯೇ ನಮ್ಮನ್ನು ಕಾಪಾಡಿಕೊಂಡು ಬಂದಿದೆ. ನಾವು ನಿಮ್ಮ ದಯಾದೃಷ್ಟಿಯ ಮಕ್ಕಳು" ಎಂದು ನುಡಿದಳು.

ಮಾತುಗಳಲ್ಲಿ ಸಂಕೋಚವಿರಲಿಲ್ಲ.

–ಹೋಗೇ! ಎಂದು ಚೀರಿದಳು.

–ದಯೆಯು ಇಷ್ಟೊಂದು ನಿಷ್ಠುರವಾದರೆ ನಾವು ಹೇಗೆ ಬದುಕಬೇಕು ತಾಯೀ! ಎಂದಳು.

ಎದೆಯ ಮೇಲಿನ ಸೆರಗು ಹಾರಿತು.

— ಹೋಗುವಿಯೋ 'ನಾಯಿಯನ್ನು ಬಿಡಲೋ!

–ನಿಮ್ಮ ನಾಯಿ ನನ್ನನ್ನು ಕಡಿಯುವದಿಲ್ಲ. ನನಗೆ ಗೊತ್ತು ತಾಯೀ!

ಸೆರಗು ಹೊದೆದಳು.

ಯಜಮಾನಿಯು ಬಾಯಿ ತೆರೆದು ಮಿಂಚಿನ ಮಾತುಗಳನ್ನು ಸುರಿಸಬೇಕೆಂದಿದ್ದಳು. ಅಷ್ಟರಲ್ಲಿ ನೆರೆಮನೆಯ ಗೆಳತಿ ಬಂದು-ಅದೇನೆ ಶಾಲ್ಮಲಿ? ಎಂದಳು.

—ಏನಿಲ್ಲ' ಬಟ್ಟೆಯಂತೆ ಬಟ್ಟೆ. ಎಂದು ಒಳಗೆ ಹೋಗಿ ಹರಕಾದ ಒಂದು ಸೀರೆಯನ್ನು ತಂದು-ತಗೋ ಇನ್ನು ಮೂರು ತಿಂಗಳವರೆಗೆ ಈ ಮನೆಗೆ ಬರಬೇಡ ಎಂದು ನುಡಿಯುತ್ತ ಕೊಟ್ಟಳು.

.ಅಗಲಿ ತಾಯಿ. ಭಿಕ್ಷುಕಿಯು ಹೋದಳು.

ಯಜಮಾನಿಯ ಮುಖದ ಮೇಲೆ ದಾನಶೂರ ಕರ್ಣನ ಸಂತೃಪ್ತಿಯಿದ್ದಿತು.

ಭಿಕ್ಷುಕಿಯು ದಾರಿಗುಂಟ ಸೀರಿಯನ್ನು ಬಿಚ್ಚಿ ತೂತುಗಳನ್ನು ಎಣಿಸುತ್ತ ನಡೆದಳು. ತನ್ನ ಗುಡಿಸಲಿಗೆ ಬರುವಷ್ಟರಲ್ಲಿ ಹತ್ತರಂತೆ ತನ್ನ ಬಲಗೈ ಬೆರಳುಗಳನ್ನೆಲ್ಲ ಮಡಿಚಿದ್ದಳು.

ಮರುದಿನ, ತಿರುಕರವಳು ತನಗೆ ಪರಿಚಯವಿದ್ದ ಸಿಂಪಿಗನ ಅಂಗಡಿಗೆ ಹೋಗಿ ಎಂಟು ಹತ್ತು ಬಿಲ್ಲೆಗಳನ್ನು ಕೊಟ್ಟು ಕೆಲವು ಅರಿವೆಯ ತುಂಡುಗಳನ್ನು ತಂದು ಸೀರೆಯ ಶತಚ್ಛಿದ್ರಗಳನ್ನು ಮುಚ್ಚಿದಳು. ಸಬಕಾರ ತಂದು ಒಗೆದಳು. ಅಂತೂ ಒಂದು ಚಿತ್ರವಿಚಿತ್ರವಾದ ಸೀರೆಯನ್ನು ಮಾಡಿಕೊಂಡು ಗಂಟಿನಲ್ಲಿ ಮಡಿಚಿಟ್ಟಳು. ಹಬ್ಬ-ಹುಣ್ಣಿವೆಯ ದಿನ ಉಟ್ಟು ಸಂತೋಷಪಡಬೇಕೆಂದು ಬಗೆದಳು.

ಏಳೆಂಟು ದಿನಗಳು ಕಳೆದವು. ಭಿಕ್ಷುಕಿಯು ಆ ಓಣಿಯ ಕಡೆಗೆ ಹಾಯಲಿಲ್ಲ.

ದೇವನ ಅವಕೃಪೆಯಿಂದಲೇ ಭೂಕಂಪ ಜ್ವಾಲಾಮುಖಿಗಳಾಗುವವೆಂದು ಗಾಂಧಿಜೀಯವರು ಹೇಳಿದ ಮಾತಿಗೆ ಎದುರಾಡಲು ಯಾರೂ ಸಾಹಸ ಮಾಡರು. ಬಿಹಾರದ ಭೂಕಂಪವು ನಡೆದೇ ಬಿಟ್ಟಿತು. ನಮ್ಮ ಸಾವಿರಾರು ವರುಷದ ಮನೆ ಮಠ ವ್ಯಾಪಾರ ಉದ್ಯಮ, ಜನ ಜಂಗುಳಿ ಪ್ರಕೃತಿಯ ಕೋಪಕ್ಕೆ ಬಲಿಯಾದವು. ಎಲ್ಲ ಕಡೆಗೂ ಹಾಹಾಕಾರ! ಆಕ್ರಂದನ! ಅಳು! ಅಂಧಕಾರಮಯ ರಾತ್ರಿಯಲ್ಲಿ ಎಲ್ಲವೂ ಅಸ್ತವ್ಯಸ್ತ!

ಶಾಲ್ಮಲಿಯ ಮನೆಯು ತೂಗು ತೊಟ್ಟಿಲಾಯಿತು. ಕಣ್ಣು ಮುಂದೆ ಮನೆಯ ಒಂದೊಂದೇ ಕಲ್ಲುಗಳು ಉದುರಿದವು. ತನ್ನ ಧನ–ದೌಲತ್ತು, ಐಷ–ಆರಾಮ, ವಿನೋದ ಪ್ರಮೋದದ ವಸ್ತುಒಡವೆಗಳು ಮಣ್ಣಲ್ಲಿ ಹೊರಳಾಡಹತ್ತಿದವು. ಗೋಡೆ–ಮಾಡದಲ್ಲಿಯ ಒಡವೆಗಳು ನಿರಾಧಾರವಾಗಿ ನೆಲವನ್ನು ಕಂಡವು. ಒಡೆದ, ಮುರಿದ, ಹರಿದವುಗಳ ಲೆಕ್ಕವನ್ನು ಹೇಳಲು ಅಸಾಧ್ಯವಾಯಿತು. ಗಾಳಿ, ಧೂಳಿ ಮನೆಯನ್ನು ಆವರಿಸಿದವು. ಮಂಚದ ಮೇಲೆ ಮಲಗಿದ ಗಂಡ ಮುಕುಂದ ಚರಣನು ದಿಗ್ಭ್ರಾಂತನಾಗಿ ನಿದ್ದೆಗಣ್ಣಿನಲ್ಲಿ ಓಡಾಡುವ ಮುಂದೆ ಮಾಳಿಗೆಯಿಂದ ಕೆಳಗೆ ಉರುಳಿದನು. ಶಾಲ್ಮಲಿಯು ತಾನೂ ಹಾರಿಕೊಂಡಳು. ನೆಲ ವಾಯು, ಜೀವವನ್ನು ನುಂಗಲಿಲ್ಲ. ನೆಲವು ಮಾಳಿಗೆಯಷ್ಟು ಎತ್ತರವಾಗಿನಿಂತು ಕೈಚಾಚಿ ಕರೆದುಕೊಂಡಂತಾಯಿತು. ಪ್ರಾಣವನ್ನು ಉಳಿಸಿಕೊಳ್ಳಲು ಓಡಿದಳು. ಒಮ್ಮೊಮ್ಮೆ ಓಡಿದ ನೆಲವೇ ಮತ್ತೆ ಮುಂದೆ ಉಳಿಯುವದು. ಇನ್ನೊಮ್ಮೆ ಓಡಾಡುವ ನೆಲವು ಒಂದು ಹೆಜ್ಜೆಯಲ್ಲಿ ಹಿಂದೆಸರಿಯುವದು. ಏನಾದರೂ ಓಟವನ್ನು ನಿಲ್ಲಿಸಲಿಲ್ಲ. ಲಾಯದಲ್ಲಿ ಕುದುರೆಗಳು ಹೆಹೇಕಾರದ ಚೀತ್ಕಾರವನ್ನು ಎತ್ತುತ್ತಿದ್ದವು. ರಥದ ಕಟ್ಟಿಗೆಗಳ ಘಟಘಟಿಲು ಎಂಬ ಸಪ್ಪಳವು ಕೇಳಬರುತ್ತಿದ್ದಿತು. ಅವುಗಳ ನಡುವೆ ನಾಯಿಯ ಬೌ ಬೌ ಎಂಬ ತಂಬೂರಿ ನಾದದ ಮೇಳವಿದ್ದಿತು. ಆದರೆ ಶಾಲ್ಮಲಿ–ಮುಕುಂದಚರಣರು ಇವೆಲ್ಲವುಗಳಿಗೆ ಕಿವುಡರು. ಸರ್ವಾಸ್ತಿಯನ್ನು ಕಳೆದುಕೊಂಡರೂ ದುಃಖವಿರಲಿಲ್ಲ. ಪ್ರಾಣ ಉಳಿದರೆ ಸಾಕೆಂಬುದೇ ಅವರ ವೇದಮಂತ್ರ. ಓಡಾಡಿದರು. ಪ್ರಜ್ಞೆ ಇಲ್ಲದೆ ಓಡಾಡಿದರು. ಅವರ ನಗ್ನಾವಸ್ಥೆಯನ್ನು ಕತ್ತಲೆಯೇ ಮುಸುಕು ಎಳೆದು ಮರೆಮಾಡಿತು.

ಊರಿನ ಹೊರಗೆ ದೂರದಲ್ಲಿ ಒಂದು ಗುಡಿಸಲ ಒಳಗೆ ಮಿಣಿ ಮಿಣಿ ಒಂದು ದೀಪ. ಪಟ್ಟಣದ ಕೋಲಾಹಲ ಅಲ್ಲಿಯವರೆಗೆ ಕೇಳಬರುತ್ತಿತ್ತು. ಗುಡಿಸಲ ವಾಸಿಗಳು ಹೊರಗೆ ನೆರೆದು ಪಟ್ಟಣದ ಉತ್ಪಾತವನ್ನು ಕಣ್ಣು ಬಿಡದು ನೋಡುತ್ತಿರುವರು. ತಮ್ಮ ಕಾಲ ಕೆಳಗಿನ ನೆಲವು ಸ್ಥಿರವೆಂದು ಸಂಪೂರ್ಣ ನಂಬಿಗೆ.

ಶಾಲ್ಮಲಿ ಮುಕುಂದರು ಓಡುತ್ತ ಬಂದರು. ಉಸಿರಿನಲ್ಲಿ ಪ್ರಾಣವು ಹೊಡೆದುಕೊಳ್ಳುತ್ತಿದ್ದಿತು. ಅದೊಂದೇ ಅವರ ಸರ್ವಸಂಪತ್ತು.

–ನೀವು ಯಾರು? ಒಬ್ಬ ಭಿಕ್ಷುಕಿಯು ಕೇಳಿದಳು.

–ದೇವರ ಅವಕೃಪೆಗೆ ಪಾತ್ರರಾದ ಇಬ್ಬರು ಅನಾಥರು. ಮುಕುಂದ ಚರಣನು ನುಡಿದನು.

–ಓ! ತಾಯೀ ನೀನು ಬತ್ತಲೆ! ಭಿಕ್ಷುಕಿಯು ನುಡಿದಳು.

ಗಂಡನು ಗುಡಿಸಲ ಹಿಂದೆ ಮರೆಯಾದನು. ಶಾಲ್ಮಲಿ ಅವನ ಬೆನ್ನು ಹತ್ತಿದಳು. ಉಳಿದವರು ದೂರ ಸರಿದರು.

–ಅಹುದು ಮರ್ಯಾದೆ ಮುಚ್ಚಲು ಒಂದು ಬಟ್ಟೆ ಕೊಡು. ಮಾತಿನಲ್ಲಿ ಭಿಕ್ಷುಕರಿಗೂ ಅಸಹ್ಯವಾದ ದಯೆಯಿದ್ದಿತು.

–ನಾನು ಭಿಕ್ಷುಕಿಯು ನನ್ನಲ್ಲಿ ಏನಿರಬೇಕು. ಹರಕು ಚಿಂದಿ. ನಿನ್ನ ಮೈಗೆ . . .

–ಅದನ್ನೇ ಕೊಡು. ಇಬ್ಬರೂ ಸ್ತ್ರೀಯರು ನನ್ನ ಅವಮಾನವನ್ನು ನೀನು ಸಹಿಸಲಾರೆ. ಎಂಥದಾದರೂ ಬಟ್ಟೆ ಎನಿಸಿದರೆ ಸರಿ. ಎಂದು ಅಂಗಲಾಚಿದಳು ಶಾಲ್ಮಲಿ.

ಭಿಕ್ಷುಕಿಯು ತಾನು ಶ್ರಮಪಟ್ಟು ಸಿದ್ಧಪಡಿಸಿದ ಚಿತ್ರವಿಚಿತ್ರ ಸೀರೆಯನ್ನು ಕೊಡುತ್ತ ನಿನಗೆ ಇದು ಒಗ್ಗಬಹುದೇ ತಾಯೀ? ಇದು ಭಿಕ್ಷಾವಸ್ತ್ರ.

— ಅದೇ ನನಗೆ ಭೂಷಣವೆನ್ನು ಎಂದು ಉಟ್ಟುಕೊಂಡಳು.

ಮುಕುಂದ ಚರಣನು ಭಿಕ್ಷುಕಿಯ ಗಂಡನ ಒಂದು ಲುಂಗಿಯನ್ನು ಸುತ್ತಿಕೊಂಡು ಬಂದನು.

ಅದುಹೋದಯ ಚಿಹ್ನವು ಕಂಡಿತು.

ಭಿಕ್ಷುಕಿಯು ಕಾಸಿಕೊಳ್ಳಲು ಒಂದಿಷ್ಟು ಬೆಂಕಿಯನ್ನು ಮಾಡಿದಳು. ನಾಲ್ವರೂ ಸುತ್ತುವರಿದು ಕಾಸಿಕೊಳ್ಳಹತ್ತಿದರು. ಮಾತಿನಲ್ಲಿ ಶ್ರೀಮಂತಿಕೆ–ಬಡತನದ ಚರ್ಚೆ ಇರಲಿಲ್ಲ. ದೈವೀಪ್ರಕೋಪವೇ ಎಲ್ಲರ ತಲೆಯನ್ನು ಸೇರಿ ಕಿಡಿಗಟ್ಟಿದ್ದಿತು.

ಶಾಲ್ಮಲಿಯು ಹಣೆಯ ಮೇಲಿನ ಕುರುಳುಗಳನ್ನು ತೀಡಿಕೊಳ್ಳುತ್ತ–ಈ ಸೀರೆಯನ್ನು ಎಲ್ಲಿ ಪಡೆದೆ ಅಕ್ಕ? ಎಂದು ಕೇಳಿದಳು.

–ಒಬ್ಬ ದಯೆಯ ತಾಯಿ ಕೊಟ್ಟಳು. ಎಂಟು ದಿನಗಳಿಂದ ಹೊಲಸು ಒಗೆದು ಬಚ್ಚಿಟ್ಟಿರುವೆ, ಇನ್ನೂ ಮೈಗೆ ಹಚ್ಚಿಲ್ಲ. ಅದು ನಿನಗೆ ಸಿಗಬೇಕೆಂದು ದೇವರ ಇಚ್ಛೆಯಿರಬೇಕು ತಾಯಿ ಎಂದಳು.

–ಸೀರೆಯು ಒಳ್ಳೆಯದಿದೆ ಎಂದು ಸೆರಗು ಎಳೆದು ಹಣೆಯ ಮೇಲಿನ ಬೆವರು ಒರಸಿಕೊಂಡಳು.

–ನೀನು ಉಟ್ಟಿದ್ದು ನನಗೆ ಸಂತೋಷ ತಾಯಿ! ಎಂದು ಊದಿ ಉರಿಯನ್ನು ಮಾಡಿದಳು

ಶಾಲ್ಮಲಿಯು ಸೀರೆಯ ಮೇಲೆ ಕೈಯಾಡಿಸುತ್ತ ಪರೀಕ್ಷಿಸಹತ್ತಿದಳು. ಅದು ತನ್ನದೇ! ಇಂಥ ನೂರು ಛಿದ್ರದ ಸೀರೆಯನ್ನು ಕೊಡುವ ಮುಂದೆ ಎಂಥೆಂಥ ಶಾಪ–ಕೋಪದ ಮಾತುಗಳನ್ನು ಆಡಿದ್ದಳು! ಭಿಕ್ಷಾದಯೆಯಿಂದಲೇ ನಿಮ್ಮ ವಂಶ ವೃದ್ಧಿಯೇನು? ಎಂದು ಪ್ರಶ್ನಿಸಿದ್ದಳು. ಅವೆಲ್ಲ ಮಾತು ನೆನಪಿಗೆ ಬಂದು ನಾಚಿಕೆ ಪಟ್ಟಳು.

ಕೊಟ್ಟದ್ದು ತನಗೆ– ಎಂಬ ಸರ್ವಜ್ಞನ ಮಾತು ನಿಜವಿದ್ದರೆ ಸತ್ತು ಸ್ವರ್ಗಕ್ಕೆ ಹೋಗಿ ನಿರೀಕ್ಷಿಸುವ ಅವಶ್ಯಕತೆಯಿಲ್ಲ. ಶಾಲ್ಮಲಿಯು ಸಿಟ್ಟಿನಿಂದ ಒಂದು ಕೊಟ್ಟರೂ ಎರಡು ಪಡೆದಿರುವಳು. ಆದರೆ ಭೂಕಂಪದಂತಹ ಪ್ರಸಂಗವನ್ನು ನಿರೀಕ್ಷಿಸುವವರಿಗೆ ನಾನು ಏನು ಹೇಳಬಲ್ಲೆ?

ದೇಶಾಂತರಗಳಿಂದ

ಮಾಲನ್ನರ ಮಾಯಾವಿತನ

ದ. ಆಫ್ರಿಕದ ಮುಖ್ಯ ಮಂತ್ರಿ ಮಾಲನ್ನರು ಅಕ್ಟೋಬರ್ ೧೧ಕ್ಕೆ ಲಂಡನ್ನಿನಲ್ಲಿ ಜರುಗಲಿರುವ ಸಾಮಂತ ಪ್ರಭುತ್ವಗಳ ಮುಖ್ಯ ಮಂತ್ರಿಗಳ ಸಮ್ಮೇಳನಕ್ಕೆ ದಯಮಾಡಿಸುವುದಿಲ್ಲವಂತೆ. ಏಕೆಂದರೆ ಅವರಿಗೆ ತಮ್ಮ ಸರಕಾರದ ಆಡಳಿತದಲ್ಲಿ ಬಹಳ ಗಡಿಬಿಡಿಯ ಕೆಲಸವಿದೆಯಂತೆ. ನಿಜವಾದ ಕಾರಣ ಬೇರೆಯೇ ಇದೆ: ಭಾರತ, ಪಾಕಿಸ್ತಾನ, ಸಿಂಹಳಗಳ ಮುಖ್ಯ ಮಂತ್ರಿಗಳ ಸಮ ಸಮ ಕುಳಿತುಕೊಳ್ಳಲು ನಾಜಿ ಬುದ್ಧಿಯ ಅವರಿಗೆ ಅಹಂಕಾರದ ಅವಮಾನ, ಗೌರವಕ್ಕೆ ಕುಂದು! ಅಲ್ಲದೆ ಅವರೆಲ್ಲ ಹಾಕುವ ಪ್ರಶ್ನೆಗಳಿಗೆ ಉತ್ತರ ಕೊಡುವ ಫಜೀತಿಯನ್ನು ಎದುರಿಸಲು ತಯಾರಿಲ್ಲ!

ಆಸ್ಟ್ರೇಲಿಯದ ಬಿಳಿಯ ಮುಖ್ಯ ಮಂತ್ರಿಯಂಥವರಿಗೂ ಡಾ. ಮಾಲನ್ನರ ಕುಲದ್ವೇಷ ವರ್ಣಭೇದಗಳು, ಸರಿಹೋಗಿಲ್ಲ. ನ್ಯೂಜಿಲೆಂಡ್ ಮತ್ತು ಕೆನಡ ಕೂಡ ಇದರಿಂದ ಬೇಸರಹೊಂದಿವೆ. ಡಾ. ಮಾಲನ್ನರು ಹೋಗಳಿದ್ದರೂ ಅವರ ಪ್ರತಿನಿಧಿಯಾಗಿ ಸಾಮಂತ ಮುಖ್ಯ ಮಂತ್ರಿ ಸಮ್ಮೇಳನಕ್ಕೆ ಶ್ರೀ ಹೇವಾಟರರನ್ನು ಕಳಿಸುತ್ತಾರಂತೆ. ವಾಟರನು ಕೂಡ ಲಂಡನ್ನಿಗೆ ತಲುಪಿದಾಗ ಅಲ್ಲಿ ತಮ್ಮ ಬಗ್ಗೆ ಇದ್ದ ಅಸಹಾನುಭೂತಿಯನ್ನು ಕಂಡು ನೀರಿಳಿದು ಹೋದನೆಂದು ಸುದ್ದಿ ಬಂದಿದೆ.

ಬರುವ ವರ್ಷ ಬರಲಿರುವ ನ್ಯೂಜಿಲೆಂಡಿನ ಕರಿಯಂಗಿಯ ರಗ್‌ಬಿ ಆಟಗಾರರ ಬಗ್ಗೆಯೂ ಅಸಹನೆ ತೋರಿದೆ. ಆಫ್ರಿಕದ ಬಿಳಿ ಸರಕಾರ. ಸುವರ್ಣರಾದ ಮೆಯೋರಿಗಳು ದಕ್ಷಿಣ ಆಫ್ರಿಕದಲ್ಲಿ ಕಾಲಿಡಕೂಡದೆಂದು ಅಧಿಕಾರಾರೂಢ ಬಿಳಿಯರ ಹೇಳಿಕೆ. ಅವರೊಡನೆ ದ. ಆಫ್ರಿಕದ ಡಚ್ ಮತ್ತು ಬ್ರಿಟಿಶ್ ವಸತಿಕಾರರು ಆಟವಾಡುವುದಿಲ್ಲವಂತೆ! ಇದನ್ನು ನ್ಯೂಜಿಲೆಂಡಿನ ಮೇಜರ್ ಜನರಲ್ ಸರ್ ಹೊವಾರ್ಡ್ ಕಿಪ್ಪೆನ್ ಬರ್ಜರರು ಪ್ರತಿಭಟಿಸಿರುವವರಲ್ಲದೆ, ಮೆಯೋರಿಗಳಿಗೆ ಅವಮಾನವೆಂದರೆ ಎಲ್ಲ ನ್ಯೂಜಿಲೆಂಡಿನ ಪ್ರಜೆಗಳಿಗೂ ಅವಮಾನವೆಂದು ಶ್ರೀ ಆರ್. ಚೈಲ್ಡ್ಸ್ ವಿರೋಧವನ್ನು ವ್ಯಕ್ತಪಡಿಸಿದ್ದಾರೆ.

ಡಾ. ಮಾಲನ್ನರ ಈ ದುರ್ವರ್ತನೆ ದುಷ್ಪ್ರವೃತ್ತಿಗಳಿಗೆ ತಕ್ಕ ಶಿಕ್ಷೆಯನ್ನು ವಿಧಿಸುವುದು ದಾಕ್ಷಿಣಾತ್ಯ ರಾಷ್ಟ್ರಗಳ ಕರ್ತವ್ಯವಾಗಿದೆ. ಜಗತ್ತಿನಲ್ಲೇ ಹೆಚ್ಚಿರುವ ಸುವರ್ಣರು ದುರ್ವರ್ಣರೆನಿಸಿದ ಮಾಲನ್ನರನ್ನೂ ಅವರ ಅನುಯಾಯಿಗಳನ್ನೂ ವಿವರ್ಣಗೊಳಿಸಲು ಸಾಮಂತಪ್ರಭುತ್ವಗಳ ಮುಖ್ಯಮಂತ್ರಿ ಸಮ್ಮೇಲನದಲ್ಲೂ ಸಂ. ರಾ. ಸಂಘದ ಪ್ಯಾರಿಸ್ಸಿನಲ್ಲಿ ನಡೆಯಲಿರುವ ಸಾಮಾನ್ಯ ಸಭೆಯಲ್ಲೂ ತಕ್ಕ ಕ್ರಮವನ್ನು ಕೈಕೊಳ್ಳುವುದು ಅತ್ಯವಶ್ಯವಾಗಿದೆ.

ಇತ್ತೀಚಿನ ಸುದ್ದಿಯ ಪ್ರಕಾರ ನೇಟಾಲ್ ಇಂಡಿಯನ್ ಕಾಂಗ್ರೆಸ್ಸಿನ ಅಧ್ಯಕ್ಷರಾ ಜಿ. ಎಂ ನಾಯ್ಕರರು ನಾಳೆ ಪ್ಯಾರಿಸ್ಸಿನಲ್ಲಿ ನಡೆಯಲಿರುವ ಸಂ. ರಾ. ಸಂಘದ ಸಭೆಗೆ ನಿಷ್ಕ್ರಿಯ ಪ್ರತೀಕಾರ ಸಮಿತಿಯಿಂದ ನಿಯುಕ್ತರಾಗಿ ಹೋಗಬೇಕೆಂದಿರುವಲ್ಲಿ ಅವರಿಗೆ ದಕ್ಷಿಣ ಆಫ್ರಿಕದ ಗೃಹಮಂತ್ರಿಗಳು ಅಪ್ಪಣೆಯ ಪತ್ರವನ್ನು ಕೊಡಲು ನಿರಾಕರಿಸಿದರು. ಇದನ್ನು ನೇಟಾಲಿನ ಹಿಂದೀ ಸಂಘವು ತೀವ್ರವಾಗಿ ಖಂಡಿಸುವ ಗೊತ್ತುವಳಿಯನ್ನು ಸ್ವೀಕರಿಸಿ ಅದರ ಪ್ರತಿಗಳನ್ನು ಮುಖ್ಯಮಂತ್ರಿ ಮಾಲನ್, ಸಂ. ರಾ. ಸಂಘದ ಪ್ರಧಾನ ಕಾರ್ಯದರ್ಶಿ ಟ್ರೈಗ್ರೀವ್ ಲೈ ಮತ್ತು ಭಾರತ, ಪಾಕಿಸ್ತಾನ, ಬ್ರಿಟನ್ನುಗಳ ಮುಖ್ಯ ಮಂತ್ರಿಗಳಿಗೆ ಕಳಿಸಿದೆ.

ಚಿಯಾಂಗರ ಪ್ರತ್ಯಸ್ತ್ರ

ಶರತ್ಕಾಲದಲ್ಲಿ ಕೆಂಪು ಸೈನಿಕರನ್ನು ಮೂಲೋತ್ಪಾಟನ ಮಾಡಲು ತಕ್ಕ ಯೋಜನೆಯನ್ನು ರಚಿಸಲು ಸರಕಾರೀ ಸೇನಾಪತಿಗಳೆಲ್ಲ ಸೇರಿ ವಿಚಾರ ನಡೆಸಿದ್ದಾರೆ ಎಂದು ವಾರ್ತೆ ಬಂದಿದೆ. ಈ ಯೋಜನೆಯು ಮಧ್ಯ ಚೀನದಲ್ಲಿ ಎದುರಾಗುವ ಕಮ್ಯುನಿಸ್ಟರನ್ನು ಹೊಡೆದೋಡಿಸುವುದರ ಸಲುವಾಗಿಯೇ ರಚಿತವಾಗುತ್ತಿದೆಯಂತೆ. ಮಧ್ಯ ಚೀನವೆಂದರೆ, ಹೋನಾನ್, ಶಾಂಟಂಗ್, ಕಿಯಂಗ್ಸು, ಅನ್‌ಹ್ವೇ ಮತ್ತು ಹೂಪೆ ಪ್ರಾಂತಗಳು.

ಹೊನಾನಿನ ರಾಜಧಾನಿಯಾದ ಕೈಫೆಂಗಿನಲ್ಲಿ ೬ ತಿಂಗಳೊಳಗೆ ಪರಿಸ್ಥಿತಿಯನ್ನು ಹದಕ್ಕೆ ತರಲಾಗುವದೆಂದು ಸರಕಾರೀ ಸಂರಕ್ಷಣ ಶಾಖೆಯ ಜನರಲ್ ತೆಂಗ್ ವೆನ್‌ಯೀ ಸಾರಿದ್ದಾರೆ.

ಶಾಂಟಂಗಿನ ರಾಜಧಾನಿಯಾದ ಶ್ರೀನಾನಿನಲ್ಲಿ ೨೦ ಲಕ್ಷ ಕಮ್ಯುನಿಸ್ಟ ಸೈನಿಕರು ಕೂಡುತ್ತಿದ್ದಾರೆ, ಮತ್ತು ಜನರಲ್ ನೀ ಯಂಗ್‌ಗಿಂಗರ ಕೈಕೆಳಗೆ ೩ ಸೈನ್ಯಗಳು ಅಲ್ಲಿಗೆ ಬರುತ್ತಿವೆ.

ಪೀಪಿಂಗಿಗೆ ೩೦ ಮೈಲು ದೂರದಲ್ಲಿ ಮತ್ತೊಂದು ಕೆಂಪುಸೈನ್ಯವನ್ನು ರಚಿಸಲಾಗಿದೆ. ಶಾಂಗ್‌ಶಾನಿನ ಕಲ್ಲಿದ್ದಲು ಗಣಿಗಳ ಸುತ್ತು ಮುತ್ತು ಮಂಚೂರಿಯದ ಮುಖ್ಯ ಸೇನಾಪತಿಯಾದ ಜನರಲ್ ಲಿನ ಪಿಯಾವೋನ ೩ ಸೈನ್ಯಗಳು ರೈಲುದಾರಿಗೆ ಸನಿಹದಲ್ಲಿ ಸಿದ್ಧವಾಗಿ ನಿಂತಿವೆ.

ಫ್ರಾನ್ಸಿನಲ್ಲಿ ಹೊಸ ಮಂತ್ರಿಮಂಡಲ

ಎಂ. ಹೆನ್ರಿ ಕ್ವೀಲರು ರ್‍ಯಾಡಿಕಲ್ ಪಕ್ಷದವರು. ಇವರು ಮುಖ್ಯ ಮಂತ್ರಿಗಳಾಗಿ ಹಣಕಾಸಿನ ಶಾಖೆಯನ್ನು ವಹಿಸಿಕೊಂಡು ಉಪ ಮುಖ್ಯ ಮಂತ್ರಿಗಳನ್ನಾಗಿ ಸ್ವಪಕ್ಷದ ಎಂ. ಮಾರ್ಕ್ವಿಯವರಿಗೆ ನ್ಯಾಯಸಚಿವ ಪದವಿಯಿತ್ತು, ವಿದೇಶಶಾಖೆಯನ್ನು ಪಾಪ್ಯುಲರ್ ರಿಪಬ್ಲಿಕನ್ನರೆನಿಸಿದ ಶೂಮನ್ನರಿಗೆ ಒಪ್ಪಿಸಿದರು. ಎಂ. ರಮೇದಿಯೆರನ್ನು ಕೂಲಿಕಾರ ಮಂತ್ರಿಯನ್ನಾಗಿಯೂ ಸೋಶಲಿಸ್ಟರಾದ ಎಂ ಮಾಕರನ್ನು ಗೃಹಮಂತ್ರಿಯನ್ನಾಗಿಯೂ ಹೊಸ ಮಂತ್ರಿಮಂಡಲದಲ್ಲಿ ಸೇರಿಸಿಕೊಳ್ಳಲಾಗಿದೆ.

ಈ ಹೊಸ ಮಂತ್ರಿಮಂಡಲವು ಕಳೆದ ಏಳು ವಾರಗಳಲ್ಲಿ ನಾಲ್ಕನೆಯದು, ಬಿಡುಗಡೆಯ ಕಾಲದಿಂದ ೧೨ನೆಯದು. ಇದು ಹುಟ್ಟಿದ ಮರುಗಳಿಗೆಯಲ್ಲಿ ಎಲ್ಲ ಕೂಲಿಯ ಪುನಃ ಪರಿಶೀಲನೆಗಾಗಿ ರಾಷ್ಟ್ರೀಯ ಆಂದೋಲನ ನಡೆವ ಭಯ ಅದನ್ನು ಎದುರಿಸಿದ್ದರಿಂದ ಅದರ ನಿರೀಕ್ಷಿತ ಆಯುಃಪ್ರಮಾಣ ಕಡಿಮೆಯಾಗುವಂತಾಯಿತೆಂದು ನಿರೀಕ್ಷಕರು ಅಭಿಪ್ರಾಯಪಡುತ್ತಾರೆ.

ದಕ್ಷಿಣ ಫ್ರಾನ್ಸಿನಲ್ಲಿ ಸಾವಿರ ಮೈಲು ಪ್ರವಾಸವನ್ನು ಪ್ರಚಾರಕ್ಕಾಗಿ ಕೈಕೊಂಡ ಜನರಲ್ ಡಿಗಾಲೆ ಸಂಚು ಹೊಂಚಿನ ಇಂಥ ಮಂತ್ರಿಮಂಡಲಗಳು ಹೇಯ ಎಂದು ತಿರುಗುತ್ತಿದ್ದಾನೆ. ಆದುದರಿಂದ ಈ ಹೊಸ ಮಂತ್ರಿಮಂಡಲ ಚಿರಂಜೀವಿಯಾಗಬಲ್ಲುದೆಂಬುದರಲ್ಲಿ ಸಂಶಯವೆದ್ದಿರುವುದೂ ಸಹಜವಾಗಿದೆ.

ಹೊಸ ಬ್ರಸ್ಸೆಲ್ಸ್ ಮಂತ್ರಿಮಂಡಲ

ಥಾಕಿನ್‌ನೂ ಅವರು ಹೊಸ ಮಂತ್ರಿಮಂಡಲದ ಮುಖ್ಯ ಮಂತ್ರಿಗಳಾಗಿ ಸಂರಕ್ಷಣ ಮತ್ತು ಗೃಹಶಾಖೆಗಳ ಆಡಳಿತವನ್ನು ವಹಿಸಿಕೊಂಡರು. ಸೋಶಾಲಿಸ್ಟ್ ಪಂಥದ ಕ್ಯಾನ್ಯೆಯನ್ನರು ಉಪ ಮುಖ್ಯಮಂತ್ರಿಗಳಾಗಿ ವಿದೇಶಶಾಖೆಯ ಆಡಳಿತವನ್ನು ಕೈಗೆ ತೆಗೆದುಕೊಂಡರು.

ಮೇಲಿನವರಲ್ಲದೆ ಇನ್ನು ೧೮ ಜನರು ಮಂತ್ರಿಮಂಡಲದ ಬೇರೆ ಬೇರೆ ಶಾಖೆಗಳ ಆಡಳಿತದಲ್ಲಿ ನಿಯುಕ್ತರಾಗಿದ್ದಾರೆ. ಬೊಹ್ಮೊ ಅಂಗರನ್ನು ಮಂತ್ರಿಮಂಡಲ ವಿಶಾಲ ಪ್ರಾತಿನಿಧ್ಯವುಳ್ಳದ್ದಿರಬೇಕೆಂದು ತೆಗೆದುಕೊಳ್ಳಲಾಗಿದೆಯಲ್ಲದೆ ಮಿಕ್ಕವರೆಲ್ಲ ಮೊದಲಿನ ಮಂತ್ರಿಮಂಡಲದಲ್ಲಿ ಮಂತ್ರಿಗಳಾಗಿ ಕೆಲಸ ಮಾಡುತ್ತಿದ್ದವರೇ ಆಗಿದ್ದಾರೆ.

ಲಂಡನ್ನಿನ ಪಾರ್ಲಿಮೆಂಟಿನ ಎರಡೂ ಮನೆಗಳಲ್ಲಿ ಇಂಗ್ಲೆಂಡಿನ ಅರಸರು ತಮ್ಮ ಮಂತ್ರಿಗಳು ಸಂಯುಕ್ತ ಮಲಯದಲ್ಲಿ ಈಗ ನಡೆಯುತ್ತಿರುವ ದಂಗೆ ದಾಳಿಗಳನ್ನು ಉಗ್ರೋಪಾಯವನ್ನು ಕೈಕೊಳ್ಳಲು ನಿರ್ಧರಿಸಿದ್ದಾರೆಂದು ತಾವು ಓದಿದ ತಮ್ಮ ಭಾಷಣದಲ್ಲಿ ಹೇಳಿದರು.

ಬರ್ಲಿನ್ ಮಾತುಕತೆಯಲ್ಲಿ [illegible] ?

ಮಾತುಕತೆಯಿಂದ ಬರ್ಲಿನ್ ಬಿಕ್ಕಟ್ಟನ್ನು ಬಗೆಹರಿಸಲಾಗಲಿಲ್ಲವೆಂದು [illegible] ಪಾಶ್ಚಾತ್ಯ ಪ್ರಭುತ್ವಗಳು ಕಡೆಯ [illegible] ರಶಿಯಾ ಸಮಾಧಾನಕರವಾದ ಒಪ್ಪಂದ ಮಾಡಿಕೊಂಡು ಬಿಕ್ಕಟ್ಟನ್ನು ಬಗೆಹರಿಸದಿದ್ದರೆ ಹಾಗಾದರೂ ಸಂಯುಕ್ತ [illegible] ತೀರಿಸಿಕೊಳ್ಳಬೇಕಾಗಬಹುದು ಎಂದು ಹೇಳತೊಡಗಿವೆ.

ಆದರೆ ರಶಿಯದ ಸ್ಥಾನ ಬರ್ಲಿನ್ನಿನಲ್ಲಿ ಬಹಳ ಭದ್ರವಿರುವುದರಿಂದ ಪಾಶ್ಚಾತ್ಯ ಪ್ರಭುತ್ವಗಳು ತಮ್ಮ ಮುಖದಿಂದ ರಶಿಯಕ್ಕೆ ಏನನ್ನೂ ಮಾಡಲಾರವಲ್ಲದೆ ಹಾಗೆ ಮಾಡಹೋದಲ್ಲಿ ಅಲ್ಲಿಂದ ಸಂಪೂರ್ಣ ಉಚ್ಚಾಟನೆ ಹೊಂದಬೇಕಾದ ಪ್ರಸಂಗ ಬರಬಹುದು. ಅವುಗಳ ಕಡೆಯ ಪ್ರಯತ್ನವೆಂದರೆ ಸಂಯುಕ್ತ ರಾಷ್ಟ್ರಸಂಘದೆದುರು ಈ ಪ್ರಶ್ನೆಯನ್ನಿಟ್ಟು ಹೆದರಿಕೆ ಹಾಕುವುದೊಂದೇ. ಆದರೆ ಅಲ್ಲಿಯೂ ಮನಸ್ಸು ಮಾಡಿದರೆ ರಶಿಯ ಉಕ್ಕಿನ ತಂಬದಂತೆ "ಅಚಲೋಯಂ ಸನಾತನಃ" ಆಗಿ ಉಳಿಯಬಹುದೆಂಬ ಭೀತಿ ರಾಜಕಾರಣಿಗಳಿಗೆ ಚಳಿ ಹಿಡಿಸಿದೆ!

ಒಂದು ಸಾವಿರ ಅಮೇರಿಕನ್ ಸೈನಿಕರೂ ೩೦ ಸಶಸ್ತ್ರ ಕಾರುಗಳೂ ಕಮ್ಯುನಿಸ್ಟ್ ಮಹಾಮೇಲ ನಡೆಯಲಿದೆಯೆಂದು ಸಿದ್ಧವಾಗಿ ಬರ್ಲಿನ್ನಿನ ಅಮೇರಿಕದ ವಿಭಾಗದಲ್ಲಿ ಕಾದು

ಬರ್ಲಿನ್ ರಶಿಯನ್ ವಿಭಾಗದ [illegible] [illegible] ಹಿಂದೆ ದೂಡ [illegible].

ಬೇಸತ್ತು ಹಿಂದೆ ಹೋದರು. ಅದೇ ಕೆಲ ಹೊತ್ತಿನಲ್ಲಿ ಬರ್ಲಿನ್ನಿನ ರಶಿಯನ್ ವಿಭಾಗದಲ್ಲಿ ೩ ಲಕ್ಷ ಜನರು ಸೇರಿ ಬರ್ಲಿನ್ ಕಮ್ಯುನಿಸ್ಟರು ಕರೆದ ಸಮ್ಮೇಲನದಲ್ಲಿ ಭಾಗವಹಿಸಿದರು. ಇದು ಬರ್ಲಿನ್ನಿನ ಬ್ರಿಟಿಶ್ ವಿಭಾಗದಲ್ಲಿ ಹಿಂದೆ ನಡೆದಿದ್ದ ಕಮ್ಯುನಿಸ್ಟ್ ವಿರುದ್ಧ ಪ್ರಚಾರ ಸಭೆಗೆ ಪ್ರತೀಕಾರ ಮಾಡಲೆಂದೇ ಸೇರಿತ್ತು. ಇದರಲ್ಲಿ ರಶಿಯ, ಯುಗೋಸ್ಲೇವಿಯ, ಆಸ್ಟ್ರಿಯ, ಸ್ವತಂತ್ರ ಸ್ಪೇನ್ ಮತ್ತು ಸ್ವತಂತ್ರ ಗ್ರೀಸುಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಬರ್ಲಿನ್ನಿನ ವಿಮಾನ ನಿಲ್ದಾಣದಲ್ಲಿ ವಿಮಾನ ಮಾರಕ ಗುಂಡು ಹಾರಿಸಿದ ಸುದ್ದಿಯು ಬಂದಿದೆ. ಇದಕ್ಕೆ ಪಾಶ್ಚಾತ್ಯ ಪ್ರಭುತ್ವಗಳ ಪ್ರತಿಕ್ರಿಯೆ ಯೇನೆಂಬುದು ಇನ್ನೂ ತಿಳಿದು ಬಂದಿಲ್ಲ.

ಜೆರೂಸಲೇಮಿನಲ್ಲಿ ಚಕಮಕಿ

ಜೆರೂಸಲೇಮಿನ ಯಹೂದಿ ಜಿಲ್ಲೆಯಲ್ಲಿ ಅರಬರು ಗುಂಡು ಹಾರಿಸಿದರು. ಅದರಿಂದ ೫ ಮಂದಿ ಮಡಿದರು. ಇದರ ಮೇಲೆ ನಗರದ ಉತ್ತರ ಭಾಗದ ಯೆಹೂದಿ ವಸತಿಸ್ಥಳಗಳಲ್ಲಿಯೂ ಅರಬರು ಪದೆ ಪದೇ ಗುಂಡು ಹಾರಿಸುತ್ತಲಿದ್ದುದಾಗಿ ಸುದ್ದಿಯಿದೆ. ಇದನ್ನು ಪ್ರತೀಕರಿಸಲು ಯೆಹೂದಿಗಳೂ ಗುಂಡು ಹಾರಿಸಿದರು. ಇದರಿಂದ ೨೩ ಜನ ಸಾಮಾನ್ಯ ಪ್ರಜೆಗಳೂ ೩ ಜನ ಸೈನಿಕರೂ ಗಾಯಗೊಂಡರೆಂದು ಅರಬರ ವರದಿಯಿದೆ. ಕಾಸ್ಪಿರ್, ಸಿರಿಯನ್ ಮತ್ತು ಅಮೇರಿಕನ್ ಕಾನ್ಸೆಂಟುಗಳೂ ಈ ಗುಂಡುಗಳಿಗೆ ಬಲಿಯಾದವಂತೆ. ೫ ತಾಸು ಈ ರೀತಿ ಯೆಹೂದಿಗಳು ಎಡೆಬಿಡದೆ ಅಗ್ನಿವೃಷ್ಟಿಯನ್ನು ಸುರಿಸಿದರೆಂದು ಅರಬ ಸೈನಿಕವರ್ಗದವರ ಹೇಳಿಕೆ.

ಅಮೇರಿಕದ ಅಧ್ಯಕ್ಷ ಟ್ರೂಮನ್ನರು ಜಿನ್ನಾ ಸಾಹೇಬರ ಮರಣಕ್ಕಾಗಿ ವಿಷಾದ ಸಂದೇಶವನ್ನು ಪಾಕಿಸ್ತಾನಕ್ಕೆ ಕಳಿಸಿದರು.

ನಗೆಯ ಸೋರೆ

ಬಡಿದ ತಂಪ ಕಡೆ !

[illegible] ಅವರ [illegible] [illegible] ತಾಳಲಾರದೆ ಜನರು [illegible]. ಒಮ್ಮೆ ಮೂರು [illegible] ತಲೆಯನ್ನು ಒಡೆದಾಗ ಗೋಳಾಡಿ [illegible]. [illegible] ಒಂದು ವಿಧದ [illegible] ಇದ್ದುದು ಕಾಣಿಸಿತು. ಅದು [illegible] ಎಂದು ತಿಳಿದು [illegible] ಅದನ್ನು ಮಾಂಸದ ಮೇಲೆ ಇಟ್ಟು [illegible] ಎಂದು ತಿಂದು [illegible]. ಅನಂತರ ಆಸ್ಟ್ರೇಲಿಯದಿಂದ ಅವರಿಗೊಂದು ಕಾಗದ ಬಂದಿತು—"ನಿಮ್ಮ [illegible] [illegible] ತೀರಿಹೋದರು; [illegible] ಅವರ ಬೂದಿಯ ಮೂರನೆಯ ಒಂದಂಶವನ್ನು ನಿಮಗೆ ಜ್ಞಾಪಕಾರ್ಥವೆಂದು ಕಳಿಸಲಾಗಿದೆ. ಜಾಗ್ರತೆ" ಎಂದು. ಅದನ್ನೋದಿ ಮುದುಗಿಯರು ಬೆಚ್ಚಿದರು !

ಹಳೆಯ ಸಮಸ್ಯೆ

ಫ್ಲೋರೆನ್ಸಿನಲ್ಲಿ ಒಬ್ಬ ವಿದೂಷಕನಿದ್ದನು. ಒಮ್ಮೆ ನಗರದಲ್ಲಿ ಸಿಪಾಯಿಗಳು ಸಾಲು ಸಾಲಾಗಿ ಹೋಗುತ್ತಿದ್ದುದನ್ನು ಕಂಡು ಅದೇಕೆಂದು ಅವನು ಗೆಳೆಯನನ್ನು ಕೇಳಿದನು.

ಗೆಳೆಯ—ಪೈಸಾದ ಮೇಲೆ ಯುದ್ಧ ಸಾರಲಾಗಿರುವುದು ನಿನಗೆ ಗೊತ್ತಿಲ್ಲವೆ ?

ವಿದೂಷಕ—ಆದರೆ ಈ ಯುದ್ಧವು ಶಾಂತಿಯಲ್ಲಿ ಕೊನೆಗೊಳ್ಳುವುದಿಲ್ಲವೆ ?

ಗೆ—ಯುದ್ಧ ಈಗ ತಾನೆ ಶುರುವಾಗಿದೆ; ಶಾಂತಿಯ ಮಾತನ್ನು ಹೇಗೆ ಎತ್ತುತ್ತೀಯಪ್ಪಾ ?

ವಿ—ಆದರೂ ಕೂಡ ಒಂದಲ್ಲ ಒಂದು ದಿನ ಶಾಂತಿ ನೆಲೆಸಲೇಬೇಕಲ್ಲವೆ ?

ಗೆ—ಆಗಲಿ, ಯುದ್ಧವೇನೂ ಸದಾಕಾಲ ಬರತಕ್ಕದ್ದಲ್ಲವೆಂಬುದು ಗೊತ್ತು. ಒಂದಲ್ಲಒಂದು ದಿನ ಶಾಂತಿಯುಂಟಾಗುವುದು ನಿಜವೇ, ಆದರೆ ಈಗ ಯುದ್ಧ ನಡೆದಿದೆ ಅಷ್ಟೆ.

ವಿ— ಹೇಗೇ ಆಗಲಿ ಶಾಂತಿಗೆ ಬರಲೇಬೇಕಾಗಿರುವುದರಿಂದ ಯುದ್ಧ ಶುರುವಾಗುವುದರ ಮೊದಲು, ಅಂದರೆ ಈಗಲೇ ನಾವು ಶಾಂತಿ ಮಾಡಿಕೊಳ್ಳಬಾರದೇಕೆ ?

ವಕೀಲಿಯ ಗತ್ತು

ತಾರುಣ್ಯದಲ್ಲಿ ಏಬ್ರಹ್ಯಾಂ ಲಿಂಕನ್ನನು ವಕೀಲಿ ಮಾಡುತ್ತಿದ್ದನು. ಒಂದು ಕೋರ್ಟಿನಲ್ಲಿ ಅವನು ಒಮ್ಮೆ ಎರಡು ವ್ಯಾಜ್ಯಗಳನ್ನು ವಾದಕ್ಕೆ ತೆಗೆದುಕೊಂಡನು. ಅವುಗಳಲ್ಲಿ ಕಾಯಿದೆಯ ಒಂದೇ ಅಂಶವನ್ನು ಬೆಳಗ್ಗೆ ಮಂಡಿಸಿ ಗೆದ್ದು ಮಧ್ಯಾಹ್ನ ಮತ್ತೊಂದು ವ್ಯಾಜ್ಯದ ಸಮರ್ಥನೆಗಾಗಿ ಅವನು ಅದನ್ನು ಖಂಡಿಸಿದನು. ಇದನ್ನು ನ್ಯಾಯಾಧೀಶರು ಹೀಗೆ ವಿರುದ್ಧ ಮತ ಹಿಡಿದು ವಾದಿಸಿದ್ದರ ಅರ್ಥವೇನೆಂದು ಕೇಳಿದರು. ಅದಕ್ಕೆ ಲಿಂಕನ್ನನು—'ಮಾನ್ಯರೆ, ನಾನು ಬೆಳಗ್ಗೆ ತಪ್ಪು ಮಾತಾಡಿರಬಹುದು, ಆದರೆ ಈಗ ಮಾತ್ರ ನಾನು ನ್ಯಾಯವಾಗಿ ಮಾತಾಡಿದ್ದೇನೆ ಎಂದು ನನಗೆ ಖಾತ್ರಿಯಿದೆ' ಎಂದನಂತೆ !

ಸಮತೋಲ


ಇಂಗ್ಲೆಂಡಿನ ಹೇಸ್ ಪಟ್ಟಣದ ಕಿರಾಣಿ ಅಂಗಡಿಯೊಳಕ್ಕೆ ತಪ್ಪಿಸಿಕೊಂಡು ತಿರುಗುತ್ತಿದ್ದ ಕುದುರೆಯೊಂದು ನುಗ್ಗಲು ಬಂದಿತು. ಆಗ ಅಂಗಡಿಯ ಒಡತಿಯಾದ ಶ್ರೀಮತಿ ಎಲಿಜಾರ್ಡ್‌ಳು ಒಮ್ಮೆಲೇ ಹಾರಿ ಅದರ ಕುತ್ತಿಗೆ ಹಿಡಿದುಕೊಂಡು ತೀರಾದಿ [illegible] ಅದರ ಒಡೆಯ ಬರುವವರೆಗೆ ಹಿಡಿದುಕೊಂಡಿದ್ದಳಂತೆ!

ಉಪದೇಶ—ಆಚಾರ

ಬಫೆಲೋ ಪಟ್ಟಣದಲ್ಲಿ ಅಗ್ನಿಶಾಮಕ ದಳದ ಮುಖ್ಯಾಧಿಕಾರಿ ರೀಹೇನನು ಅಗ್ನಿಶಾಮಕದ ಒಂದು ಶಿಬಿರದಲ್ಲಿ ಕುಳಿತಿದ್ದಾಗ ಹೊಗೆಯ ವಾಸನೆ ಬಂದಿತು. ಅತ್ತಿತ್ತ ನೋಡಿ ತನ್ನ ಕೈತಾನು ಬಗ್ಗಿದಾಗ ತನ್ನ 'ಸಿಗರೇಟ್' ಬೆಂಕಿ ಹತ್ತಿದ್ದನ್ನು ಕಂಡ !

ಮೂಲಭೂತ ಹಕ್ಕು

ರೂಥರ್‌ಫರ್ಡೋರ್ನಿನಲ್ಲಿ ೩೬ ಪೌಂಡುಗಳ ಒಬ್ಬ ಮನುಷ್ಯನಿಗೆ ನ್ಯಾಯಾಲಯದಲ್ಲಿ ಸುಂಕವನ್ನು ವಸೂಲಿ ಮಾಡಲಾಯಿತಂತೆ. ಅವನಿಗೆ ತಕ್ಕ ಕುರ್ಚಿಯನ್ನು ಕುಡುಕರುಗಳ ಅಧಿಕಾರಿಗಳಿಗೆ ಅಶಾಧ್ಯವಾಯಿತಂತೆ!



ನಮ್ಮ ಸ್ವಾತಂತ್ರ್ಯ

ಅಧುನಿಕ ನಾಗರಿಕತೆಯ ಗುಣಾವಗುಣಗಳು ಸಂಪೂರ್ಣವಾಗಿ ತೋರುವ ನಾಡೆಂದರೆ ಅಮೇರಿಕ. ಪಟ್ಟಣಗಳಲ್ಲಿ ಪುರುಷರು ಗಳಿಸುವ ಯಂತ್ರಗಳೂ ಸ್ತ್ರೀಯರು ಗಳಿಸಿದರೂ ತಾವೇ ಒಂದು ಬೆಲೆ ಬಾಳುವ ಒಡವೆಯೆಂದು ತಿಳಿದು ಗಂಡನನ್ನು ನಾನಾ ವಿಧದಿಂದ ಪೀಡಿಸಿ ನೋಯಿಸಿ, ಕಡೆಗೆ ಯಾವುದೂ ಸಾಧ್ಯವಾಗದಿದ್ದಲ್ಲಿ ಕವ್ವಾದರೂ ಧನಾಪಹಾರ ಮಾಡುವವರೂ ಆಗಿದ್ದಾರೆಂದು ಅಲ್ಲಿಯ ಪತ್ರಿಕೆಗಳಲ್ಲಿ ವಿವರವಾಗಿ ಉಲ್ಲೇಖಿಸಲಾಗಿದೆ.

ಅಂಗಡಿ, ಕಾರಖಾನೆ, ಹೋಟೇಲು, ಕಾರ್ಯಾಲಯ ಇತ್ಯಾದಿಗಳಲ್ಲಿ ಗಿರಾಕಿಗಳಿಗೆ ಸೇವೆಸಲ್ಲಿಸಲು ಆರ್ಥಿಕ ಸ್ವಾತಂತ್ರ್ಯದ ಹೆಸರಿನಲ್ಲಿ ಪಟ್ಟಣದ ಹುಡುಗಿಯರು ಚಾಕರಿಗೆ ನಿಲ್ಲುತ್ತಾರೆ. ಆದರೆ ಅವರ ಆಸೆಗಳು ಅವರ ಗಳಿಕೆಗೆ ಮಿಗಿಲಾಗಿರುವುದರಿಂದ ಅವನ್ನು ಪೂರೈಸಿಕೊಳ್ಳಲು ಮೇಲೆ ಹೇಳಿದ ನಾನಾ ಮಾರ್ಗಗಳನ್ನು ಅವರು ಹಿಡಿದು ತಮ್ಮ ಅನೀತಿಮುಕ್ತಿಯನ್ನು ವಿದ್ಯೆಯಿದ್ದರೂ ವಿಚಾರವಿಲ್ಲದ ಮಂದಮತಿತ್ವವನ್ನು ವ್ಯಕ್ತಪಡಿಸಿದ್ದಾರೆ. ತಾವು ವಯಸ್ಸಾದವರಿದ್ದರೂ ಚಿಕ್ಕವರೆಂದೇ ಹೇಳುವುದು, ಕುರೂಪಿ ಇದ್ದರೂ ಹುಡುಗರು ಸುಂದರಿ ಎಂದು ಹೇಳಬೇಕೆಂದು ಅಪೇಕ್ಷಿಸುವುದು, ದುಡ್ಡಿದ್ದರೂ ಗಂಡಂದಿರಿಂದ ಒಡವೆ ವಸ್ತುಗಳನ್ನು ಏನಕೇನ ಪ್ರಕಾರೇಣ ಕಸಿಯಬೇಕೆಂದು ಪ್ರಯತ್ನಿಸುವುದು, ತಮಗೆ ಮಾತ್ರ ಸುಖವಾಗುವಂತೆ ನಡೆದುಕೊಂಡೂ ಗಂಡಂದಿರಿಗೆ ತಮ್ಮಿಂದಲೇ ಸರ್ವ ಸುಖವೆಂದು ತಿಳಿದು ಅವರ ತಪ್ಪುಗಳನ್ನೇ ಎತ್ತಿ ಆಡುವುದು, ಮನೆಮಠ ಮಕ್ಕಳು ಮರಿಗಳ ಬಗ್ಗೆ ಗಂಡಂದಿರಿಗಲ್ಲದೆ ತಮಗೆ ಯಾವ ಜವಾಬ್ದಾರಿಯೂ ಇಲ್ಲೆಂದೂ ತಿರುಗುವ ಚಂಚಲೆಯರು ಪಟ್ಟಣಗಳಲ್ಲಿ ಕಾಣಬರುತ್ತಾರೆ. ಹಳ್ಳಿಗಳಲ್ಲಿ ನಿಜವಾಗಿ ಹೆಣ್ತನದ ಸರ್ವ ಹೊಣೆಯನ್ನು ಹೊತ್ತು ಗಂಡಸಿನ ಕರ್ತವ್ಯವನ್ನು ಕೂಡ ಕೆಲವೊಮ್ಮೆ ನಿರ್ವಹಿಸಬಲ್ಲ ತರುಣಿಯರು ಇರುವುದು ಅಭಿಮಾನಾಸ್ಪದವಾದರೂ ಜಗತ್ತಿನ ಕಣ್ಣಿಗೆ ಮೊದಲು ಬೀಳುವವರು ಪಟ್ಟಣಿಗರೇ. ಈ ದೃಷ್ಟಿಯಿಂದ ಪಟ್ಟಣದ ಸುಂದರಿಯರು ಮೇಲಿನಂತೆ ಬಣ್ಣದ ಬೀಸಣಿಗೆಗಳಾಗಿ ಕ್ಷಣಿಕ ಸುಖ ಮತ್ತು ದೀರ್ಘಕಾಲಿಕ ದುಃಖವನ್ನು ಅನುಭವಿಸುತ್ತಾರೆ.

ಚಾಕರಿಗಾದರೂ ತರುಣಿಯರನ್ನಲ್ಲದೆ ವಯಸ್ಸಾದವರನ್ನು ಯಾರೂ ಬೇಡೆನ್ನರು. ಹೆಂಡತಿಯಾಗುವುದು ಅಲ್ಪವೆಂದು ತಿಳಿದು ಅನ್ಯರ ಚಾಕರಿಯಲ್ಲಿ, ಅದು ಹೆಚ್ಚೆಂದರೆ ೧೦-೧೫ ವರ್ಷ, ಕಡೆಗೆ ಅವಳನ್ನು ಯಾರೂ ಇಟ್ಟುಕೊಳ್ಳರು–ಪದವೀಧರೆಯಿದ್ದರೂ ವಾರಕ್ಕೆ ಹೆಚ್ಚೆಂದರೆ ಕೇವಲ ೨೫ ಡಾಲರುಗಳನ್ನು ಅಮೇರಿಕದ ತರುಣಿ ಸಂಪಾದಿಸುತ್ತಾಳೆ. ಮತ್ತು ಆ ಅಭಿಮಾನದಿಂದ ಮದುವೆಯಾಗದೆ ಅನೀತಿಯಲ್ಲಿರುವುದು ಅಥವಾ ವಿವಾಹ ವಿಚ್ಛೇದಗಳನ್ನು ಮಾಡಿಕೊಳ್ಳುತ್ತ ಬಾಳುವುದು–ಇಂಥ ಸ್ವಪರದುಃಖಕಾರಕ ವೃತ್ತಿಯನ್ನು ಕೈಕೊಂಡಿದ್ದಾಳೆ. ಇದರಿಂದ ಗೃಹನಾಶ, ಪುತ್ರಾದಿಗಳ ಸಂಸ್ಕಾರಕ್ಕೆ ವಿಘ್ನ ಇವು ಸಂಭವಿಸಿ ಸಮಾಜವೇ ಅದೃಢವಾಗುತ್ತಿದೆಯೆಂದು ಅಲ್ಲಿಯ ಬುದ್ಧಿವಂತ ಮಹಿಳೆಯರು ಭಯಗ್ರಸ್ತರಾಗಿದ್ದಾರೆ.

ಅಂಗಡಿಗಳಲ್ಲಿ ಕೆಲಸಗಾತಿಯರಾಗಿದ್ದರೂ ಸರಿ, ಗಿರಾಕಿಗಳಾಗಿ ಹೋದರೂ ಸರಿ, ಹಣವಿದ್ದಾಕೆ ಕೂಡ ಸಾಮಾನ್ಯವಾಗಿ ಚಿಕ್ಕ ದೊಡ್ಡ ಆಕರ್ಷಕ ಒಡವೆಗಳನ್ನು ಕಳುವಾಕೆ ಸ್ವತಃ ಸಾಧ್ಯವಾಗದಲ್ಲಿ ತನ್ನ ಚಿಕ್ಕ ಮಕ್ಕಳನ್ನು ಆ ಕೆಲಸಕ್ಕೆ ಬಳಸಿಕೊಳ್ಳುತ್ತಾಳಂತೆ! ಮಕ್ಕಳಿಗೆ ಈ ತಾಯಂದಿರು ಇಂಥ ವಿದ್ಯೆ ಕಲಿಸುತ್ತಾರೆ!

ಮದುವೆಯಿಂದ ಗಂಡಸಿಗಲ್ಲದೆ ಹೆಂಗಸಿಗೆ ಪ್ರಯೋಜನ ಬಹಳ ಕಡಿಮೆ ಎಂದುಕೊಂಡು ಈ ನಾಗರಿಕರೆಂದು ಹೇಳಿಕೊಳ್ಳುವ ಕನ್ನೆಯರು ಯಾವುದೂ ಸಾಧ್ಯವಾಗದಲ್ಲಿ ವೇಶ್ಯೆಯರಾಗುತ್ತಾರೆ. ಅದೂ ಸಾಧ್ಯವಾಗದಲ್ಲಿ ಅನ್ಯ ತರುಣಿಯರನ್ನು ದುರ್ಮಾರ್ಗಕ್ಕೆ ಹಚ್ಚಿ ಹಣಗಳಿಸುತ್ತಾರೆ. ಕಡವಾಗಿ ಮದುವೆಯಾಗುವ ಚಾಕರಿಗಿತ್ತಿಯರು, ವ್ಯಕ್ತಿತ್ವಹೀನರು, ಭಾವಾವೇಶಪ್ರಧಾನರು ಮತ್ತು ಅಂಥ ಹುಟ್ಟುಗುಣವುಳ್ಳವರು ಕಳ್ಳಿಯರಾಗುವರೆಂದು ಅವರನ್ನು ಪರೀಕ್ಷಿಸಿದ ಮನೋವಿಜ್ಞಾನಿಗಳು ಸಾರಿದ್ದಾರೆ. ಇವರನ್ನು ಅನೇಕ ಸಲ ಪೋಲೀಸರು ಹಿಡಿದರೂ ಅಂಗಡಿಕಾರರು ಮತ್ತೇನಾದರೂ ಕೇಟ ಮಾಡಿಯಾರೆಂದು ಒಮ್ಮೆ ಮಾತ್ರ ತಪ್ಪಿದ್ದರೆ ಕ್ಷಮಿಸುವುದೇ ರೂಢಿಯಾಗಿದೆ.

ಆರ್ಥಿಕ ಸ್ವಾತಂತ್ರ್ಯವನ್ನಷ್ಟೇ ಅಲ್ಲ, ಯಾವ ಸ್ವಾತಂತ್ರ್ಯವನ್ನೇ ಆಗಲಿ ಇನ್ನೊಬ್ಬ ಸಹಜೀವಿಯಿಂದ ಒಬ್ಬ ಜೀವಿ ಸಂಪೂರ್ಣ ನೂರಕ್ಕೆ ನೂರರಷ್ಟು ಪಡೆಯಲು ಗಂಡಸಿಗಾಗಲಿ ಹೆಂಗಸಿಗಾಗಲಿ ಮನುಷ್ಯ ಸಮಾಜದಲ್ಲಿ ಸಾಧ್ಯವಿಲ್ಲ. ಹಾಗೆ ಪಡೆಯ ಹೋದಲ್ಲಿ ಸಹಜೀವನವೆಂಬುದು ಅಸಾಧ್ಯ; ಏಕಾಕಿತ್ವವೇ ಗತಿ. ಸಹಜೀವಿಗಳಲ್ಲಿ, ಸಹವಾಸಿಗಳಲ್ಲಿ ನೂರಕ್ಕೆ ೫೦ ರಷ್ಟು ಪರಸ್ಪರರಿಗಾಗಿ ತ್ಯಾಗವು ಮಾನಸಿಕ, ವಾಚಿಕ, ದೈಹಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಇರುವುದೇ ಆದರ್ಶ ದಾಂಪತ್ಯದ ಸಹಜೀವನದ ಗುಟ್ಟು; ಪ್ರೀತಿಯೇ ನ್ಯೂನತೆಗಳನ್ನು ಮುಚ್ಚಿ ಬೆಸೆಯುವ ವಜ್ರಬಂಧ ಎಂಬುದನ್ನು ಕಲಿತವರೆನಿಸುವ ಇಂದಿನ ಪಟ್ಟಣಿಗರಾದ ಭಾರತೀಯ ಸಹೋದರಿಯರು ಮನನಮಾಡಬೇಕು. ಸದ್ವಿದ್ಯೆ ಗಂಡಸಿಗಾಗಲಿ ಹೆಂಗಸಿಗಾಗಲಿ ಮುಖ್ಯವಾಗಿ ಜ್ಞಾನ ಸಾಧನ ಮತ್ತು ಗೌಣವಾಗಿ ಗಳಿಕೆಯ ಸಾಧನ ಸುಜ್ಞಾನದಿಂದ ಸ್ವಾತಂತ್ರ್ಯ ಲಭಿಸುವುದಲ್ಲದೆ ಮೂಢಪ್ರೇಮ ಇಲ್ಲವೆ ದುರಭಿಮಾನದಿಂದಲ್ಲ. ಪ್ರೇಮಕ್ಕೆ ಜ್ಞಾನವೇ ಕಣ್ಣು. ಇಂಗಿತಜ್ಞತೆ, ಸಾತ್ವಿಕತೆಗಳೇ ಅದರ ಗುರುತು.

— ಹಿರಿಯಕ್ಕ

× × ×

ನಮ್ಮ ವಿದ್ಯೆ

ಇಂದಿಗೂ ಪುರಾಣ ಕೇಳುವ ರೂಢಿ ನಮ್ಮಲ್ಲಿದೆ. ಅದರಿಂದ ಸುಜ್ಞಾನ ಕುಜ್ಞಾನಗಳೆರಡರ ಅಂಶಗಳೂ ಲಭಿಸುವುವು. ಕುಜ್ಞಾನದ ಶಕ್ತಿ ಬಲವಾಗಿ ನಮ್ಮ ಬುದ್ಧಿ ಭಾವನೆಗಳಿಗೆ ನಾವೇ ದಾಸರಾಗಿ ಅನ್ಯರನ್ನು ದೂರಿಕೊಂಡು ಅಳುವ ಸ್ವಭಾವವೇ ನಮ್ಮಲ್ಲಿ ರೂಪುಗೊಳ್ಳುವಂತಾಗಿದೆ. ಇದಕ್ಕೆ ಸದ್ವಿದ್ಯೆಯೇ ನಿವಾರಕೋಪಾಯ. ವಿದ್ಯೆಯು ಕೇವಲ ಸಂಪಾದನೆಯ ಸಾಧನ ಎಂದು ತಿಳಿವ ಬುದ್ಧಿ ಇರುವವರೆಗೆ ಮನುಷ್ಯರಲ್ಲಿ ನಿಜವಾದ ನಾಗರಿಕಭಾವ ಬರದು. ತಾಂತ್ರಿಕ ವಿದ್ಯೆ ಗಳಿಸುವವರಿಗೆ ಮಾತ್ರ ಅಗತ್ಯ! ಕಲೆಯಿಂದ ಗಳಿಕೆಯೂ ಆಗುತ್ತದೆ, ಆನಂದವೂ ಸಿಗುತ್ತದೆ. ಶಾಸ್ತ್ರ ಜ್ಞಾನದಿಂದ ಸುಖ ದುಃಖಗಳಲ್ಲಿ ಸಮತೆಯಿಂದಿರುವ ಸಹಿಷ್ಣುತೆ ಮತ್ತು ಅನ್ಯರನ್ನು ಸಂತೋಷಗೊಳಿಸುವ ಶಕ್ತಿ ಲಭಿಸುತ್ತದೆ. ನಮ್ಮ ಸಹವಾಸಿಗಳನ್ನು ಸಂತೋಷಗೊಳಿಸುವುದೇ ಸಾತ್ವಿಕ ಸಂತೋಷ. ಅದಕ್ಕೆ ಸಾಹಿತ್ಯಾದಿಗಳ ಪರಿಚಯ ಅತ್ಯಗತ್ಯ. ವಾಕ್ಶಕ್ತಿ, ವಿಚಾರ ಶಕ್ತಿಗಳಿಲ್ಲದ ವ್ಯಕ್ತಿ ಕುರಿಯೇ ಸರಿ; ಒಳ್ಳೆಯದಿದ್ದರೂ ಯಾವ ಒಳ್ಳೆಯ ಪ್ರಯೋಜನಕ್ಕೂ ಬರದು.

ಕಥೆ ಕಾದಂಬರಿಗಳನ್ನು ಓದುವವರು ನಮ್ಮಲ್ಲಿ ಹೆಚ್ಚಾಗಿರುವರಲ್ಲದೆ ಪ್ರೌಢ ಸಾಹಿತ್ಯವನ್ನು ಓದಬಲ್ಲ ಮಹಿಳೆಯರು ತೀರ ಕಡಿಮೆ. ಪ್ರೌಢರು ಹೇಗಾದಾರು? ಪ್ರೌಢತೆಯಿಲ್ಲದೆ ಸ್ವಾತಂತ್ರ್ಯವಿಲ್ಲ, ಹೊಣೆಯಿಲ್ಲ, ಕರ್ತೃತ್ವವಿಲ್ಲ, ಶಕ್ತಿಯಿಲ್ಲ, ಮರ್ಯಾದೆಯಿಲ್ಲ; ಮಕ್ಕಳಂತೆ ಅನ್ಯರು ತಮ್ಮನ್ನು ಮುದ್ದಿಸಬೇಕೆಂಬ ಮುಗ್ಧತೆಯಿಂದ ಪರಾವಲಂಬಿಗಳಾಗಿ ನಾವು ಬಾಳಬೇಕಾಗುತ್ತದೆ. ಈ ಗುಟ್ಟನ್ನು ನಮ್ಮಲ್ಲಿಯ ಎಷ್ಟು ಜನ ಕಲಿತ ಸಹೋದರಿಯರು ಅರಿತಿದ್ದಾರೆ? ಎಲ್ಲಿ ಹೋದರೂ ನಮ್ಮ ಸಹೋದರರ ಔದಾರ್ಯ, ದಾಕ್ಷಿಣ್ಯಗಳನ್ನು ಉಂಡೇ ನಾವು ಕೊಳಗ ಬಯಸುವೆವಲ್ಲದೆ ಸ್ವಜ್ಞಾನ, ಸ್ವಶಕ್ತಿಗಳಿಂದ ಮಾನ್ಯತೆ ಪಡೆವ ಪ್ರಯತ್ನವನ್ನು ಮಾಡುತ್ತಿಲ್ಲ. ಇದೇ ನಮ್ಮ ವ್ಯಕ್ತಿತ್ವಹೀನತೆ ಮತ್ತು ಅದರ ಫಲವಾದ ದಾಸ್ಯದ ಮೂಲ.

ಶಾಲೆ ಕಾಲೇಜುಗಳಲ್ಲಿ ಡಿಗ್ರಿ ಪಡೆದ ಮಾತ್ರಕ್ಕೆ ಸುಜ್ಞಾನ ದೊರೆಯದು. ಓದು ಬರಹಗಳನ್ನು ಚೆನ್ನಾಗಿ ಕಲಿತು ಪ್ರೌಢ ಸಾಹಿತ್ಯ ಮತ್ತು ಶಾಸ್ತ್ರಗಳ ಗ್ರಂಥಗಳನ್ನು ಓದಿದರೆ ಮಾತ್ರ ಜೀವನಸೌಂದರ್ಯ, ಸಹಜೀವನದ ಅರ್ಥ, ಸ್ವಾತಂತ್ರ್ಯದ ಇತಿಮಿತಿ, ಆಸೆಪಾಸೆಗಳ ಔಚಿತ್ಯ, ತಾಯ್ತನದ ಕರ್ತವ್ಯ ಜ್ಞಾನ ಇವು ಉದಯವಾಗಿ, ಸಮರಸ ಭಾವದಿಂದ ಸುಖವಾಗಿ, ಸುಖಕರರೆನಿಸಿ ಇರಬಲ್ಲೆವಲ್ಲದೆ ಕೇವಲ ಮುಗ್ಧಭಾವದ ಸೌಂದರ್ಯದಿಂದ ಶಾಶ್ವತ ತೃಪ್ತಿ ನಮಗೆ ಸಿಗದು; ನಿಜವಾದ ಸೌಂದರ್ಯ, ಧೈರ್ಯ, ಗಾಂಭೀರ್ಯಗಳು ಅರ್ಥಜ್ಞರ ಕಣ್ಣಿಗೆ ಅಳವಡಲಾರವು; ವಿವೇಕಜ್ಞರ ಕಣ್ಣಿಗೆ ಮಾತ್ರ ಸಾಧ್ಯ.

— ಸುಭದ್ರೆ

ಹಳೆಯದೆಲ್ಲ ಹೊಲೆಯೆ ?

ಹಳೆಯದೆಲ್ಲ ಹೊಲೆ, ಇಂದಿನದೆಲ್ಲ (ಪಡುವಲಿಂದ ಬಂದುದೆಲ್ಲ) ತರ್ಕಶುದ್ಧವಾದ ರೀತಿನೀತಿ–ಎಂದು ಅಂಧಶ್ರದ್ಧೆಯನ್ನು ಬಯ್ವ ಅಧುನಿಕರು ಹಳೆಯದನ್ನು ಬಿಟ್ಟು ಹೊಸ ಅಂಧಶ್ರದ್ಧೆಗೆ ಶರಣು ಹೊಕ್ಕಿರುವುದು ಅಲ್ಲಲ್ಲಿ ಕಂಡುಬರುತ್ತದೆ. ಈ ಅಜ್ಞಾನದಿಂದ ಉಂಟಾದ ಹಾನಿಯನ್ನು ಕಂಡು ಹೆದರಿ ಪಾಶ್ಚಾತ್ಯ ವಿದ್ವಾಂಸರಿಂದು ತಮ್ಮ ನಾಗರಿಕತೆಯ ನವಾದರ್ಶಗಳನ್ನು ಪುನರ್ವಿಮರ್ಶೆಗೆ ಗುರಿಪಡಿಸಿ ಅವುಗಳ ದುಷ್ಪರಿಣಾಮಗಳನ್ನು ಸಂಶೋಧಿಸಿ, ಉತ್ತಮವಾದ ಕೆಲವು ಹಳೆಯ ಆದರ್ಶಗಳನ್ನೇ ಹಿಡಿಯುವುದು ಪ್ರಗತಿಪರ ಎಂಬ ಸಿದ್ಧಾಂತಕ್ಕೆ ಬಂದಿರುವುದು ಪರಪ್ರತ್ಯಯನೇಯ ಬುದ್ಧಿಗಳಾದ ಭಾರತೀಯರು ಗಮನಿಸತಕ್ಕ ಸಂಗತಿ.

ವಿಜ್ಞಾನದ ಹೆಸರಿನಲ್ಲಿ ನಮ್ಮ ನಾಗರಿಕ ನೀತಿ ನಡತೆಗಳನ್ನು ತ್ಯಜಿಸಿ ಪಶುಸಹಜವೃತ್ತಿಯಿಂದ ವೈವಾಹಿಕ ಜೀವನದಲ್ಲಿ ಆಚರಿಸುವುದರ ವಿರುದ್ಧವಾಗಿ ಅಮೇರಿಕದ ಪ್ರಸಿದ್ಧ ಭೌತಶಾಸ್ತ್ರಿ ರಾಬರ್ಟ ಮಿಲ್ಲಿಕನ್, ಮನಃಶಾಸ್ತ್ರಿ ಡಾ. ರಿಚರ್ಡ್ ಹಾಫ್‌ಮನ್, ವಿದ್ಯಾಶಾಸ್ತ್ರಿ ರಾಬರ್ಟ ಹಿಲ್ಯರ್, ಶಿಶುವಿಜ್ಞಾನಿ ಡಾ. ಹಾರ್‌ಕೋರ್ಟ ವೆಪ್ಪರ್ಡ್, ಕುಟುಂಬ ವಿಜ್ಞಾನಿ ಡಾ. ಈವ್ಲಿನ್ ಮಿಲ್ಲಿಸ್ ಡ್ಯೂವಲ್, ಮಹಾಸಾಹಿತಿ ನಾರ್ಮನ್ ಏಂಜೆಲ್ ಮುಂತಾದವರು ಹೇಳಿಕೆಯನ್ನು ಕೊಟ್ಟಿದ್ದಾರೆ. ಕಾಮದ ಕೆಸರಿಂದ ಪ್ರೇಮಲತೆ ಹುಟ್ಟಿ ಬೆಳೆದು ಹೂ ಬಿಡುವುದು ಮಾನವ ದಾಂಪತ್ಯದ ವಿಶಿಷ್ಟ ನಾಗರಿಕ ಲಕ್ಷಣ. ಅದಕ್ಕೆ ಸಂಬಂಧಿಸಿದ ಪಾವಿತ್ರ್ಯ, ಪಾತಿವ್ರತ್ಯ, ಸಾತಿವ್ರತ್ಯ, ಪರಸ್ಪರ ತ್ಯಾಗ, ಸಹಾನುಭೂತಿ, ಇತ್ಯಾದಿ ಗುಣಗಳು ನಾಗರಿಕ ಸಮಾಜದ ಆರೋಗ್ಯವನ್ನು ಸೂಚಿಸತಕ್ಕವು. ಇವುಗಳನ್ನು ಕಡೆಗಣಿಸುವ ವಿಜ್ಞಾನ ಒಂದು ಮಹಾ ಅಜ್ಞಾನ. ಯೋಗ್ಯ ಸಂಗಾತಿಯನ್ನು ಆಯ್ದುಕೊಳ್ಳುವದಕ್ಕಿಂತ ಬಂದ ಸಂಗಾತಿಗೆ ತಾನು ಯೋಗ್ಯನಾ(ಳಾ)ಗಿರಬೇಕೆಂದು ದಂಪತಿಗಳು ಪರಸ್ಪರ ಹಿತದೃಷ್ಟಿಯಿಂದ ಪ್ರಯತ್ನಶೀಲರಾಗಬೇಕು. ನೀತಿ ಅನೀತಿಗಳ ಪ್ರಶ್ನೆಯನ್ನು ದೂರವಿಡುವುದು ಜಡ ಪ್ರಪಂಚದಲ್ಲಲ್ಲದೆ ಸಂಸ್ಕೃತ ಪ್ರಪಂಚದಲ್ಲಿಲ್ಲ. ಸಂಸ್ಕೃತ ಸಮಾಜದಲ್ಲಿಯ ನಾಗರಿಕ ನೀತಿಯ ಹೃದಯಸೌಂದರ್ಯವು ಸರ್ವ ವಿಜ್ಞಾನಕ್ಕೂ ಪಾಠ ಕಲಿಸಬಲ್ಲುದು.

— ಶಾಂತು

ಬೆಳಗಾವಿ

ಶ್ರೀ ಚರಮೂರ್ತಿ ಸ್ವಾಮಿಗಳ ಮಠದಲ್ಲಿ ಶ್ರಾವಣ ಶುದ್ಧ ೧ ರಿಂದ ೧ ತಿಂಗಳ ವರೆಗೆ ನಡೆದ ಪುರಾಣವು ತಾ. ೪ ಕ್ಕೆ ಸಮಾಪ್ತವಾಯಿತು. ಮುನ್ನಾ ದಿನ ರಾತ್ರಿ ಗೀಗೀ ಪದಗಳಿಗಾಗಿ ಶ್ರೌ. ಯಮುನವ್ವಕ್ಕ ಪಾಟೀಲರು ಬೆಳ್ಳಿ ಪದಕಗಳನ್ನರ್ಪಿಸಿದರು.

ಬೆಳಗಾವಿಯಲ್ಲಿ ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿಗೆ ಈ ವರೆಗೆ ೩೧೫೨-ರೂ. ಕೂಡಿರುವವು. ಗೋಕಾಕ ತಾಲೂಕಿನಲ್ಲಿ ೧೮೩೧ ರೂ. ಕೂಡಿವೆ.

ಸವದತ್ತಿ ತಾಲೂಕಿನಲ್ಲಿ ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿಗೆ ೭ ಸಾವಿರ ರೂ. ಗಳಷ್ಟು ವಾಗ್ದಾನಗಳಾಗಿದ್ದು ತಿಳಿಯುತ್ತದೆ.

ಲಂಚ ನಿರ್ಮೂಲನ ಖಾತೆಯವರು, ಬೆಳಗಾವಿ ಅಬಕಾರಿ ಸುಪರಿಂಟೆಂಡೆಂಟರಾದ ಶ್ರೀ ಅನಂತಾಚಾರಿಯವರು ಒಬ್ಬ ಅಬಕಾರಿ ಕಾಂಟ್ರಾಕ್ಟರನಿಂದ ೯೦೦ ರೂ. ಬೆಲೆಯ ರೇಡಿಯೋ ಮತ್ತು ಗೂಳೇದಗುಡ್ಡದ ಅಬಕಾರಿ ಲಾಯಸೆನ್ಸದಾರನಿಂದ ಕೆಲವು ರೇಶಿಮೆ ಖಣ ಲಂಚವಾಗಿ ಸ್ವೀಕರಿಸಿದ್ದನ್ನು ಗೊತ್ತು ಹಚ್ಚಿ ಶ್ರೀ ಅನಂತಾಚಾರಿಯವರನ್ನು ಸಸ್ಪೆಂಡ ಮಾಡಿರುವರೆಂದು ತಿಳಿಯುತ್ತದೆ.

ಪಾಕಿಸ್ತಾನ ಗವರ್ನರರಾದ ಬ್ಯಾ. ಜಿನ್ನಾರ ನಿಧನ

ಪಾಕಿಸ್ತಾನದ ಗವರ್ನರ ಜನರಲರಾದ ಕಾಯದೆ ಅಜಂ ಮಹಮ್ಮದಲಿ ಜಿನ್ನಾರು ೧೧ ಶನಿವಾರ ರಾತ್ರಿ ೧೦-೨೫ ಕ್ಕೆ ಹೃದಯವಿಕಾರದಿಂದ ನಿಧನ ಹೊಂದಿದರು. ಅವರ ಕಳೇಬರವನ್ನು ರವಿವಾರ ಸಂಜೆಗೆ ಕರಾಚಿಯ ಇಸ್ಲಾಮ ವೈದಾನದಲ್ಲಿ ಹೂಳಲಾಯಿತು.

ಇವರು ೧೮೭೬ ರಲ್ಲಿ ಕರಾಚಿಯಲ್ಲಿ ಹುಟ್ಟಿದರು. ರಾಜಕೀಯ ರಂಗದಲ್ಲಿ ಕಾಲಿಟ್ಟಾಗ ಕಾಂಗ್ರೆಸಿನ ನಿಷ್ಠಾವಂತ ಕೆಲಸಗಾರರಾಗಿದ್ದರು. ಆದರೆ ನಂತರ ಜಾತೀಯತೆಯನ್ನೇ ಮುಖ್ಯವಾಗಿಟ್ಟುಕೊಂಡು ಅವರು ಹಿಂದುಸ್ತಾನವನ್ನು ಕೊರೆದು ಪಾಕಿಸ್ತಾನವನ್ನು ಅಸ್ತಿತ್ವದಲ್ಲಿ ತಂದರು.

ಇತ್ತೀಚೆಗೆ ಇವರ ಆರೋಗ್ಯ ಕೆಟ್ಟಿದ್ದು ಚಿಕಿತ್ಸೆ ಹೊಂದುತ್ತಿದ್ದರು. ನಿಧನ ಹೊಂದಿದ ದಿನವೇ ಇವರು ಕರಾಚಿಗೆ ಬಂದಿದ್ದರು. ಇವರ ಆತ್ಮಕ್ಕೆ ಅಲ್ಲಾನು ಶಾಂತಿ ನೀಡಲಿ.

ದೇಶ ವಿದೇಶಗಳಿಂದ ದುಃಖಸೂಚಕ ಸಂದೇಶಗಳು ಬಂದವು. ಹಿಂದುಸ್ತಾನದ ಎಲ್ಲ ಸರಕಾರೀ ಭವನಗಳ ಮೇಲೂ ಒಕ್ಕೂಟದ ಧ್ವಜವು ಅರ್ಧಕ್ಕೆ ಇಳಿಸಲಾಗಿತ್ತು. ಹಿಂದುಸ್ತಾನದ ಗ. ಜ. ರಾದ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್ಯರು ಮಿಸ್ ಫಾತಿಮಾ ಜಿನ್ನಾರಿಗೆ ಸಾಂತ್ವನಪರ ಸಂದೇಶ ಕಳಿಸಿದರು.

" ನಿಮಗೆ ಮತ್ತು ಪಾಕಿಸ್ತಾನಕ್ಕೆ ಒದಗಿದ ಹಾನಿಗಾಗಿ ನಾನೂ ನನ್ನ ರಾಷ್ಟ್ರದ ಜನರೂ ಸಹಾನುಭೂತಿ ವ್ಯಕ್ತ ಮಾಡುತ್ತೇವೆ. "

ಪಾಕಿಸ್ತಾನದ ಮುಖ್ಯ ಮಂತ್ರಿಗಳಿಗೆ ಕಳಿಸಿದ ಅವರ ಸಂದೇಶ ಹೀಗಿದೆ: " ನಿಮ್ಮ ಈ ಅಪಾರ ಹಾನಿಯು ಎಂದೂ ತುಂಬಿ ಬಾರದ್ದು. ಮುಂಬರುವ ಕಷ್ಟ ನಷ್ಟಗಳನ್ನು ಎದುರಿಸಲು ಪರಮಾತ್ಮನು ನಿಮಗೆ ಶಕ್ತಿ ಕೊಡಲಿ. "

ಭಾರತದ ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲರು ಪಾಕಿಸ್ತಾನದ ಮುಖ್ಯ ಮಂತ್ರಿಗಳಿಗೆ ಸಂದೇಶ ಕಳಿಸಿ ಪಾಕಿಸ್ತಾನಕ್ಕೊದಗಿದ ಹಾನಿಯ ಬಗ್ಗೆ ಭಾರತ ಸರಕಾರ ಹಾಗು ಜನತೆಯ ಸಹಾನುಭೂತಿಯಿದೆಯೆಂದು ಹೇಳಿರುವರಲ್ಲದೆ ಭಾರತದ ಅನುತಾಪವನ್ನು ಫಾತಿಮಾ ಅವರಿಗೆ ತಿಳಿಸಲು ಕೇಳಿಕೊಂಡಿದ್ದಾರೆ.

ಅಲ್ಲದೆ ಭಾರತ ಸರಕಾರವು ಜಿನ್ನಾರ ನಿಧನದ ವಾರ್ತೆ ಬಂದೊಡನೆ ಒಂದು ವಿಶೇಷ ಗ್ಯಾಜೆಟ ಹೊರಡಿಸಿ " ಜಿನ್ನಾರ ನಿಧನದ ವಾರ್ತೆ ಕೇಳಿ ಭಾರತ ಸರಕಾರಕ್ಕೆ ಅತೀವ ದುಃಖವಾಗಿದೆ. ಅವರ ನಿಧನದ ನಿಮಿತ್ತ ಎಲ್ಲ ಸರಕಾರೀ ಕಟ್ಟಡಗಳ ಮೇಲೆ ಧ್ವಜಗಳು ಅರ್ಧಕ್ಕಿಳಿಸಲ್ಪಡುವವು. " ಎಂದು ಹೇಳಿದೆ.

ಪಾಕಿಸ್ತಾನದ ಜನರಿಗೆ ಅವರ ಗವರ್ನರ ಜನರಲರಲ್ಲರಾದ ಬ್ಯಾ. ಜಿನ್ನಾರ ನಿಧನದಿಂದ ಪಾಕಿಸ್ತಾನಕ್ಕೆ ತೀವ್ರ ಆಘಾತವಾಗಿದೆಯೆಂದು ಮುಂಬಯಿಯ ಮುಖ್ಯಮಂತ್ರಿಗಳಾದ ಬಾಳಾಸಾಹೇಬ ಖೇರರು ಅಂದಿದ್ದಾರೆ. ಮುಂಬಯಿ ಸರಕಾರದ ಪ್ರಕಟನೆಯ ಮೇರೆಗೆ ಜಿನ್ನಾರ ನಿಧನಕ್ಕಾಗಿ ಸರಕಾರೀ ಮತ್ತು ಸಾರ್ವಜನಿಕ ಕಟ್ಟಡಗಳ ಮೇಲಿನ ಧ್ವಜಗಳು ಅರ್ಧಕ್ಕಿಳಿಸಲ್ಪಟ್ಟಿದ್ದವು.

ಜಿನ್ನಾರ ನಿಧನದ ಬಗ್ಗೆ ಶ್ರೀ ಶರಚ್ಚಂದ್ರ ಬೋಸರು ಉದ್ಗಾರತೆಗೆಯುತ್ತ, "ಬಂಗಾಲವು ಅಖಂಡವಾಗಿ ಉಳಿದು ಸ್ವತಂತ್ರ ಘಟನಾ ಸಮಿತಿಯನ್ನು ರಚಿಸಿಕೊಂಡು ನಂತರ ಬೇಕಾದ ರಾಷ್ಟ್ರಕ್ಕೆ ಸೇರಬಹುದು ಎಂದು ಬ್ಯಾ. ಜಿನ್ನಾರು ನನ್ನೊಡನೆ ೧೯೪೭ ಜೂನದಲ್ಲಿ ನಡೆಸಿದ ಚರ್ಚೆಯಲ್ಲಿ ಒಪ್ಪಿಕೊಂಡಿದ್ದರು" ಎಂದು ಮುಂತಾಗಿ ಅಂದಿದ್ದಾರೆ.

ಬ್ಯಾ. ಜಿನ್ನಾರ ಸ್ಥಳಕ್ಕೆ ಪೂರ್ವ ಪಾಕಿಸ್ತಾನದ ಮುಖ್ಯ ಮಂತ್ರಿಗಳಾದ ಖ್ವಾಜಾ ನಾಜೀಮುದ್ದೀನರನ್ನು ಪಾಕಿಸ್ತಾನದ ಮಂತ್ರಿಮಂಡಳವು ತಾತ್ಪೂರ್ತಿಕವಾಗಿ ಗವರ್ನರ ಜನರಲರನ್ನಾಗಿ ನೇಮಿಸಲು ನಿರ್ಧರಿಸಿದ್ದಕ್ಕೆ ಅರಸರು ಒಪ್ಪಿಗೆ ಕೊಟ್ಟಿರುವರು. ನಾಜೀಮುದ್ದೀನರು ವಿಶೇಷ ವಿಮಾನದಿಂದ ತಾ. ೧೩ ಕ್ಕೆ ಸಂಜೆ ೫ ಗಂಟೆಗೆ ಕರಾಚಿಗೆ ಆಗಮಿಸಿದರು.

ಹೊಸ ಗವರ್ನರ ಜನರಲ್ಲರ ಪ್ರತಿಜ್ಞಾವಿಧಿಯು ತಾ. ೧೪ ರಂದು ೮-೧೦ ಕ್ಕೆ ಕರಾಚಿ ಸರಕಾರಿಭವನದಲ್ಲಿ ಜರುಗಿತು. ನಾಜೀಮುದ್ದೀನರು ಈಗ ೫೪ ವರ್ಷದವರಿರುವರು. ಇವರು ಮೊದಲು ಸಂಯುಕ್ತ ಬಂಗಾಲದ ಮುಖ್ಯ ಮಂತ್ರಿಗಳಾಗಿದ್ದರು.

ಗ್ರಾಮ ಸೇವಾ ಶಿಬಿರಗಳು

ಶ್ರೀ. ವಿನೋಬಾ ಭಾವೆಯವರ ವಿಚಾರಗಳು

ಸ್ವಾತಂತ್ರ್ಯೋತ್ಸವದ ದಿನ ಶ್ರೀ. ವಿನೋಬಾ ಭಾವೆಯವರನ್ನು ಇಂದೂರಿನ ಹತ್ತಿರದಲ್ಲಿರುವ ರಾವಗ್ರಾಮದ ಗ್ರಾಮ ಸೇವಾ ಶಿಕ್ಷಣ ಶಿಬಿರವನ್ನು ಉದ್ಘಾಟಿಸಲು ಆಮಂತ್ರಿಸಲಾಗಿತ್ತು. ಇಂದೂರು ಸಂಸ್ಥಾನದಲ್ಲಿ ಕೆಲಕಾಲ ಮಂತ್ರಿಗಳಾಗಿದ್ದ ಮತ್ತು ಶಿಬಿರದ ಆಜೀವ ಸದಸ್ಯರಾದ ಶ್ರೀ. ಬೈಜನಾಥ ಮಹೋದಯರು ಆ ಶಿಬಿರವನ್ನು ಸಂಘಟಿಸಿದ್ದಾರೆ. ಈ ಕೆಳಗಿನದು ಶ್ರೀ ವಿನೋಬಾ ಭಾವೆಯವರ ಭಾಷಣದ ಸಾರ:

ಹೊಸ ಚಟುವಟಿಕೆಯನ್ನು ಪ್ರಾರಂಭಿಸುವುದರ ಹೊಣೆ

ಸಂಸ್ಥೆಯೊಂದರ ಉದ್ಘಾಟನೆಯಲ್ಲಿ ನಾನು ಸಾಮಾನ್ಯವಾಗಿ ಭಾಗವಹಿಸಲು ಇಷ್ಟಪಡುವುದಿಲ್ಲ. ಆದರ ಉದ್ಯಾಪನಕ್ಕೆ ನನ್ನನ್ನು ಬರಹೇಳಿದ್ದರೆ ಅದರ ಮಾತೇ ಬೇರೆ; ಏಕೆಂದರೆ, ಅಲ್ಲಿ ಕೆಲಸ ಮುಗಿದಿರುವುದರಿಂದ ಮಾಡಿದ ಕೆಲಸ ಚೆನ್ನಾಗಿಲ್ಲವಾಗಿದ್ದರೆ ಹೆಚ್ಚಿಗೆ ಹಾನಿಯೇನೂ ಆಗಲಾರದು. ಹಿಂದುಸ್ತಾನದ ಮೇಧಾವಿಗಳು– ಹೊಸದನ್ನು ಆರಂಭಿಸಕೂಡದು, ಆರಂಭಿಸಿದರೆ ಕಡೆತನಕ ಅದನ್ನು ನಡೆಸಿಕೊಂಡು ಹೋಗಬೇಕು– ಎಂದಿದ್ದಾರೆ ಆ ಮೇರೆಗೆ ನನಗೆ ಯಾರಾದರೂ ಹೊಸದೊಂದು ಕಾರ್ಯವನ್ನು ಆರಂಭಿಸಲು ಹೇಳಿದರೆ ನಾನು ಅದನ್ನು ಹೇಗೆ ನಡೆಸಬೇಕು, ಹೇಗೆ ಉಳಿಸಿಕೊಂಡು ಹೋಗಬೇಕು, ಎಂಬ ಬಗ್ಗೆ ಖಾತ್ರಿ ಮಾಡಿಕೊಳ್ಳುತ್ತೇನೆ. ಉದ್ಘಾಟನೆಗೆ ನಿಮಂತ್ರಿತನಾದ ಮನುಷ್ಯನು ಆ ಸಂಸ್ಥೆಯ ನಿರ್ವಹಣ ಸರಿಯಾಗಿರುವಂತೆ ನೋಡಿಕೊಳ್ಳಲು ಒಪ್ಪಿಗೆ ಕೊಟ್ಟವರಲ್ಲಿ ಒಬ್ಬನೆಂದು ತಿಳಿದುಕೊಳ್ಳಬೇಕು: ಕಾರ್ಯವನ್ನು ಮುಗಿಸದಿರರು ಇಲ್ಲವೆ ಅಲಕ್ಷ್ಯಮಾಡಲಾರರು ಎಂದು ಈ ಶಿಬಿರ ಸಂಘಟಕರಲ್ಲಿ ವಿಶ್ವಾಸವಿಟ್ಟು ನಾನು ಇದರ ಉದ್ಘಾಟನೆಗೆ ಒಪ್ಪಿದೆ. ಇಂಥ ಶಿಬಿರಗಳ ಪ್ರಾಮುಖ್ಯವನ್ನು ಅರಿತದ್ದೂ ಹಾಗೆ ನಾನು ಒಪ್ಪಿಗೆ ಕೊಡಲು ಕಾರಣವಾಗಿದೆ.

ಗ್ರಾಮಸೇವೆಯೊಂದು ಹೊಸ ಕೆಲಸ

ನನಗೆ ಇಂಥ ಕೆಲಸದಲ್ಲಿ ಸ್ವಲ್ಪ ಅನುಭವವಿದೆ. ಸಂಸ್ಥೆಯ ಕಾರ್ಯಗಳಲ್ಲಿ ಭಾಗವಹಿಸಲಾರದೆ ದೂರದಿಂದ ನಿರ್ದೇಶ ಮಾಡುವವರಿಂದ ಇಂಥ ಸಂಸ್ಥೆಗಳು ಜಯಪ್ರದವಾಗಿ ನಡೆಯಲಾರವು. ಎಷ್ಟೇ ಬುದ್ಧಿವಂತರಾಗಿದ್ದರೂ ನೌಕರರಿಂದಲೂ ಸ್ವಯಂ ಸೇವಕರಿಂದಲೂ ದೂರದಲ್ಲಿ ನಿಂತು ಕೆಲಸ ಮಾಡಿಸುವವರಿಂದ ಗ್ರಾಮಸೇವೆಯ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯುವಂಥದಲ್ಲ. ಇದು ಇನ್ನೂ ಶೈಶವಾವಸ್ಥೆಯಲ್ಲಿರುವ ಒಂದು ಕೆಲಸ. ಇದಕ್ಕೆ ಸಿದ್ಧಪಡಿಸಿಟ್ಟ ತಂತ್ರ ಮತ್ತು ಕ್ರಮಬದ್ಧ ನಿಯಮಸೂತ್ರಗಳಿಲ್ಲ. ಇದು ಹೊಸ ಕೆಲಸ, ಇದೊಂದು ಸಂಶೋಧನದ ಕಾರ್ಯ. ಇದರ ಪ್ರಾಧಾನ್ಯವನ್ನು ಮನಗಂಡವರಾಗಿ ಅದರಲ್ಲಿ ಸ್ವಲ್ಪ ಸ್ವತಃ ತಲೆಯಿರುವದರಿಂದ ಮುಂದಿ ಕೆಲಸ ನಡೆಸಿಕೊಂಡು ಹೋಗಿ ಆ ಬಳಿಕ ಸ್ವಾನುಭವ ಮತ್ತು ಕಾರ್ಯದ ಮೂಲಕ ಮಿಕ್ಕವರಿಗೆ ಸೇವೆಯಲ್ಲಿ ಶಿಕ್ಷಣ ಕೊಡಿಸಬೇಕು.

ಈ ಮಾರ್ಗದಿಂದ ಮಾತ್ರ ಒಳ್ಳೆಯ ಕೆಲಸಗಾರರನ್ನು ತರಬೇತು ಮಾಡಬಹುದು: ಹೇಗೇ ಆಗಲಿ, ಇದು ಇಂಥ ಕೆಲಸವನ್ನು ಮಾಡುವ ಬಗೆ. ಅನೇಕ ವರ್ಷಗಳವರೆಗೆ ಸ್ವತಃ ನಾನು ಈ ಕೆಲಸವನ್ನು ಮಾಡಿದವನಾದುದರಿಂದ ನಾನು ಇಷ್ಟು ಮಾತನ್ನಾದರೂ ಈ ವಿಷಯದಲ್ಲಿ ಹೇಳಲು ಶಕ್ತನಾಗಿದ್ದೇನೆ. ಭಾಷಣಗಳ ಮೂಲಕ ಜನರಿಗೆ ದಾರಿದೋರುವುದು– ಇಲ್ಲವೆ ಉಪದೇಶಗಳನ್ನು ಕಳಿಸುವುದು ಇದಕ್ಕೆ ನಾನು ಎಂದೂ ಒಪ್ಪಿದವನಲ್ಲ. ನನ್ನ ಹತ್ತಿರ ಬಂದು ಇದ್ದು ನಾನು ಮಾಡುವುದನ್ನು ನೋಡಿ ಅದರಿಂದ ನಿಮಗೆ ಶಕ್ಯವಿದ್ದ ಸೂಚನೆಗಳನ್ನು ಗ್ರಹಿಸಿಕೊಂಡು ಹೋಗಿರಿ ಎಂದು ಸಂಘಟಕರಿಗೆ ಹೇಳುತ್ತ ಬಂದಿದ್ದೇನೆ.

ಸರಕಾರೀ ಸಹಾಯದ ಸ್ಥಾನ

ನೀವೀಗ ನಿಮ್ಮ ಕಾರ್ಯಗಳಲ್ಲಿ ಬಹುಶಃ ಸರಕಾರೀ ಸಹಾಯವನ್ನು ಪಡೆವ ಒಂದು ಮಟ್ಟಕ್ಕೆ ಬಂದುಮುಟ್ಟಿದ್ದೀರಿ ಅಂಥ ಸಹಾಯವನ್ನು ತೆಗೆದುಕೊಳ್ಳಬಾರದೆಂದು ನಾನು ಹೇಳಿಸಾದರೂ ನಿಮಗೆ ನಾನೊಂದು ಎಚ್ಚರಿಕೆ ಕೊಡಬಯಸುತ್ತೇನೆ. ಸರಕಾರೀ ಸಹಾಯ ಸಿಗಲಿರುವುದರಿಂದ ಈಗಿಗಿಂತ ನಿಮ್ಮ ಕಾರ್ಯಗಳ ವ್ಯಾಪ್ತಿಯನ್ನು ವಿಸ್ತರಿಸಬಹುದಾಗಿದೆ. ಕ್ಷೇತ್ರವೈಶಾಲ್ಯವಲ್ಲದೆ ಕಾರ್ಯದ ಆಗಾಧತೆ ಆದರಿಂದ ಫಲಿಸಲಾರದು. ಕಿರಿಬಾಯಿಯ ಆಳವಾದ ಬಾವಿ ನಿರಂತರವೂ ನೀರನ್ನೊದಗಿಸುವಂತೆ ಅಗಲಬಾಯಿಯ ಕೆರೆ ಒದಗಿಸಲಾರದು. ಅದು ಕೇವಲ ಸೊಳ್ಳೆಗಳ ತವರಾಗಬಹುದು. ಶಿಕ್ಷಣದ ವಿಷಯದಲ್ಲಿ ಈ ಎಚ್ಚರಿಕೆ ಅತ್ಯವಶ್ಯಕ.

ಭಾಷಣದ ಸಾರ

ಇಂಥ ಶಿಬಿರಗಳಲ್ಲಿ ಭಾಷಣಗಳನ್ನು ಇದಿಸುವುದೊಂದು ಮೋಜಾಗಿ ಹೋಗಿದೆ. ಕೆಲಮಟ್ಟಿಗೆ ಇವು ಅವಶ್ಯಕವೇ; ಆದರೆ; ಕಾರ್ಯ ಮತ್ತು ಚಟುವಟಿಕೆಗಳ ಮೂಲಕ ಶಿಕ್ಷಣ ಕೊಡುವುದೇ ಮುಖ್ಯವೆಂಬುದನ್ನು ಸಂಘಟಕರು ಅರಿತಿರಬೇಕು. ಭಾಷಣಗಳಾದರೂ ಕೈಕೊಂಡ ಕಾರ್ಯಕ್ಕೆ ಸಂಬಂಧಿಸಿರಬೇಕು. ಅಲ್ಲದಿದ್ದರೆ, ಕೆಲಸಗಾರರು ಆ ಸಂಬಂಧವಿಲ್ಲದ ಮಾತುಗಳನ್ನು ಕೇವಲ ಕುತೂಹಲ ಪರಿಹಾರಕ್ಕಾಗಿ ಕೇಳಿ ಬಿಟ್ಟುಬಿಡಬಹುದು.

ಅಗತ್ಯದ ಕಾರ್ಯಗಳು

ನೂಲುವುದು, ನೇಸುವುದು, ಗುಡಿಸುವುದು, ಉಳುವುದು, ಹಣ್ಣು ಮತ್ತು ತರಕಾರಿಗಳನ್ನು ಬೆಳೆಯುವುದು ಇವು ಗ್ರಾಮ ಸೇವಾ ಶಿಬಿರಗಳಲ್ಲಿ ವಿವಿಧ ವಿಷಯಗಳ ಮೇಲೆ ಕೊಡುವ ಭಾಷಣಗಳಿಗಿಂತ ಹೆಚ್ಚು ಅವಶ್ಯಕವೂ ಮುಖ್ಯವೂ ಆಗಿವೆ. ಹಳ್ಳಿಗಳ ಸಂಪತ್ತು ಆರೋಗ್ಯ ಮತ್ತು ನೈರ್ಮಲ್ಯಗಳನ್ನು ಹೆಚ್ಚಿಸುವುದೇ ಅವುಗಳ ಮುಖೋದ್ದೇಶ. ಮಲ ಮತ್ತು ಗೊಬ್ಬರಗಳನ್ನು ಲಾಭಕರವಾಗಿ ಬಳಸಿಕೊಳ್ಳಲಾಗದಿದ್ದರೆ ಗ್ರಾಮಸೇವೆ ನಿರರ್ಥಕವಾಗುವುದು. ಭಾರತದ ಇಂದಿನ ಹಳ್ಳಿಗಳು ವಿವಿಧರೋಗಗಳ ಪೋಷಣಾಲಯಗಳಾಗಿದ್ದು ಅಧೋಗತಿಗಿಳಿದಿವೆ. ಹಳ್ಳಿಗಳ ಹಿತಕರವಾದ ಅಭಿವೃದ್ಧಿಗೆ ಅಸ್ಪೃಶ್ಯತೆಯೊಂದು ದೊಡ್ಡ ವಿಘ್ನವಾಗಿ ನಿಂತಿದೆ. ಒಂದು ಸಾವಿರ ಜನಸಂಖ್ಯೆಯ ಒಂದು ಹಳ್ಳಿ ಪ್ರತಿ ವರ್ಷವೂ ಮೂರು ಸಾವಿರ ರೂಪಾಯಿ ಬೆಲೆಯ ಗೊಬ್ಬರವನ್ನು ಕಳೆದುಕೊಳ್ಳುತ್ತದೆ; ಇದಕ್ಕೆ ಹಳ್ಳಿಗರು ಮಲವನ್ನು ಅಲಕ್ಷಿಸುದುದೇ ಕಾರಣ. ಈ ವಿಷಯದಲ್ಲಿ ಅವರು ಚೀನ ಮತ್ತು ಜಪಾನುಗಳಿಂದ ಬಹಳ ಕಲಿತುಕೊಳ್ಳಲು ಸಾಧ್ಯವಿದೆ.

ಸ್ವರಾಜ್ಯದ ಅರ್ಥ

ನನಗೆ ಅನೇಕಕಡೆ ಹೂಮಾಲೆ ಹಾಕಿದ್ದಾರೆ. ಎಲ್ಲೋ ಒಂದೆರಡುಕಡೆ ನೂಲುಕೊಟ್ಟಿದ್ದಾರೆ. ಆ ಪ್ರತಿಯೊಂದು ನೂಲುಸರದಲ್ಲೂ ಹತ್ತಿಪ್ಪತ್ತಕ್ಕಿಂತ ಹೆಚ್ಚು ಎಳೆಗಳಿರಲಿಲ್ಲ. ಅದರ ಅರ್ಥ ಜನರುನೂಲುವ ಪರಂಪರೆಯನ್ನು ಬಿಟ್ಟುಬಿಟ್ಟದ್ದಾರೆಂದಾಯಿತು. ಸ್ವರಾಜ್ಯ ಬಂದು ಬಿಟ್ಟದ್ದಿಯಾದುದರಿಂದ ಇನ್ನು ನೂಲುವ ಅವಶ್ಯಕತೆಯಿಲ್ಲವೆಂದು ಕೆಲವರೆನ್ನುತ್ತಾರೆ. ಆದರಿಂದ ಅವರು ಪುನಃ ಸ್ವರಾಜ್ಯವನ್ನು ಕಳೆದುಕೊಳ್ಳಲು ಅಪೇಕ್ಷಿಸುತ್ತಾರೆ ಎಂದು ಅರ್ಥವಾಗುತ್ತದೆ. ಸ್ವರಾಜ್ಯವೆಂಬುದರ ಮತ್ತು ಅದರ ಸಿದ್ಧಿಯ ಪ್ರಧಾನ ಅರ್ಥವನ್ನು ಜನರು ಮರೆತರೆ ಅಂತಃಕಲಹ ಪ್ರಾರಂಭವಾಗಲು ಅದೊಂದು ಮಾರ್ಗವನ್ನು ಕಲ್ಪಿಸಿಕೊಟ್ಟಂತಾಗುವುದು.

ಆಧುನಿಕ ಸಾಮ್ರಾಜ್ಯವಾದದ ಮಾರ್ಗ

ಹೊಸ ಪರಿಸ್ಥಿತಿಯ ಜೀವನದಲ್ಲಿ ಹಳೆಯ ಮಾದರಿಯ ಸಾಮ್ರಾಜ್ಯವಾದವು ಗತಕಾಲಿಕವಾಗಿ ಹೋಯಿತು. ರೋಮನ್ ಸಾಮ್ರಾಜ್ಯ ೧೨ ಶತಕಗಳ ವರೆಗೆ ಸಾಗಿತು. ಬ್ರಿಟಿಶರು ೧॥ ಶತಕಕ್ಕಿಂತ ಹೆಚ್ಚು ಕಾಲ ಸಮ್ರಾಟರಾಗಿ ಉಳಿಯದಾದರು. ಯಾವ ದೇಶವೂ ಈಗ ಅನ್ಯದೇಶದ ಮೇಲೆ ಸಾಮ್ರಾಜ್ಯಶಾಹಿಯನ್ನು ಬಹುಕಾಲ ನಡೆಸಲಾರದು. ಆದ್ದರಿಂದ ಸಾಮ್ರಾಜ್ಯವಾದಿಗಳ ಹೊಸ ತಂತ್ರವೆಂದರೆ, ನೇರವಾದ ಆಳಿಕೆಗೆ ಹೋಗದೆ ವ್ಯಾಪಾರ ಸಂಬಂಧಗಳ ಮೂಲಕ ಅನ್ಯದೇಶದ ಮೇಲೆ ತಮ್ಮ ಪ್ರಭಾವವನ್ನು ಬೀರುವುದು. ಇನ್ನು ಮೇಲೆ ಅನ್ಯದೇಶಗಳು ಭಾರತದೊಡನೆ ಮಾಡುವುದಾದರೂ ಇದನ್ನೇ.

ರಜಾಕಾರರ ಅತ್ಯಾಚಾರಕ್ಕೆ ತುತ್ತಾದ ಅಮರ [illegible] ಶೋಯಬುಲ್ಲಾ ಖಾನ್



ಹೈದರಾಬಾದದಲ್ಲಿ ಇಮ್ರೋಜ ಎಂಬ ರಾಷ್ಟ್ರೀಯ ಉರ್ದು ದೈನಿಕದ ಸಂಪಾದಕರಾದ ಇವರ ಕೈಗಳನ್ನು ರಜಾಕಾರರು ಕತ್ತರಿಸಿದ್ದನ್ನು ಚಿತ್ರದಲ್ಲಿ ಕಾಣಬಹುದು. ಇವರು ಹೈದರಾಬಾದ ಪ್ರಜೆಗಳ ಹೋರಾಟವನ್ನು ಎತ್ತಿ ಹಿಡಿದು ರಜಾಕಾರರ ಕ್ರೋಧಕ್ಕೆ ಗುರಿಯಾದರು. ಹಿಂದು ಇರಲಿ ಮುಸಲ್ಮಾನನಿರಲಿ ಅಪ್ಪಾದವನನ್ನು ತುಂಡರಿಸುವುದು ರಜಾಕಾರರ ನೀತಿ.

ನಿಜವಾಗಿ ಸ್ವತಂತ್ರರಾಗಿರುವುದಕ್ಕಾಗಿ ಎಚ್ಚರಿಕೆಯಿಂದಿರಿ

ಜನರು ಎಚ್ಚರವಾಗಿರದಿದ್ದರೆ, ದೇಶದ ಮುಖ್ಯ ಸಂಪತ್ತನ್ನು ಉತ್ಪಾದಿಸಲು ಲಕ್ಷ್ಯ ಕೊಡದಿದ್ದಲ್ಲಿ, ಬಡವರನ್ನು ಅವರು ದಿಕ್ಕಿನಿಂದ ಮೇಲಕ್ಕೆ ಎತ್ತಲಾರರು. ಆಹಾರ ಮತ್ತು ವಸ್ತ್ರಗಳಲ್ಲಿ ಹಳ್ಳಿಗಳು ಸ್ವಾವಲಂಬಿಗಳೂ ಸ್ವಾತಂತ್ರ್ಯಯುಗಳೂ ಆಗಿರುವುದು ಖಂಡಿತವಾಗಿ ಅವಶ್ಯಕ; ಮತ್ತು ನೈರ್ಮಲ್ಯ, ವಿದ್ಯಾಭ್ಯಾಸ, ರಕ್ಷಣೆ ಮತ್ತು ನ್ಯಾಯದಾನ ಇವುಗಳಲ್ಲಾದರೂ ಇವೂ ಹಾಗೇ ಆಗಬೇಕು ಅಂಥ ಹಳ್ಳಿಗಳನ್ನು ರಚಿಸಿದಾಗಲೇ ಭಾರತ ನಿಜವಾಗಿಯೂ ಸ್ವತಂತ್ರವೆನಿಸುವುದು.

ನಿಜ ಸ್ವಾತಂತ್ರ್ಯ

ಗಾಂಧೀಜಿಗೆ ಸ್ವಾತಂತ್ರ್ಯದ ನಿಜವಾದ ಕಲ್ಪನೆಯಿತ್ತು. ಅವರು ಹಳ್ಳಿಗಳ ಪ್ರಾಮುಖ್ಯವನ್ನು ಅರಿತಿದ್ದರು. ಮತ್ತು ಅದಕ್ಕಾಗಿಯೇ ಅವರ ಕಾರ್ಯಕ್ರಮದಲ್ಲಿ ಅದಕ್ಕೆ ಗೌರವ ಸ್ಥಾನವನ್ನು ಕೊಟ್ಟಿದ್ದಾರೆ. ಭಾರತವು ಸಣ್ಣ ಹಳ್ಳಿಗಳ ಒಂದು ಪ್ರಾರ್ಥನಾಸಭೆಯಾಗಿದೆ. ಮತ್ತು ಹಳ್ಳಿಗಳ ಅಭಿವೃದ್ಧಿಯೇ ಭಾರತದ ಅಭಿವೃದ್ಧಿ ಎಂದು ಅವರು ಕಂಡರು. ವಿಕೇಂದ್ರೀಕೃತ ಸಮಾಜದಲ್ಲಿ ಮಾತ್ರ ಅಹಿಂಸೆಗೆ ತಕ್ಕ ವಾತಾವರಣ ಉಳಿಯಬಹುದೆಂದೂ ಅವರು ಅರಿತಿದ್ದರು. ಕೇಂದ್ರೀಕರಣದಲ್ಲಿ ಹಿಂಸೆ ಅನಿವಾರ್ಯ. ಯುರೋಪಿನ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಸಂಘಟನೆಗಳು ಇದಕ್ಕೆ ಸಾಕಷ್ಟು ಪ್ರಮಾಣಗಳನ್ನು ಕೊಟ್ಟಿವೆ. ಅವಕ್ಕೆ ಯುದ್ಧವನ್ನು ನಿಲ್ಲಿಸಲು ಸಾಧ್ಯವಾಗಿಲ್ಲ. ಅಂಥ ಕೇಂದ್ರೀಕರಣವನ್ನು ತಪ್ಪಿಸಿ ನಿಜ ಸ್ವಾತಂತ್ರ್ಯದ ದೃಷ್ಟಾಂತವನ್ನು ಜಗತ್ತಿಗೆ ಭಾರತ ತೋರಿಸಿದರೆ ಮಾತ್ರ ಅದು ನಿಜವಾಗಿ ಸ್ವತಂತ್ರವೆಂದೆನಿಸುವುದು. ನೀವಿನ್ನೂ ನಿಜ ಸ್ವಾತಂತ್ರ್ಯವನ್ನು ಸಂಪಾದಿಸಿಲ್ಲ. ವಸ್ತುಸ್ಥಿತಿಯತ್ತ ತಿರುಗಿದರೆ ಜಗತ್ತಿನಲ್ಲಿ ಯಾರೂ ಅದನ್ನು ಸಾಧಿಸಿಲ್ಲ. ಅಮೇರಿಕ ಮತ್ತು ರಶಿಯಗಳು ಕೂಡ ಸ್ವಾತಂತ್ರ್ಯದ ನ್ಯಾಯ್ಯವಾದ ಉದಾಹರಣೆಗಳಾಗಿಲ್ಲ. ಆ ದೇಶಗಳಲ್ಲಿ ಜ್ಞಾನ ಮತ್ತು ಅಭಿಪ್ರಾಯಗಳು ಕೂಡ ವರ್ಗೀಕೃತವಾಗಿ ಮೇಲಿನವರು ಹೇಳಿದ ದ್ವಾರದಿಂದಲೇ ಹೊರಬೀಳಬೇಕಾಗಿದೆ. ಒಂದು ಅಭಿಪ್ರಾಯವನ್ನು ತಾಳಲು ಕೂಡ ಸ್ವಾತಂತ್ರ್ಯವಿಲ್ಲದಲ್ಲಿ ನಿಜವಾದ ಸ್ವಾತಂತ್ರ್ಯ ಇರುವುದು ಸಾಧ್ಯವೇ ಇಲ್ಲ.

ಗ್ರಾಮಸೇವೆ—ಬುದ್ಧಿವಂತರ ಮತ್ತು ಪ್ರತಿಭಾವಂತರ ಕರ್ತವ್ಯ

ಬುದ್ಧಿವಂತರು ಸರಕಾರಗಳ ಮತ್ತು ಅವುಗಳ ವಿವಿಧ ಶಾಖೆಗಳ ಮುಖ್ಯಾಧಿಕಾರಿಗಳಾಗಿರಬೇಕೆಂದು ಕೆಲವರ ವಿಚಾರ. ವಿಶ್ವವಿದ್ಯಾಲಯದ ಅಧ್ಯಾಪಕರು ಬುದ್ಧಿವಂತರಾಗಿರಬೇಕೆಂದು ಅವರು ಒಪ್ಪಲೂಬಹುದು. ಆದರೆ ಪ್ರಾಥಮಿಕ ವಿದ್ಯಾದಾನ ಮತ್ತು ಗ್ರಾಮ ಕಾರ್ಯಗಳಿಗೆ ಸಾಮಾನ್ಯ ಮಂದಮತಿಗಳೇ ಸಾಕೆಂದು ಅವರ ಅಭಿಪ್ರಾಯ. ಇದೊಂದು ದೊಡ್ಡ ತಪ್ಪು. ಮಗುವಿನ ಶಿಕ್ಷಣಕ್ಕೆ ಅತ್ಯಂತ ಬುದ್ಧಿವಂತ ಮತ್ತು ಪ್ರತಿಭಾವಂತ ಜನರು ಅವಶ್ಯಕ. ಮಗುವಿನದೊಂದು ಅವಶ್ಯ ಮಿದುಳು, ಅದನ್ನು ಎಚ್ಚರಿಕೆಯಿಂದ ಬೆಳೆಸಬೇಕು. ಅದು ಸೊನ್ನೆಯಿಂದ ಅನಂತವನ್ನು ಸೃಜಿಸುವಂಥ ಕೆಲಸ. ಬ್ರಹ್ಮನು ಶೂನ್ಯದಿಂದ ಪ್ರಪಂಚವನ್ನು ಹುಟ್ಟಿಸಿದನು. ಆದ್ದರಿಂದ ಮಕ್ಕಳಿಂದ ಉತ್ತಮ ನಾಗರಿಕರನ್ನು ನಿರ್ಮಿಸುವದು ಅಂಥವರ ಪಾಲಿನ ಕರ್ತವ್ಯವಾಗಿದೆ.

ಗಾಂಧಿಯವರ ಸ್ವರಾಜ್ಯಕಲ್ಪನೆ

ಗಾಂಧಿಯವರು ಸ್ವರಾಜ್ಯದ ಸಂಗತಿಯನ್ನು ನಮಗೆ ಹೇಳಿದ್ದಲ್ಲದೆ ತಮ್ಮ ಸ್ವರಾಜ್ಯ ಕಲ್ಪನೆಯನ್ನೂ ವಿವರಿಸಿದ್ದಾರೆ. ಬಡವರಿಗೆ ಸಹಾಯ ಮಾಡುವ ಅಧಿಕಾರವನ್ನು ಪಡೆಯುವುದು ಸ್ವರಾಜ್ಯದ ಧ್ಯೇಯವೆಂದು ಅವರು ನಿರೂಪಿಸಿದರು. ತಮಗೆ ಸಿಕ್ಕಿದ ಅಧಿಕಾರವು ಉತ್ಪತ್ತಿಗಾಗದೆ ತಮ್ಮ ವಿನಾಶಕ್ಕೆ ಕಾರಣವಾಗುವುದೆಂಬುದನ್ನು ಜನರು ಮರೆತರೆ ಅದೊಂದು ಪಿಶಾಚಶಕ್ತಿಯಾಗುವದಷ್ಟೇ ಅಲ್ಲ ದೇಶಕ್ಕೊಂದು ಶಾಪವಾಗಿ ಪರಿಣಮಿಸದಿರದು. ತಾನೊಂದೇ ಹೋಗದೆ ತನ್ನ ಜೊತೆಗೆ ನಾವಿಗಳ ಸರಮಾಲೆಯನ್ನೂ ಎಳೆದೊಯ್ಯುವ ರೈಲೆಂಜಿನ್ನಿನಂತಾಗಬೇಕು ಆ ಶಕ್ತಿ. ಅಂದರೆ ಆದರಂತೆ ಅಧಿಕಾರಾರೂಢರು ತಮ್ಮ ಪ್ರಗತಿ ಪಥದಲ್ಲಿ ಇಡಿಯ ನಾಡನ್ನೇ ಸಾಗಿಸಿಕೊಂಡು ಹೋಗಬೇಕು.

('ಹರಿಜನ'ದ ಹಿಂದುಸ್ತಾನೀ ಮೂಲ ಅನುವಾದ)

೧೭–೮–೪೮

ಆಯುರ್ದಾಯ

ಭಾರತದ ಜನರ ಆಯುಷ್ಯಪ್ರಮಾಣದ ಸರಾಸರಿ ೨೭ ವರ್ಷ. ಚೀನ ಮತ್ತು ಇತರ ಆಗ್ನೇಯ ಏಶಿಯದ ಜನರ ಆಯುಸ್ಸೂ ಇಷ್ಟೇ ಇದೆ. ಆದರೆ ಅಮೇರಿಕದ ಸಂಯುಕ್ತ ಸಂಸ್ಥಾನವಾಸಿಗಳ ವಯಸ್ಸಿನ ಸರಾಸರಿ ೬೪ ವರ್ಷ. ನ್ಯೂಜಿಲೆಂಡ್, ಆಸ್ಟ್ರೇಲಿಯ ಮತ್ತು ಸ್ವೀಡನ್ನಿನವರದು ಇನ್ನೂ ಹೆಚ್ಚು. ಇವೆರಡರ ನಡುವಿನ ಅಂತರದಲ್ಲಿ ಈಜಿಪ್ತಿನವರಿದ್ದಾರೆ. ಅವರ ಸರಾಸರಿ ೩೧ ವರ್ಷ; ಹಾಗೇ ಬ್ರೆಜಿಲ್ಲಿನವರದು ೪೦ ವರ್ಷ; ಬಲ್ಗೇರಿಯನ್ನರದು ೪೫ ವರ್ಷ; ಜಪಾನಿನವರು ೪೪ ವರ್ಷ; ಇಟಲಿಯನ್ನರು ೫೪ ರ ಸರಾಸರಿಗೆ ಬರುತ್ತದೆ. ಫ್ರಾನ್ಸಿನಲ್ಲಿ ೫೬ ವರ್ಷಗಳು ಸಾಮಾನ್ಯರ ಸರಾಸರಿ ಆಯುರ್ದಾಯ. ಇಂಗ್ಲೆಂಡಿನವರು ಸರಾಸರಿ ೬೨ ವರ್ಷ ಬದುಕುತ್ತಾರೆ. ಇಡೀ ಜಗತ್ತಿನ ಸರಾಸರಿಯೊಂದರೆ ೩೭ ವರ್ಷಗಳು.

ಪ್ರಾಚೀನ ಯುಗದಲ್ಲಿ ೧೮ ವರ್ಷಗಳು ಮಾನವ ಜೀವನದ ಸರಾಸರಿಯಾಗಿತ್ತು. ಆದರೀಗ ವಿಜ್ಞಾನದ ಪ್ರಭಾವ ಬೆಳೆದ ನಾಡುಗಳಲ್ಲಿ ನೋಡಿದರೆ ಆಯುಃಪ್ರಮಾಣವನ್ನು ಮೇಲ್ಪಟ್ಟಕ್ಕೆ ತರಲಾಗಿದೆ. ಅದರಲ್ಲೂ ಅಮೇರಿಕದಲ್ಲಿ ಈ ಬಗ್ಗೆ ವಿಜ್ಞಾನಿಗಳು ಮಾಡಿದ ಸಹಾಯ ಅಪಾರವಾಗಿದೆ. ೧೯ ನೆಯ ಶತಮಾನದಲ್ಲಿ ಅವರ ವಯಸ್ಸಿನ ಸರಾಸರಿ ೩೬ ವರ್ಷಗಳು; ಈಗ ಅದನ್ನು ಇಮ್ಮಡಿ ಮಾಡಲಾಗಿದೆ.

ವಿವಿಧ ಪ್ರಪಂಚ

ಮಾನವನ ನಂತರ ಹುಳುಗಳ ನಾಗರಿಕತೆ?

ಇಂಗ್ಲಿಷ್ ರಾಜ್ಯವು ಕೇವಲ ೧ ಸಾವಿರ ವರ್ಷಗಳ ಹಿಂದೆ ಪ್ರಾರಂಭವಾಯಿತು. ಮನುಷ್ಯನ ಆಳಿಕೆ ಈ ಜಗತ್ತಿನಲ್ಲಿ ಪ್ರಾರಂಭವಾಗಿ ಈಗ ಸುಮಾರು ೧ ಲಕ್ಷ ವರ್ಷವಾಗಿರಬಹುದು—ಎಂದು ಬ್ರಿಟಿಷ ಇತಿಹಾಸಕಾರನಾದ ಆರ್‌ನಾಲ್ಡ್ ಜೆ. ಟಾಯ್ನಬಿ ಬರೆಯುತ್ತಾನೆ.

ಇಂದಿನ ರಾಷ್ಟ್ರ ಜೀವನವೆಂಬುದು ನಶ್ವರವೂ ಪರಾವಲಂಬಿಯೂ ಆದ ರಾಜಕೀಯ ಸಂಗತಿ. ಹಳೆಯ ಕಾಲದ ದೊಡ್ಡ ಮನುಷ್ಯರು ತಾವು ಇಡೀ ಜಗತ್ತನ್ನು ಆಳಿಬಿಟ್ಟೆವೆಂದೂ ತಾವು ಪ್ರತ್ಯೇಕವಾಗಿ ದೇವಾಂಶ ಸಂಭೂತರೆಂದೂ ತಮ್ಮ ಸಮಕಾಲೀನರಾದ ಇತರ ದೊಡ್ಡ ಮನುಷ್ಯರನ್ನು ಲೆಕ್ಕಿಸದೆ, ತಿಳಿಯದೆ ತಮ್ಮ ಬೆನ್ನನ್ನು ಚಪ್ಪರಿಸಿಕೊಂಡರು. ರಶಿಯದಲ್ಲಿ ಸೀಸರನು ಪ್ರಪಂಚವಿಜೇತನೆಂದು ಸರ್ವಾಧಿಕಾರ ವಹಿಸಿದ್ದಾಗ ಚೀನದಲ್ಲಿಯ ಚಕ್ರವರ್ತಿಗಳು ಅವನ ಅಸ್ತಿತ್ವದ ಅರಿವಿಲ್ಲದೆ ಅವನಂತೆಯೇ ತಾವೇ ಏಕಮೇವಾದ್ವಿತೀಯರೂ ಸರ್ವೋತ್ತಮರೂ ಎಂದು ತಿಳಿದುಕೊಂಡಿದ್ದರು. ವಿಕ್ಟೋರಿಯಾ ಯುಗದಲ್ಲಿ ಲಂಡನ್ ನಾಗರಿಕರು ತಮ್ಮ ಜೇಕೆಯಂತೆ ಸೂರ್ಯನು ಯಾವಾಗಲೂ ನಡುನೆತ್ತಿಯ ಮೇಲೆ ಕಾಣಿಸುವ ವಿಧೇಯತೆಯನ್ನು ತೋರುವನೆಂದು ನಂಬಿದ್ದರು.

ಈ ಹುಚ್ಚೇಗಾವ ಬೆಳೆಯಿತು? ನಾಗರಿಕ ಪರಂಪರೆಯ ಮೂಲಕ ರಾಷ್ಟ್ರ ಜೀವನವನ್ನು ನೋಡುವುದೇ ಸತ್ಯದೃಷ್ಟಿ. ನಮ್ಮ ಜಗತ್ತು ದೇವರ ರಾಜ್ಯದ ಒಂದು ಪ್ರಾಂತ ಎಂಬ ಅರಿವು ಹುಟ್ಟುವುದು ಸತ್ಯಜ್ಞಾನ. ಐರೋಪ್ಯ ನಾಗರಿಕತೆ ಯುರೋಪಿನಲ್ಲಿ ಇಳಿಮೊಗವಾದರೂ ಅಮೇರಿಕದಲ್ಲಿ ಉನ್ನತವಾಗಿ ಸಾಗಿದೆ. ಆದರೆ ಅದು ಚಿರಸ್ಥಾಯಿಯಾಗದು. ಸದ್ಯದಲ್ಲೇ ಜಗತ್ತು ರಾಜಕೀಯವಾಗಿ ಒಂದಾಗಿಬಿಟ್ಟರೆ ಐರೋಪ್ಯರ ಕ್ರಿಶ್ಚಿಯನ್ ನಾಗರಿಕತೆ ಉಳಿಯದು. ಆಗ ಕನ್‌ಫೂಶಿಯಸ್, ಸಾಕ್ರೆಟೀಸ್, ಕ್ರಿಸ್ತ, ಬುದ್ಧ, ಜರತುಷ್ಟ್ರ ಮತ್ತು ಮಹಮ್ಮದರ ಬೋಧವನ್ನು ಜೀರ್ಣಿಸಿಕೊಂಡ ನಾಗರಿಕತೆಗಳು ಮುಂದೆ ಬಂದಾವು.

ಈ ಜಾಗತಿಕ ಏಕೀಕರಣವು ಬಿಸ್ಮಾರ್ಕನ್ನ ಬಲಾತ್ಕಾರದಿಂದ ಜರ್ಮನಿಯ ಭಿನ್ನ ಭಾಗಗಳನ್ನು ಒಟ್ಟುಗೂಡಿಸಿದಂತೆ ಹಿಂಸೆಯಿಂದ ಪ್ರಾರಂಭವಾದರೂ ಆಗಬಹುದು ಇಲ್ಲವೆ ಪಾಶ್ಚಾತ್ಯ ರಾಷ್ಟ್ರಗಳ ಒಪ್ಪಂದದಿಂದ ಸಂಭವಿಸಿದರೂ ಸಂಭವಿಸಬಹುದು. ಇಂದಿನ ಪ್ರಧಾನ ನಾಗರಿಕತೆಗಳು ಅಣುಬಾಂಬಿನಿಂದ ಸಮೂಲ ನಾಶವಾಗುವುದೊಂದು ಮಾತ್ರ ಅಖಂಡ ಜಗತ್ತಿನ ನಿರ್ಮಾಣವನ್ನು ತಡೆಯಬಲ್ಲುದು.

ಹೀಗೆ ಅಣುಬಾಂಬಿನಿಂದ ಹಿಂದೀ, ಚೀನೀ, ಪಾಶ್ಚಾತ್ಯ ಮುಂತಾದ ನಾಗರಿಕತೆಗಳು ಭಸ್ಮೀಭೂತವಾಗಿ ಹೋದರೆ ಮಧ್ಯ ಆಫ್ರಿಕದ ಪಿಗ್ಮಿ ಜನರು ಅಳಿದುಳಿದ ನಾಗರಿಕ ಪರಂಪರೆಗಳನ್ನು ಬಳಸಿಕೊಂಡು ಹೊಸ ನಾಗರಿಕತೆಯ ಜನಕರಾದಾರು. ಆ ಜನರಲ್ಲಿ ದೇವರ ಸ್ವಭಾವ ಮತ್ತು ಮನುಷ್ಯನೊಡನೆ ಅವನ ಸಂಬಂಧ ಇವುಗಳ ಬಗ್ಗೆ ಪವಿತ್ರವೂ ಉದಾತ್ತವೂ ಆದ ತಿಳುವಳಿಕೆಯಿದೆ.

ಒಂದು ವೇಳೆ ಅವರೂ ಅಣುಬಾಂಬಿನಿಂದ ನಿರ್ನಾಮ ಹೊಂದಿದರೆ ೨೫ ಕೋಟಿ ವರ್ಷಗಳಿಂದ ಬಾಳಿಕೊಂಡು ಬಂದ ಸಪಕ್ಷ ಕ್ರಿಮಿಗಳು ಬುದ್ಧಿ ಬೆಳೆಸಿಕೊಂಡು ನಮ್ಮ ನಾಗರಿಕತೆಯ ವಿವರ್ತದ ಮುನ್ನಡೆಗಳನ್ನು ಕೇವಲ ಅರ್ಥಹೀನವಾದ ಆವೇಶದ ಗೊಂದಲ ಎಂದು ಅಲಕ್ಷಿಸಿ ನಾಗರಿಕತೆಯ ಪುನಾರಚನೆಯನ್ನು ಕೈಕೊಳ್ಳಬಹುದು ಎಂದು ಮುಂತಾಗಿ ಮೇಲಿನ ಇತಿಹಾಸಕಾರನು ಸಿದ್ಧಾಂತಿಸಿದ್ದಾನೆ!

ಆಸ್ಪತ್ರೆಯ ಪತ್ರಿಕೆಗಳು

ಅಮೇರಿಕದಲ್ಲಿ ಅತಿ ಹೆಚ್ಚು ಜನಪ್ರಿಯವೆನಿಸಿದ ಅನೇಕ ಪತ್ರಿಕಾ ಕಾರ್ಯಾಲಯಗಳಿವೆ. ಅವುಗಳಲ್ಲಿ ಅನೇಕಾನೇಕ ಕೆಲಸಗಾರರಿದ್ದಾರೆ. ಎಂಥವರು? ಅವರಲ್ಲಿ ೧೦ನೆಯ ಒಂದಂಶ ಜನರಿಗೆ ಪೂರ್ವಾನುಭವವಿಲ್ಲ. ಕೆಲವರು "ಕಾಲಾಳು"ಗಳಿಗೆ ಕಾಲೇ ಇಲ್ಲ. ಕೆಲ ವರದಿಗಾರರು ಕುರುಡರು; ನಿಕ್ಕವರು ಕಿವುಡರು ಎಂದು ಡೊಗ್ಲಸ್ ಲಾರೆ ಸೇನನು ಬರೆಯುತ್ತಾನೆ.

ಅಲ್ಲಿ ಒಟ್ಟು ಸುಮಾರು ೧೫೫ ಆಸ್ಪತ್ರೆಯ ಪತ್ರಿಕೆಗಳಿವೆ. ಅವುಗಳ ಕಾರ್ಯಾಲಯದಲ್ಲಿ ಮೇಜುಗಳೆಂದರೆ ಆಸ್ಪತ್ರೆಯ ಹಾಸಿಗೆಗಳು. ಅಕ್ಷರ ಜೋಡಿಸುವ ಕೋಣೆಗಳು ರೋಗಿ ಮಲಗುವ ಚಿಕ್ಕಮನೆ. ಇದ್ದ ಬಿದ್ದ ಎಲ್ಲ ಯಂತ್ರೋಪಕರಣಗಳನ್ನೂ ಬಳಸಲಾಗುತ್ತದೆ. ಕುರ್ಚಿಗಾಡಿಗಳು ಬಹಳವಾಗಿ ಪತ್ರಿಕೆಯನ್ನು ಹಂಚಲು ಉಪಯೋಗಿಸಲ್ಪಡುತ್ತವೆ. ಟೈಪ್‌ರೈಟರುಗಳಿದ್ದರೂ ಬಹಳ ಮಂದಿ ವರದಿಗಾರರಿಗೆ ಟೈಪ್ ಮಾಡಲು ಬರದು.

ಒಂದೊಂದು ಪತ್ರಿಕೆಗಳು ೫ ರಿಂದ ೧೦,೦೦೦ದ ವರೆಗೆ ಖರ್ಚಾಗುತ್ತವೆ. ಕೆಲವೊಮ್ಮೆ ಜಾಹೀರಾತು ಇಲ್ಲದೆ ನಡೆಸಬೇಕಾಗಿದ್ದರೂ ಇನ್ನು ಕೆಲವೊಮ್ಮೆ ಉಚಿತವಾಗಿ ಪತ್ರಿಕೆಗಳನ್ನು ಹಂಚಬೇಕಾಗಿ, ಬಂದರೂ ಪತ್ರಿಕಾವ್ಯವಸಾಯವು ಅಮೇರಿಕದಲ್ಲಿ ಜನಮನವನ್ನು ತಿದ್ದುವ ದೃಷ್ಟಿಯಿಂದ ಲಾಭಕರವೆಂದು ಹೇಳಲಾಗುತ್ತದೆ. ಒಟ್ಟು ನೂರಕ್ಕೆ ೯೦ರಷ್ಟು ಕೆಲಸವನ್ನು ಆಸ್ಪತ್ರೆಯ ರೋಗಿಗಳೇ ಮಾಡುತ್ತಾರೆ. ಇದರಿಂದ ರೋಗಿಗಳಿಗೆ ಜಗತ್ತಿನ ಸುದ್ದಿ ತಿಳಿದಂತೆಯೂ ಆಗುತ್ತದೆ. ಆರೋಗ್ಯದಾಯಕವಾದ ಒಂದು ಉದ್ಯೋಗ ಸಿಕ್ಕಂತೆಯೂ ಆಗುತ್ತದೆ.

ಹೆಸರಿನಲ್ಲಿ ಹಸಿರು!

ಹೆಸರಿನಲ್ಲೇನಿದೆ? ವ್ಯಕ್ತಿ ಮತ್ತು ವಸ್ತುಗಳ ಗುಣದ ಮೇಲೆ ಅದೆಂತು ಪರಿಣಾಮಿಯಾಗುತ್ತದೆ? ಎಂದು ಕೇಳುವುದು ಸುಲಭ. ಆದರೆ ವಸ್ತುವಿನ ಮೇಲೆ ಯಾವ ಪರಿಣಾಮವೂ ಆಗದಿದ್ದರೂ ವ್ಯಕ್ತಿಯ ದೃಷ್ಟಿಯ ಮೇಲೆ ಮತ್ತು ಅವರ ಸಹಜೀವಿಗಳ ಬುದ್ಧಿಯ ಮೇಲೆ ಹೆಸರು ಸಾಕಷ್ಟು ಪರಿಣಾಮವನ್ನು ಮಾಡಿಯೇ ತೀರುವುದೆಂಬುದು ಶಾಸ್ತ್ರಸಿದ್ಧವಾದುದು. ಗುಲಾಬಿ ಎಂಬ ಹೆಸರಿನಲ್ಲಿ ಕಮಲ ಎಂಬ ಹೆಸರಿನಲ್ಲಿರುವ ಪಾವಿತ್ರ್ಯವಿಲ್ಲದುದು ಆಯಾ ಹೆಸರಿನ ವ್ಯಕ್ತಿಗಳ ಮನದ ಮೇಲೆ ಮತ್ತು (ಅವರೊಡನೆ ವ್ಯವಹರಿಸುವ ವ್ಯಕ್ತಿಗಳ ದೃಷ್ಟಿಯಲ್ಲಿ) ಹೆಸರು ಹೊತ್ತವರ ಗುಣಸ್ವಭಾವಗಳ ಬೆಲೆ ಕಟ್ಟುವಿಕೆಯ ಮೇಲೆ ಕೆಲವು ಮಟ್ಟಿಗೆ ಪರಿಣಾಮ ಮಾಡುತ್ತದೆಂಬುದು ಅನುಭವಸಿದ್ಧವಾದ ಮಾತು.

ಈಗ ಪಾಕಿಸ್ತಾನದಲ್ಲಿ ನೆಲಸಿದ ಆಂಗ್ಲೋ—ಇಂಡಿಯನ್ನರಲ್ಲಿ ಇದ್ದ ಜಾತಿವಾಚಕವನ್ನು ಹಾಗೇ ಉಳಿಸಿಕೊಳ್ಳಬೇಕೆಂಬವರ ಪಕ್ಷ, ಪಾಕಿಸ್ತಾನ ಪ್ರಜೆಗಳೊಡನೆ ಸಮರಸ ಹೊಂದಿರುವುದರಿಂದ ಕೇವಲ ಪಾಕಿಸ್ತಾನಿಗಳೆಂದು ಕರೆಯಬೇಕೆಂಬವರ ಪಕ್ಷ ಮತ್ತು ಕುಲ ವೈಶಿಷ್ಟ್ಯವನ್ನು ಉಳಿಸಿಕೊಂಡೂ ಹೊಸ ರಾಜ್ಯದ ಪ್ರಜೆಗಳಾದುದರಿಂದ ಆಂಗ್ಲೋ-ಪಾಕಿಸ್ತಾನಿಗಳೆಂದು ಹೆಸರಿಟ್ಟುಕೊಳ್ಳಬೇಕೆಂಬುದರ ಪಕ್ಷ— ಈ ಮೂರರಲ್ಲಿ ಒಮ್ಮತವುಂಟಾಗದುದರಿಂದ ಅವು ತಮ್ಮಲ್ಲಿ ಸಾರ್ವತ್ರಿಕ ಮತಗಣನೆ ನಡೆಸಬೇಕೆಂದು ಹೇಳತೊಡಗಿವೆಯಂತೆ! ಅಂದಮೇಲೆ ಹೆಸರಿನಲ್ಲೇ ಎಲ್ಲವೂ ಇದೆ ಎಂದು ಹೇಳಲಾಗದಿದ್ದರೂ ಹೆಸರಿನಲ್ಲೂ ಏನೋ ಇದೆ ಎಂದು ಹೇಳಬೇಕಾಯಿತು. ಅದೇ ಅದು— ಹೆಸರಿನಲ್ಲಿ ಹಸಿರು!

ಹುಡುಗನ ಬುದ್ಧಿಮತ್ತೆ!

ಬ್ರಿಟಿಶ ಆಕಾಶವಾಣಿಯವರು ಹೊಸಬರಿಗೆ ಬಹಳ ಪ್ರೋತ್ಸಾಹ ಕೊಡುತ್ತಾರೆ; ಈಗ ಕೀತ್ ರಾಸ್ ಎಂಬ ಒಬ್ಬ ೮ ವರ್ಷದ ಬಾಲಕನನ್ನು ಗ್ರಂಥಕಾರನೆಂದು ತೆಗೆದುಕೊಂಡಿದ್ದಾರೆ. ಕಳೆದ ಆಗಸ್ಟಿನಲ್ಲಿ ಅವನು ೨॥ ನಿಮಿಷಗಳಲ್ಲಿ ಮುಗಿದ ಮೂರಂಕದ ಅದ್ಭುತ ರಸಪ್ರಧಾನ ನಾಟಕವನ್ನು ಆಕಾಶವಾಣಿಯಲ್ಲಿ ಚಿತ್ರಿಸಲಾಯಿತು ಅದು ಅವನ ಮೊದಲ ಕೃತಿ. 'ನೆಪೋಲೀಯನ್ನನ ತಪ್ಪು' ಎಂಬುದು ಅವನ ಮೂರಂಕದ ೨ನೆಯ ನಾಟಕ. ಅದು ೩ ನಿಮಿಷ ೩೩ ಸೆಕಂದುಗಳ ವರೆಗೆ ಸಾಗುತ್ತದೆ. ಅದರಲ್ಲಿ ೮ ಪಾತ್ರಗಳಿವೆ; ವಿಚಿತ್ರ ಪರಿಣಾಮವನ್ನುಂಟು ಮಾಡುವ ಸನ್ನಿವೇಶಗಳಿವೆ.

ಬೆಂಗಳೂರ [illegible] ಓಟದ ಸ್ಪರ್ಧೆಯಲ್ಲಿ ನಂಬ್ರ [illegible] ಹಾಕಿಂದಿನ [illegible] (ನಂ. [illegible]) [illegible] ಹುಡುಗಿ [illegible] (ನಂ. [illegible]) ಗೆದ್ದಳು. ಮತ್ತು ಆಸ್ಟ್ರೇಲಿಯದ ಎಸ್. ಬಿ. ಸ್ಟ್ರಿಕ್ ಲ್ಯಾಂಡಳು (ನಂ. [illegible]) ೩ ನೆಯವಳಾಗಿ ಬಂದಳು.

ಜನಮತ

ಗೋರಕ್ಷಣಾ ಮಸೂದೆಯ ಅವಶ್ಯಕತೆ

ಗೋವು ಮೊದಲಾದ ಪಶುಗಳ ಮಾಂಸವು ಸ್ವಾಸ್ಥ್ಯಕ್ಕೆ ಅತ್ಯಂತ ಹಾನಿಕರವಿರುವುದು. ಕೇವಲ ರೋಗೋತ್ಪಾದಕ ಮಾತ್ರ ಆಗಿರದೆ ಬುದ್ಧಿನಾಶಕವೂ, ಆಲಸ್ಯ, ಅಸಹನೆ, ಕ್ರೌರ್ಯ ಮೊದಲಾದ ದುಷ್ಟ ಗುಣಗಳನ್ನು ಹೆಚ್ಚಿಸುವಂತಹದೂ ಆಗಿರುವುದು. ಅದ್ದರಿಂದ ಜನಾಂಗದಲ್ಲಿನ ಅಂತರಿಕ ಕಲಹಶಾಂತಿಗಾಗಿ—ದಯೆ, ವಿವೇಕ, ಸುಜ್ಞಾನ ಮೊದಲಾದ ಸದ್ಗುಣಗಳ ಅಭಿವೃದ್ಧಿಗಾಗಿ—ಕೆಲ ಜನರಲ್ಲಿರುವ ಗೋಮಾಂಸಸೇವನೆಯ ದುರಭ್ಯಾಸವನ್ನು ಸಮೂಲವಾಗಿ ಕಿತ್ತುಹಾಕಲೇ ಬೇಕು.

ಕೃಷಿಗೆ ಉಪಯುಕ್ತವಿರುವ ಪಶುಗಳನ್ನು ಮಾಂಸಲೋಭದಿಂದ ನಾಶಗೊಳಿಸುವುದೆಂದರೆ ಆರ್ಥಿಕ ದೃಷ್ಟಿಯಿಂದಲೂ ದೇಶಕ್ಕೆ ದ್ರೋಹ ಬಗೆದಂತಾಗುವುದು. ರಾಸಾಯನಿಕ ಗೊಬ್ಬರಗಳನ್ನು ಚೆಲ್ಲಿ ಯಂತ್ರಗಳಿಂದ ಉತ್ತು ಬಿತ್ತಿ ಸಾರ್ವತ್ರಿಕವಾಗಿ ಸಾಗುವಳಿ ಮಾಡುವುದು ಭಾರತದಂತಹ ಹೆಚ್ಚಿನ ಜನಸಂಖ್ಯೆಯುಳ್ಳ ಬಡದೇಶಕ್ಕೆ ಸದ್ಯದ ಪರಿಸ್ಥಿತಿಯಲ್ಲಿ ಅವ್ಯವಹಾರ್ಯವೇ ಇರುವುದು. ಬದಲಿಗೆ ಇಲ್ಲಿನ ಪಶುಸಂಪತ್ತನ್ನೇ ಅಭಿವೃದ್ಧಿಗೊಳಿಸಿ— ಅದನ್ನು ತಕ್ಕ ರೀತಿಯಲ್ಲಿ ಬಳಸಿಕೊಂಡಲ್ಲಿ ಉತ್ತಮವಾದ ವನಸ್ಪತಿ ಗೊಬ್ಬರದಿಂದ ಶ್ರೇಷ್ಠ ಗುಣದ ಆಹಾರಧಾನ್ಯ-ಹಣ್ಣು ಹಂಪಲು—ತರಕಾರಿಗಳನ್ನು ಬೆಳೆಯಿಸಿ ಜನಾಂಗದ ಆಹಾರದ ಕೊರತೆಯನ್ನು ನೀಗಿಸಬಹುದು. ಭೂಮಿಯ ಗುಣವೂ ಸುಧಾರಿಸಲ್ಪಡುವುದು. ವಿಶೇಷತಃ ಗೋರಕ್ಷಣಾಪೂರ್ವಕವಾದ ಕೃಷಿಯಿಂದ ದೇಶದಲ್ಲಿ ಆರ್ಥಿಕ ಸಮಾನತೆಯುಂಟಾಗುವುದು.

ಜನಾಂಗದ ಹಿತಚಿಂತಕರು ಈ ವಿಷಯದಲ್ಲಿ ಸಾಕಷ್ಟು ಗಮನವಿತ್ತು ಗೋರಕ್ಷಣ ಮಸೂದೆಯು ನಿರ್ಮಿತವಾಗಿ ಪ್ರಚಲಿತವಾಗುವಂತೆ ಮನಃಪೂರ್ವಕವಾಗಿ ಪ್ರಯತ್ನಿಸುವರೆಂದು ಆಶಿಸುತ್ತೇನೆ.

— ವಿಶ್ವೇಶ್ವರ ಶರ್ಮಾ

ಹೊಸ ನಿಯಂತ್ರಣ

ಇದೀಗ ಹೊಸ ನಿಯಂತ್ರಣ ಪ್ರಾರಂಭವಾಗಲಿ. ನಮ್ಮ ಭಾರತದಲ್ಲಿ ಹಲವಾರು ಕಡೆಗಳಲ್ಲಿ ಅಂದರೆ ನಮ್ಮ ಮಲನಾಡಮ್ಮನ ಮಡಿಲು ಮೈಸೂರು ದೇಶದಲ್ಲಿ ಕಡಿಮೆ ಎಂದರೆ ಒಂದು ತಾಲೂಕಿನಲ್ಲಿ ಸಾವಿರಾರು ಎಕರೆ ನೀರಾವರಿ ತರಿ ಜಮೀನುಗಳು ರೂಢಿಯಲ್ಲಿ ಇಲ್ಲದೆ ಹಾಳುಬಿದ್ದಿವೆ. ಕಾರಣವೇನೆಂದರೆ ಹಲ್ಲಿದ್ದರೆ ಕಡಲೆ ಇಲ್ಲ, ಕಡಲೆ ಇದ್ದರೆ ಹಲ್ಲಿಲ್ಲವೆಂಬ ಗಾದೆಯಂತೆ ಜಮೀನಿನ ಮಾಲಿಕರ ಲಾಭಬಡಕತನದಿಂದ ಗೇಣಿ ಜಾಸ್ತಿಮಾಡಿರುವುದು ಒಂದು ಕಾರಣ. ಎರಡನೆಯದಾಗಿ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನಲ್ಲಿ ಏನೋ ರೈತರ ಉದ್ದಿಶ್ಯಪಟ್ಟಣಗಳಲ್ಲಿ ಡಂಗುರ ಸಾರುತ್ತಿದೆ. ಆದರೆ ಹಳ್ಳಿಗಳಲ್ಲಿ ಮಾತ್ರ ಏನೂ ಇಲ್ಲದಂತೆ ತೋರುತ್ತದೆ. ಮೂರನೆಯದಾಗಿ ಇನ್ನು ಕೆಲವರು ನಿರುದ್ಯೋಗದಿಂದ ಕಾಲಹರಣ ಮಾಡುವುದು. ಇದಕ್ಕೆ ಪ್ರೋತ್ಸಾಹಕೊಟ್ಟು ಹೊಸ ನಿಯಂತ್ರಣದಿಂದ ಜಮೀನು ಅಭಿವೃದ್ಧಿಗೆ ಬಂದಲ್ಲಿ ದವಸದ ನಿಯಂತ್ರಣವೇಕೆ?

— ಎ. ರಾಮಚಂದ್ರರಾವ್

ವ್ಯಾಪಾರ ಪ್ರಪಂಚ

ಮುಂಬಯಿ ಶೇರ ಪೇಟೆ

ತಾ. ೧೬

ಜವಳಿ	
ಅಹಮದಾಬಾದ ಅಡ್ವಾನ್ಸ	೨೮೧-೦-೦
ಬಾಂಬೆ ಡಾಯಿಂಗ್	೧೦೪೬-೪-೦
ಸೆಂಚುರಿ	೫೨೦-೦-೦
ಕೋಹಿನುರು	೪೦೦-೦-೦
ಸ್ವದೇಶಿ	೨೯೯-೦-೦
ಇತರ	
ಟಾಟಾ ಸ್ಟೀಲ ಡೆಫರ್ಡ	೧೫೭೨-೮-೦
ಇಂಡಿಯನ್ ಆಯರ್ನ	೨೪-೬-೦
ಅಸೊ. ಸಿಮೆಂಟ್ಸ	೧೫೭-೦-೦
ಸೆಂಟ್ರಲ ಬ್ಯಾಂಕ್	೮೬-೮-೦
ಇಂಪೀರಿಯಲ್ ಬ್ಯಾಂಕ ಪೂರ್ಣ	೧೯೬೦-೦-೦
ಇಂಡಿಯನ್ ಬ್ಯಾಂಕ	೨೦೫-೦-೦
ರಿಝರ್ವ ,,	೧೧೨-೮-೦
ಚಿನ್ನ--ಬೆಳ್ಳಿ	
ತಯಾರಿ ಚಿನ್ನ	೧೧೬-೦-೦
ತಯಾರಿ ಬೆಳ್ಳಿ	೧೭೬-೪-೦
ವಾಯದಾ ,,	೧೭೨-೪-೦
ಡಿಸೆಂಬರ	೧೭೪-೦-೦
ಅರಳೆ	
ಸೆಪ್ಟಂಬರ	೫೮೧-೪-೦
ಎಣ್ಣೆ ಕಾಳು	
ಶೇಂಗಾ	೧೭೦-೦-೦
ಅಗಸಿ	೨೬-೫-೦
,, ಹೊಸ ಬೆಳೆ	೨೬-೬-೦
,, ಎಣ್ಣೆ	೧೬-೦-೦

ಶಿವಮೊಗ್ಗೆ ಅಡಿಕೆ

ತಾ. ೧೫

ದೇಶಾವರ ನಂ. ೧ ಮಣ ೧ ಕ್ಕೆ	೩೦-೩೧
,, ,, ೨	೨೭-೨೮
	೨೪-೨೬
ರಾಜಾಅಲವು	೨೫-೨೮-೩೦
ತೊರೆಸಾಲು	೨೩-೨೬
ಚೆಟ್ಟಿ	೧೫-೧೭

ಸಾಂಗಲಿ

ತಾ. ೧೬

ಅರಸಿಣ ಹೊಸ (ಹೇರು)	೧೩೨
ಮೆಣಸಿನಕಾಯಿ ಹೊಸ ,,	೮೦
ಬೆಲ್ಲ ,,	೬೦
ಶೇಂಗಾ ಖಂಡಿ	೧೩೦

ಹಿಂದುಸ್ತಾನ ಗವ್ಹರ್ನರ ಜನರಲ್ಲರ ಅಂಗ, ರಕ್ಷಕರ ಮೇಲಿದ್ದ ಫೌಜದಾರ ಮನ್ಸೂಜಅಲಿ ಎಂಬವನು ೪ ತಿಂಗಳ ರಜೆ ಪಡೆದುಕೊಂಡು ಪಾಕಿಸ್ತಾನಕ್ಕೆ ಹೊರಟು ನಿಂತಾಗ ಹೊಸದಿಲ್ಲಿ ವೆಲಿಂಗ್ಟನ್ ವಿಮಾನ ನಿಲ್ದಾಣದಲ್ಲಿ ಪೋಲೀಸರು ಬಂಧಿಸಿದ್ದಾರೆ. ಅವನಬಳಿ ಹತ್ತರ ಒಂದು ಜೀವಂತ ಕಾಡತೂಸು ಮತ್ತು ೧೮ ತೆರವಾದ ಕಾಡತೂಸುಗಳಿದ್ದವು.

ಹೈದರಾಬಾದ ನಿಜಾಮರ ಶರಣಾಗತಿ!

ಶಸ್ತ್ರಾಸ್ತ್ರಕೆಳಗಿಡಲು ತಮ್ಮ ಸೈನಿಕರಿಗೆ ನಿಜಾಮರ ಆಜ್ಞೆ

ಹಿಂದೀ ಸೈನಿಕರ ಅಪೂರ್ವ ಸಾಹಸ

ತಾ. ೧೭ ಶುಕ್ರವಾರ ಸಂಜೆ ೫ ಗಂಟೆಗೆ ನಿಜಾಮರು ತಮ್ಮ ಸೈನಿಕರಿಗೆ ಹಿಂದಿ ಸೈನಿಕರ ವಿರುದ್ಧ ಯುದ್ಧ ಮಾಡುವದನ್ನು ನಿಲ್ಲಿಸಲು ಆಜ್ಞಾಪಿಸಿದರೆಂದು ಅಧಿಕೃತವಾಗಿ ಹೈದರಾಬಾದ ಆಕಾಶವಾಣಿಯು ಸಾರಿತು. ಹಿಂದುಸ್ತಾನ ಸೈನಿಕರು ಸೋಮವಾರ ಮುಂಜಾನೆ ೪ ಗಂಟೆಗೆ ಹೈದರಾಬಾದ ಸಂಸ್ಥಾನವನ್ನು ಪ್ರವೇಶಿಸಿ ಐದೇ ದಿನಗಳಲ್ಲಿ ಈ ಅಪೂರ್ವ ವಿಜಯ ಸಂಪಾದನೆಮಾಡಿದರು. ನಿಜಾಮರು ಶರಣಾಗತಿ ಪತ್ರವನ್ನು ಸಿದ್ಧಗೊಳಿಸುತ್ತಿದ್ದಾರೆ. ಲಾಯಕಅಲ್ಲಿ ಮಂತ್ರಿಮಂಡಲ ರಾಜೀನಾಮೆ ಕೊಟ್ಟಿತು.

(ಹಿಂದಿನ ಸುದ್ದಿ)

ಸೋಮವಾರ ತಾ. ೧೩ ರಂದು ನಸುಕಿನ ಜಾವ ಬ್ರಾಹ್ಮೀ ಮುಹೂರ್ತದ ೪ ಗಂಟೆಗೆ ಹಿಂದೀ ಸೈನ್ಯವು ಹೈದರಾಬಾದಕ್ಕೆ ಚಾಂದಾ, ಸೊಲಾಪೂರ, ಬಿಜವಾಡಾ ಹೀಗೆ ಮುಖ್ಯವಾಗಿ ಮೂರು ದಿಕ್ಕಿನಿಂದ ಹಾಗೂ ಇನ್ನೆರಡು ದಿಕ್ಕಿನಿಂದ ಹೀಗೆ ೫ ಕಡೆಯಿಂದ ದಂಡಯಾತ್ರೆ ಕೈಕೊಂಡಿತ್ತು.

ದಕ್ಷಿಣ ಕಮಾಂಡದ ಮುಖ್ಯಸೇನಾಪತಿಗಳಾದ ಲೆ. ಜನರಲ ಶ್ರೀ. ರಾಜೇಂದ್ರಸಿಂಗಜಿ ಅವರಿಗೆ ಹೈದರಾಬಾದದ ಸೈನ್ಯಚಟುವಟಿಕೆಯ ಸರ್ವಾಧಿಕಾರವನ್ನು ಒಪ್ಪಿಸಲಾಗಿತ್ತು. ತಾ. ೧೧ ಕ್ಕೆ ಭಾರತ ಸರಕಾರವು ಹೈದರಾಬಾದಕ್ಕೆ ಕೊನೆಯ ಎಚ್ಚರಿಕೆ ಹೇಳಿ ಸಂಸ್ಥಾನದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಬೇಕೆಂದೂ ಇಲ್ಲವಾದರೆ ಭಾರತ ಸರಕಾರವು ತನಗೆ ಸರಿದೋರಿದ ಕ್ರಮ ಕೈಕೊಂಡು ಹೈದರಾಬಾದದ ಪ್ರಜಾ ರಕ್ಷಣೆ ಮಾಡಬೇಕಾಗುವದೆಂದೂ ತಿಳಿಸಿತು. ಎಲ್ಲ ಹಿತೋಕ್ತಿಯಂತೆ ಇದೂ ತಿರಸ್ಕೃತವಾಗಲು ಉಪಾಯ ಕಾಣದೆ ಅನಿವಾರ್ಯವಾಗಿ ಮುಂದೆರಡು ದಿನಕ್ಕೆ ಶಾಂತಿ ಸುವ್ಯವಸ್ಥೆ ಪ್ರಸ್ತಾಪಿಸಲು ದಂಡಯಾತ್ರೆಯನ್ನೇ ಕೈಕೊಳ್ಳಬೇಕಾಯ್ತು.

ಸೇನಾಪತಿಯ ಆಜ್ಞೆ

ಮುಖ್ಯ ಸೇನಾಪತಿ ರಾಜೇಂದ್ರಸಿಂಗರು ತಮ್ಮ ಸೇನೆಗೆ ಕೊಟ್ಟ ಆಜ್ಞೆಯಲ್ಲಿ ಈ ಮಾತುಗಳಿವೆ.

“ಕಾಶೀಂ ರಜವಿಯ ತಲೆತಿರುಕ ಅನುಯಾಯಿಗಳಿಂದ ಹೈದರಾಬಾದದಲ್ಲಿ ಅರಾಜಕತೆಯುಂಟಾಗಿದೆ. ಅಲ್ಲಿ ಎಲ್ಲ ಜಾತಿಯ ನೀತಿವಂತ ನಾಗರಿಕರು ಗಂಡಾಂತರದಲ್ಲಿದ್ದಾರೆ. ಅವರನ್ನೆಲ್ಲ ರಕ್ಷಿಸುವ ಭಾರ ಹಿಂದೀ ಸೈನಿಕರ ಮೇಲಿದ್ದು ನಿಮಗೆ ಅಡ್ಡ ಬಂದವರನ್ನು ತುಂಡರಿಸಿರಿ. ಸಂಸ್ಥಾನದ ನೀತಿವಂತ ನಾಗರಿಕರನ್ನು ಕುಲಗೋತ್ರಗಳನ್ನು ಲೆಕ್ಕಿಸದೆ ನೀವು ಸಂರಕ್ಷಿಸತಕ್ಕದ್ದೆಂದು ನಮ್ಮ ಸರಕಾರದ ಅಪ್ಪಣೆಯಾಗಿದೆ. ಹಿಂದೀ ಸೈನ್ಯದ ಗೌರವ ಪರಂಪರೆಯನ್ನು ಕಾಯ್ದು ನಮ್ಮ ಸರಕಾರದ ಪ್ರತಿಷ್ಠೆಯನ್ನು ಬೆಳಸಬೇಕು. ಅದರ ರಕ್ಷಣೆಗಾಗಿ ಆತ್ಮವಿಶ್ವಾಸದಿಂದ ಮುನ್ನುಗ್ಗಿರಿ. ದೇವರು ನಿಮ್ಮನ್ನು ಕಾಯುತ್ತಾನೆ. ಜಯಹಿಂದ.”

ನಾಗರಿಕರಿಗೆ ಅಭಯದಾನ

ಹೈದರಾಬಾದ ನಿವಾಸಿಗಳಿಗೆ ಮುಖ್ಯ ಸೇನಾಪತಿಗಳು ಅಭಯದಾನ ಮಾಡುತ್ತ ಹೀಗೆ ಹೇಳಿದ್ದರು. “ಹಿಂದೀ ಸೈನ್ಯವು ದ್ವೇಷದಿಂದ ದಂಡೆತ್ತಿಬಂದಿಲ್ಲ. ಹೈದರಾಬಾದ ಸಂಸ್ಥಾನದಲ್ಲಿ ಶಾಂತರೀತಿಯಿಂದ ಜೀವನ ನಿರ್ವಹಣಮಾಡುವವರಿಗೆ ರಕ್ಷಣೆ ಕೊಡಲು ಬಂದಿರುವ ಕಾರಣ ಯಾರೂ ಭಯಗ್ರಸ್ತರಾಗಬೇಕಾಗಿಲ್ಲ. ನಮ್ಮ ಈ ಕಾರ್ಯಕ್ಕೆ ಅಡ್ಡ ಬಂದವರನ್ನು ಮಾತ್ರ ಉಗ್ರವಾಗಿ ದಂಡಿಸಲಾಗುವದು. ಸಂಸ್ಥಾನದಲ್ಲಿ ಶಾಂತಿ ಸುವ್ಯವಸ್ಥೆ ಉಂಟಾಗಿ ಹೊಣೆಗಾರ ಸರಕಾರವು ನೆಲೆಗೊಳ್ಳುತ್ತಲೇ ನಾವು ಇಲ್ಲಿಂದ ಹೊರಡುವೆವು. ಜಾತೀಯ ಗಲಭೆಯನ್ನು ಎಬ್ಬಿಸುವ ಕೆಲ ಕುಚೋದ್ಯಗಾರರನ್ನು ನಿರ್ದಯದಿಂದ ದಂಡಿಸಲಾಗುವದು. ಉಳಿದವರಿಗೆ ಅಭಯವಿದೆ. ಜಯಹಿಂದ.”

ಮೊದಲ ದಿನದ ಗೆಲವು

ಮೊದಲ ದಿನವೇ ಹಿಂದಿ ಸೈನ್ಯವು ಬಲಾರಶಾ, ನಲದುರ್ಗ, ತುಳಜಾಪುರ, ಕೊಪ್ಪಳಗಳನ್ನು ಆಕ್ರಮಿಸಿಕೊಂಡಿತಲ್ಲದೆ ಗದಗ-ಹೊಸಪೇಟೆ, ಧೊನೆ-ದ್ರೋಣಾಚಲಂ ರೇಲ್ವೆ ಮಾರ್ಗವನ್ನೂ ಹಾದಿಯಲ್ಲಿ ಹತ್ತಿದ ಅನೇಕ ಗ್ರಾಮಗಳನ್ನೂ, ಅಯಕಟ್ಟಿನ ಸ್ಥಳಗಳನ್ನೂ, ೩ ಪೂಲುಗಳನ್ನೂ ಅಂದರೆ ಹೊಸಪೇಟೆ, ಕರ್ನೂಲ ಹಾಗು ರಾಯಚೂರ ದಕ್ಷಿಣಕ್ಕಿರುವ ತುಂಗಭದ್ರಾ ನದಿಯ ಪೂಲುಗಳನ್ನು-ವಶಪಡಿಸಿಕೊಂಡಿತು. ಸೊಲ್ಲಾಪೂರ ದಿಕ್ಕಿನಿಂದ ೪೦ ಮೈಲು ನುಗ್ಗಿದರಲ್ಲದೆ ಬಿಜವಾಡಾ ಕಡೆಯಿಂದ ೬೦ ಮೈಲು ಸಾಗಿದರು ಹಾಗೂ ೧೨೫ ಚ. ಮೈ. ಪ್ರದೇಶ ಆಕ್ರಮಿಸಿದರು.

ಎರಡನೆಯ ದಿನದ ಗೆಲವು

ತಾ. ೧೪ ರಂದು ದೌಲತಾಬಾದ ಜಾಲ್ನಾ ನಗರಗಳು ಕೈವಶವಾದವು. ದೌಲತಾಬಾದ ಜಿಲ್ಹೆಯನ್ನು ಹಿಂದೀ ಸೈನಿಕರು ಆಕ್ರಮಿಸಿದರು. ಜಾಲ್ನಾ ನಗರವು ಮಹತ್ವದ ರೇಲು ಮತ್ತು ಲೈನಮಾರ್ಗದ ಸಂಧಿಸ್ಥಲ. ಇಂದೇ ಅದಿಲಾಬಾದ ಪರಭಣಿ ಜಿಲ್ಹೆಗಳಲ್ಲಿ ಪ್ರಗತಿ ಸಾಧಿಸಲಾಯ್ತು. ಸೊಲ್ಲಾಪೂರ ಸಿಕಂದರಾಬಾದದ ಲೈನದಲ್ಲಿ ಮತ್ತೆ ೩೫ ಮೈಲು ಮುಂದೆ ಸಾಗಿದರು. ಸಿಕಂದರಾಬಾದವು ಸೊಲ್ಲಾಪುರ ಸೈನ್ಯಕ್ಕೆ ಇನ್ನು ೮೦ ಮೈಲು ಬಿಜವಾಡಾದ ಸೈನಿಕರಿಗೆ ೬೫ ಮೈಲು ಉಳಿದಿತ್ತು. ಎಲ್ಲೆಲ್ಲಿಯೂ ರಜಾಕಾರರ ಮತ್ತು ನಿಜಾಮ ಸೈನಿಕರ ಸಂಹಾರವೂ ಬಂಧನವೂ ನಡೆದಿತು.

ಗಾಣಗಾಪೂರ, ಶಹಾಬಾದ ರೇಲ್ವೆ ನಿಲ್ದಾಣಗಳಲ್ಲಿದ್ದ ನೌಕರರನ್ನು ನಿಜಾಮ ಪೋಲೀಸರು ಬಂಧಿಸಿದರೆಂದೂ ರಾಯಚೂರ ರೇಲ್ವೆ ಸ್ಟೇಶನ್ ಮಾಸ್ತರನ ಕೊಲೆಮಾಡಿದರೆಂದೂ ಜಿ. ಐ. ಪಿ. ರೇಲ್ವೆ ಕೇಂದ್ರ ಕಚೇರಿಯಿಂದ ತಿಳಿದುಬಂತು.

ನಮ್ಮ ಸೈನಿಕರು ಸುತ್ತೂಕಡೆಗೆ ನುಗ್ಗಿ ಸಾಗಿದ್ದರ ಪರಿಣಾಮವಾಗಿ ನಿಜಾಮರ ಸೈನ್ಯ ಠಾಣೆಗಳಾದ ಸಿಕಂದರಾಬಾದ, ಕರೀಮುಪೇಟ, ಬಾಲಾರಾಮು, ಬೀದರಗಳು ಕತ್ತರಿಯಲ್ಲಿ ಸಿಕ್ಕಂತಾದವು. ಇಂದಿನ ದಿಗ್ವಿಜಯದಲ್ಲಿ ಅಪಾರ ಮದ್ದು ಗುಂಡು ಶಸ್ತ್ರಾಸ್ತ್ರಗಳೂ ೨೫ ಪೌಂಡಿನ ಗುಂಡುಹಾರಿಸುವ ೨ ತೋಫುಗಳೂ ನಮ್ಮ ಸೈನಿಕರ ಕೈವಶವಾದವು.

ಬಲಾರಶಹಾದ ಹತ್ತಿರುವ ಅಯಕಟ್ಟಿನ ಪೂಲನ್ನು ಒಮ್ಮೆಲೆ ಆಕ್ರಮಿಸಲಾಯ್ತು. ಅಲ್ಲಿದ್ದ ಕಾವಲುಗಾರರು ಅದನ್ನು ಧ್ವಂಸಗೊಳಿಸಬೇಕೆಂದು ಅತ್ಯಂತ ಪ್ರಬಲವಾದ ಸಿಡಿಮದ್ದನ್ನಿಟ್ಟಿದ್ದರು. ಮದ್ದಿಗೆ ಕೊಳ್ಳಿ ಕೊಡುವಷ್ಟು ಅವಕಾಶ ನಿಜಾಮ ಸೈನ್ಯದ ಕಾವಲುಗಾರರಿಗೆ ದೊರಕದೆ ಆ ಪೂಲು ಅಕ್ಷತೆಯಿದೆ ನಮ್ಮ ಸೈನಿಕರ ವಶವಾಯಿತು.

ಮೂರನೆಯ ದಿನದ ಗೆಲವು

ತಾ. ೧೫ ರಂದು ಜಾಲ್ನಾದಿಂದ ಮುಂದೆ ೪೦ ಮೈಲು ನುಗ್ಗಿದರು. ಔರಂಗಾಬಾದ ಜಿಲ್ಹೆಯ ಜಿಂತೂರ ಮುನ್ನಡೆದು ಔರಂಗಾಬಾದ, ಹುಮ್ನಾಬಾದ, ಕುಷ್ಟಗಿ, ಗುಲ್ಬರ್ಗಾ ನಗರಗಳು ವಶವಾದವು. ಔರಂಗಾಬಾದದ ಕಲೆಕ್ಟರ ನಂತರ ಬಂದು ಹಿಂದೀ ಸೈನ್ಯಕ್ಕೆ ಶರಣಾಗತನಾಗಿ ನಗರವನ್ನು ಸ್ವಾಧೀನಪಡಿಸಿದನೆಂದು ತಿಳಿದುಬಂದಿದೆ. ಅಲ್ಲಿಯ ರಜಾಕಾರರ ತಕ್ಕ ಶಿಕ್ಷೆ ಬಂಧಿಸಿ ನಗರದಲ್ಲಿ ದೊಡ್ಡ ಪ್ರಮಾಣದಲ್ಲಿ ಶಸ್ತ್ರಾಸ್ತ್ರ ಮದ್ದು ಗುಂಡು ವಶಪಡಿಸಿಕೊಳ್ಳಲಾಯಿತು.

ನಾಲ್ಕನೆಯ ದಿನದ ಗೆಲವು

ತಾ. ೧೬ ರಂದು ಸೊಲ್ಲಾಪುರದ ಸೈನ್ಯವು ಹುಮನಾಬಾದದಿಂದ ಪೂರ್ವಕ್ಕೆ ೩೦ ಮೈಲು ನುಗ್ಗಿ ಜಹೀರಾಬಾದ ನಗರವನ್ನು ಆಕ್ರಮಿಸಿತು. ಇಲ್ಲಿಂದ ಸಿಕಂದರಾಬಾದವು ಇನ್ನು ೬೩ ಮೈಲು ದೂರ ಉಳಿದಂತಾಯ್ತು. ಅಂದರೆ ೩ ದಿನಗಳಲ್ಲಿ ೧೧೦ ಮೈಲು ಪ್ರಗತಿಸಾಧಿಸಿತು. ಹೋಲಿ, ಲಾತೂರ ನಿಲ್ದಾಣ ಮತ್ತು ಬಾರ್ಸಿಲೈಟ ರೇಲ್ವೆಯನ್ನೆಲ್ಲ ಸ್ವಾಧೀನಪಡಿಸಿಕೊಳ್ಳಲಾಯ್ತು. ಗದಗ-ಹೊಸಪೇಟೆ ರೇಲ್ವೆ ಮಾರ್ಗದಲ್ಲಿ ಶತ್ರುಗಳು ಒಂದು ಇಂಜಿನ, ೨ ಡಬ್ಬಿ ಹಳಿ ತಪ್ಪಿಸಿ ಉರುಳಿಸಿದರು. ಸೂರ್ಯಪೇಟೆಯಿಂದ ೪ ಮೈಲಿನ ಮೇಲಿದ್ದ ಮೂಸಿನದಿಯ ಪೂಲನ್ನು ವಶಪಡಿಸಿಕೊಂಡರು. ವಶಪಡಿಸಿಕೊಂಡ ಸ್ಥಾನಗಳಿಂದ ವಿಶೇಷ ಮದ್ದು, ಬ್ರೆನ್‌ಗನ್ನು, ರೈಫಲ್ಲ, ಮೋರ್ಟಾರ ಹೀಗೆ ವಿವಿಧ ಶಸ್ತ್ರಾಸ್ತ್ರ ಸಿಕ್ಕಿವೆ. ರಜಾಕಾರರು ಗೋದಾವರಿ ಪೂಲನ್ನು ಭಗ್ನಗೊಳಿಸಲಾಯ್ತು. ನಮ್ಮ ಸೈನಿಕರ ಬತ್ತಳಿಕೆಯ ವಿಮಾನದಾಳಿಗೂ ಸೋತು, ಬೀದರದಿಂದ ನಿಜಾಮ ಸೈನಿಕರು ಹಿಂದೆಸರಿದರು. ಉಸ್ಮಾನಾಬಾದ ಜಿಲ್ಹೆಯ ರಜಾಕಾರರನ್ನು ನಿರ್ಮೂಲಗೊಳಿಸುವ ಕ್ರಮ ಕೈಕೊಳ್ಳಲಾಯ್ತು. ಧಕ್ಕೆಗೊಂಡ ಔರಂಗಾಬಾದದ ವಿಮಾನ ನಿಲ್ದಾಣವನ್ನು ನಮ್ಮ ಇಂಜಿನಿಯರರು ಸರಿಪಡಿಸುತ್ತಿದ್ದಾರೆ.

ಹಿಂದೀ ಸೇನೆಯು ಮುನ್ನುಗ್ಗಿದ ನಂತರ ಗಡಿಯಲ್ಲಿ ಯಾವ ದುರ್ಘಟನೆಯೂ ನಡೆದಿರುವದಿಲ್ಲ. ಜನರು ಗುಳೇಕಿತ್ತುವದು ನಿಂತಿದೆ.

ಐದನೆಯ ದಿನದ ಗೆಲವು

೧೭ ತಾ. ರಂದು ೧೨ ತಾಸುಗಳಲ್ಲಿ ಮತ್ತೆ ಪ್ರಗತಿಯಾಯಿತು. ಈ ದಿನದ ಮುಂಜಾನಿನ ವರದಿಯಂತೆ ವಿಜಯವಾಡದ ಕಡೆಯ ಸೈನ್ಯವು ನಾರ್ಕಟಪಲ್ಲಿಯನ್ನು ಮುಟ್ಟಿತು. ಈಗ ಸಿಕಂದರಾಬಾದವು ೫೫ ಮಾತ್ರ ಉಳಿದಿತ್ತು. ಸೊಲ್ಲಾಪೂರ ವಿಜಯವಾಡಾ ಸೈನ್ಯಗಳ ನಡುವೆ ೧೧೪ ಮೈಲಿನ ಅಂತರ. ಸೊಲ್ಲಾಪುರ ಪಟ್ಟಿಗೆ ಇಂದು ೪ ಮೈಲು ಮುನ್ನುಗ್ಗಿದರು. ಇಂದು ರಜಾಕಾರ ಮತ್ತು ಹೈದರಾಬಾದ ಸೈನಿಕರಲ್ಲಿ ತಿಕ್ಕಾಟವುಂಟಾಯಿತು. ರಜಾಕಾರರನ್ನು ಹಿಂದಿಸೈನ್ಯಕ್ಕೆ ಒಪ್ಪಿ ಹೈದರಾಬಾದದ ಅಧಿಕೃತ ಸೈನ್ಯವು ಅನ್ಯದಸರದಿಂದ ಹಿಂದೆ

(೧೦ ನೇ ಪುಟಕ್ಕೆ)

ಕರ್ಮವೀರ


ಶ್ರೀಮಚ್ಚಾಲುಕ್ಯ ವಿಕ್ರಮ ವರ್ಷ ೮೭೨
ಭಾದ್ರಪದ ಬ॥ ೨ ಸೋಮವಾರ

ಜೈತ್ರಯಾತ್ರೆ

ಹಿಂದುಸ್ತಾನದ ಗವರ್ನರ ಜನರಲ್ಲರಾದ ರಾಜಾಜಿ ಕೊನೆಯಸಲ ಮಾಡಿದ ಉಪದೇಶಕ್ಕೂ ನಿಜಾಮರು ಕಿವಿಗೊಡದ್ದರಿಂದ ಇದೇ ೧೩ ನೇ ತಾರೀಕಿನ ಬೆಳಗಿನ ನಾಲ್ಕು ಗಂಟೆಗೆ ನಾಲ್ಕೂ ದಿಕ್ಕುಗಳಿಂದ ಹೈದರಾಬಾದ ಸಂಸ್ಥಾನದ ಮೇಲೆ ದಾಳಿ ಪ್ರಾರಂಭವಾಗಿದೆ.

ಹಿಂದ ಸರಕಾರದ ಈ ಜೈತ್ರಯಾತ್ರೆಯ ಹಿನ್ನೆಲೆಯನ್ನು ನೋಡಿದರೆ, ಇದು ಅತ್ಯಂತ ನ್ಯಾಯ್ಯವೂ ಅವಶ್ಯಕವೂ ಸಮಯೋಚಿತವೂ ಎಂದು ಕಂಡುಬರದಿರಲಾರದು. ನಿಜಾಮರನ್ನು ಪದಚ್ಯುತಮಾಡಿ ಇಡೀ ಸಂಸ್ಥಾನವನ್ನು ಹಿಂದ ಒಕ್ಕೂಟದಲ್ಲಿ ಕೂಡಿಸಿಕೊಳ್ಳಬೇಕೆಂಬ ಮಹತ್ವಾಕಾಂಕ್ಷೆಯನ್ನು ಸರಕಾರವು ತಾಳಿರಲಿಲ್ಲ. ಅಲ್ಲಿನ ಪ್ರತಿಗಾಮೀಶಕ್ತಿಗಳನ್ನೆಲ್ಲ ಹತ್ತಿಕ್ಕಿ ಪ್ರಜಾಪ್ರಭುತ್ವವನ್ನು ಪ್ರಸ್ಥಾಪಿಸುವದಕ್ಕಾಗಿಯೇ ಈ ದಂಡಯಾತ್ರೆಯನ್ನು ಕೈಕೊಳ್ಳಲಾಗುವದೆಂದು ಹಿಂದೀ ಸರಕಾರವು ಸ್ಪಷ್ಟಪಡಿಸಿತು. ಸಿಕಂದರಾಬಾದದಲ್ಲಿ ಹಿಂದೀ ಸೈನ್ಯವನ್ನು ಇಡಲು ಅವಕಾಶ ಕೊಟ್ಟಿದ್ದರೆ ಯುದ್ಧವೇ ಪ್ರಾರಂಭವಾಗುತ್ತಿರಲಿಲ್ಲ. ಸಂಸ್ಥಾನದಲ್ಲಿ ಶಾಂತಿ, ಸುವ್ಯವಸ್ಥೆಯನ್ನು ಕಾಯುವುದಕ್ಕಾಗಿಯೇ ಹಿಂದ ಸೈನ್ಯವು ಸಿಕಂದರಾಬಾದಕ್ಕೆ ಹೋಗುತ್ತಿರುವದಲ್ಲದೆ ಸಂಸ್ಥಾನವನ್ನು ಆಕ್ರಮಿಸುವದಕ್ಕಲ್ಲ ಎಂಬ ಮಾತನ್ನೂ ಹಿಂದ ಸರಕಾರವು ಸ್ಪಷ್ಟಪಡಿಸಿತು. ಮುಸಲ್ಮಾನ ರಾಜ್ಯವನ್ನು ನುಂಗಿ ನೀರು ಕುಡಿದು ಬಿಡುವುದಕ್ಕಾಗಿ ಹಿಂದ ಸರಕಾರವು ಈ ಪ್ರಯತ್ನ ನಡೆಸಿದೆಯೆಂದು ಕೆಲ ಪ್ರತಿಗಾಮಿಗಳು ಕೂಗಿಕೊಳ್ಳುವದರಲ್ಲಿ ಏನೂ ಹುರುಳಿಲ್ಲ. ಈ ದಂಡಯಾತ್ರೆಯಲ್ಲಿ ಜಾತೀಯತೆಯ ಸೋಂಕು ಕೂಡ ಇಲ್ಲ ಎಂಬುದನ್ನು ಮುಖ್ಯ ಮಂತ್ರಿ ಪಂಡಿತ ಜವಾಹರಲಾಲರು ಘಂಟಾಘೋಷವಾಗಿ ಸಾರಿರುವರು. ಅಲ್ಲದೆ ಮುಸಲ್ಮಾನ ಮುಂದಾಳುಗಳಾದ ಶೇಖ ಅಬ್ದುಲ್ಲಾ, ಡಾ. ಹಮೀದ, ಸರ ಮಹಮ್ಮದ ಉಸ್ಮಾನ ಮೊದಲಾದವರು ಇದರಲ್ಲಿ ಜಾತೀಯ ಪ್ರಶ್ನೆಯೇ ಇಲ್ಲ ನಿಜಾಮರೆ ತಮ್ಮ ಪ್ರತಿಗಾಮೀ ಧೋರಣೆಯಿಂದ ಇಂಥ ದುರದೃಷ್ಟಕ್ಕೊಳಗಾದರುಎಂದು ಮುಂತಾಗಿ ಸ್ಪಷ್ಟವಾಗಿ ಹೇಳಿ ಹಿಂದುಸ್ತಾನ ಸರಕಾರವು ಹೂಡಿದ ಈ ಹೋರಾಟದಲ್ಲಿ ಹಿಂದೀ ಮುಸಲ್ಮಾನರು ಸರಕಾರಕ್ಕೆ ಎಲ್ಲ ಬಗೆಯಿಂದ ನೆರವಾಗಬೇಕೆಂದು ಕೇಳಿಕೊಂಡಿದ್ದಾರೆ. ಹಿಂದೀ ಮುಸಲ್ಮಾನರು ಹಿಂದಿನ ತಪ್ಪನ್ನೇ ಮತ್ತೆ ಮಾಡಿ ದೇಶದ್ರೋಹಮಾಡಿದ ಅಪಕೀರ್ತಿ ಹೊಂದದೆ ಹಿಂದ ಸರಕಾರಕ್ಕೆ ನಿಷ್ಠರಾಗಿ ಜಾತ್ಯತೀತವಾದ ಈ ಹೋರಾಟದಲ್ಲಿ ಸರಕಾರಕ್ಕೆ ಎಲ್ಲ ಬಗೆಯಿಂದ ಸಹಾಯ ಸಲ್ಲಿಸತಕ್ಕದ್ದು.

ಅಂತರಿಕವಾದ ಈ ಪ್ರಶ್ನೆಯನ್ನು ಬಿಡಿಸಲು ನಿಜಾಮರು ಭದ್ರತಾಮಂಡಳಕ್ಕೆ ಕೇಳಿಕೊಂಡಿದ್ದು ಅದಕ್ಕೆ ಬೆಂಬಲ ಕೊಡಲು ಬ್ರಿಟಿಶ ಕಾಂಜರ್ವೇಟಿವ್ ಪಕ್ಷದ ಸಾಹಸ. ಹೈದರಾಬಾದ ಪ್ರಶ್ನೆಯನ್ನು ಚರ್ಚೆಗೆ ತೆಗೆದುಕೊಂಡರೆ ಸಮುದ್ರದಾಚೆಗಿರುವ ಬ್ರಿಟಿಶ ಸಾಮ್ರಾಜ್ಯದ ಇತರ ಪ್ರದೇಶಗಳೂ ಅದರ ಉದಾಹರಣೆ ತೋರಿಸಿ ತಮ್ಮದೂರನ್ನು ಭದ್ರತಾಮಂಡಳದಲ್ಲಿ ಮಂಡಿಸಲು ಪ್ರಯತ್ನಿಸಬಹುದು ಎಂದು ಬ್ರಿಟಿಶ ವಿದೇಶಮಂತ್ರಿ ಬೆವಿನ್ನರು ಎಚ್ಚರಿಕೆಕೊಟ್ಟಿರುವರು. ಭದ್ರತಾಮಂಡಳದಲ್ಲಿ ಇದೀಗ ಚರ್ಚೆ ನಡೆದಿದೆ ಅದೇನೇ ಇದ್ದರೂ ಹಿಂದುಸ್ತಾನದ ಈ ಜೈತ್ರಯಾತ್ರೆಯಲ್ಲಿಯಶಸ್ಸು ಸಿಕ್ಕುವದೆಂಬಲ್ಲಿ ಸಂದೇಹವಿಲ್ಲ.



ರೋಮದಲ್ಲಿ ಕೂಡಿದ ಅಂತರ ಪಾರ್ಲಮೆಂಟರಿ ಪರಿಷತ್ತಿನಲ್ಲಿ ಶ್ರೀ. ರಂಗರಾವ ದಿವಾಕರರು ಅಧ್ಯಕ್ಷರಾದ ಲಾರ್ಡ ಸ್ಟ್ಯಾನಗೇಟ (ಹಿಂದಿನ ಭಾರತ ಮಂತ್ರಿ) ರವರೊಡನೆ ಕುಶಲ ಸಂಭಾಷಣೆ ನಡೆಸುತ್ತಿರುವದು.

ವಾರದ ಸಿಂಹಾವಲೋಕನ

ಹಿಂದುಸ್ತಾನ ಸರಕಾರದ ಧ್ಯೇಯದ ಪುನರ್ಘೋಷಣೆ

ಹಿಂದುಸ್ತಾನ ಸರಕಾರದ ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲರು ಮುಂಬಯಿಯಲ್ಲಿ ಹಿಂದುಸ್ತಾನದ ಮೊದಲ ಯುದ್ಧಹಡಗವಾದ "ದಿಲ್ಲಿ" ಯನ್ನು ಸ್ವಾಗತಿಸುವಾಗ ಸರಕಾರದ ಧ್ಯೇಯ ಧೋರಣವನ್ನು ಕುರಿತು ಮತ್ತೊಮ್ಮೆ ಘೋಷಣೆ ಮಾಡಿದರು. ಹಿಂದುಸ್ತಾನವು ಯುದ್ಧ ಹಡಗುಗಳನ್ನು ಸಿದ್ಧಪಡಿಸಹತ್ತಿದ್ದರಿಂದ ತನ್ನ ಅಹಿಂಸಾ ಧ್ಯೇಯವನ್ನು ಅದು ಬಿಟ್ಟುಗೊಟ್ಟಿತು ಎಂದು ಪರದೇಶೀಯರಿಗೆ ಮತ್ತು ಸ್ವದೇಶದಲ್ಲಿರುವ ಹಲವರಿಗೆ ಸಂಶಯ ಬರುವುದು ಸ್ವಾಭಾವಿಕ. ಇಂಥ ಸಂಶಯಗ್ರಸ್ತರ ಸಂಶಯ ಪಿಶಾಚಿಯನ್ನು ಹೊಡೆದೋಡಿಸುವುದಕ್ಕಾಗಿಯೇ ಮುಖ್ಯ ಮಂತ್ರಿಗಳು ಸಮಯೋಚಿತವಾಗಿ ಸರಕಾರದ ಧ್ಯೇಯ ಧೋರಣವನ್ನು ಮತ್ತೊಮ್ಮೆ ಸ್ಪಷ್ಟೀಕರಿಸಿದರು. ಈ ಹಡಗು ಯುದ್ಧದ ಹಡಗಾಗಿದೆ. ಇಷ್ಟೇ ಅಲ್ಲ ಶಾಂತಿ ರಕ್ಷಣೆಗೆ ಸಹಾಯಕವಾದ ಹಡಗೂ ಆಗಿದೆ, ನಮ್ಮ ಸ್ವಾತಂತ್ರ್ಯಕ್ಕೆ ಯಾವದೇರೀತಿಯ ಗಂಡಾಂತರಪ್ರಾಪ್ತವಾದದ್ದಾದರೆ ಅದನ್ನು ನಮ್ಮ ಶಕ್ತಿ ಸರ್ವಸ್ವದಿಂದ ಸಂರಕ್ಷಿಸುವದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ದುರ್ದೈವದಿಂದ ಯುದ್ಧಕ್ಕೆ ಹೋಗುವದು ಅವಶ್ಯವಾದರೆ, ಅದರಲ್ಲಿ ಶಾಂತಿಯೇ ನಮ್ಮ ಗುರಿಯೆಂಬದನ್ನೂ ಎರಡನೆಯವರ ಮೇಲೆ ಪ್ರಭುತ್ವ ಸಂಪಾದಿಸುವದು ನಮ್ಮ ಇಚ್ಛೆಯಾಗಿರದೆ ನಮ್ಮ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವದೇ ನಮ್ಮ ಗುರಿಯೆಂಬದನ್ನೂ ಪೂರ್ಣವಾಗಿ ತಿಳಿದುಕೊಳ್ಳಬೇಕೆಂದು ಮುಖ್ಯಮಂತ್ರಿಗಳು ಅಪ್ಪಣೆ ಕೊಡಿಸಿದರು. ಹಿಂದುಸ್ತಾನದಲ್ಲಿ ಒಕ್ಕಟ್ಟು ಕಾಯ್ದುಕೊಂಡು ಹೋಗುವದು ನಮ್ಮ ಕರ್ತವ್ಯವೆಂಬುದನ್ನೂ ಮುಖ್ಯಮಂತ್ರಿಗಳು ಸ್ಪಷ್ಟಪಡಿಸಿರುವರು. ಹಿಂದುಸ್ತಾನದಲ್ಲಿಯ ಅಧಿಕಾರಿಗಳೂ ಜನತೆಯೂ ಸರಕಾರದ ಈ ನ್ಯಾಯ್ಯ ಮತ್ತು ಸದುದ್ದೇಶಪೂರಿತವಾದ ಧ್ಯೇಯ ಧೋರಣದ ಮರ್ಮವನ್ನು ತಿಳಿದುಕೊಂಡು ತಮ್ಮ ತಮ್ಮ ಕರ್ತವ್ಯವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇವೆ.

ಕಾಯದೇ ಅಜಂ ಜಿನ್ನಾರ ನಿಧನ

ಪಾಕಿಸ್ತಾನದ ಗವರ್ನರ ಜನರಲ್ಲರಾಗಿದ್ದ ಕಾಯದೇ ಅಜಂ ಜಿನ್ನಾ ಇವರು ವಯಸ್ಸಿನ ಎಪ್ಪತ್ತೆರಡನೆಯ ವರುಷದಲ್ಲಿ ಪೈಗಂಬರವಾಸಿಗಳಾದ್ದರಿಂದ ಪಾಕಿಸ್ತಾನಕ್ಕೆ ಬಲವಾದ ಪೆಟ್ಟು ಬಿದ್ದಿತು. ಶುದ್ಧ ರಾಷ್ಟ್ರೀಯರೂ ಕಾಂಗ್ರೆಸ್ಸಿನ ನಿಷ್ಠ ಸೇವಕರೂ ಆಗಿದ್ದ ಜಿನ್ನಾ ಇವರು ಜಾತ್ಯಂಧರಾಗಿ ದೇಶವನ್ನೇ ಒಡೆದು ತಮ್ಮ ಮಹತ್ವಾಕಾಂಕ್ಷೆಯನ್ನು ಹೇಗೆ ಈಡೇರಿಸಿಕೊಂಡರೆಂಬುದು ಜನಜನಿತವಾಗಿದೆ. ಬ್ರಿಟಿಶ ಪ್ರತಿಗಾಮಿಗಳು ಮತ್ತು ಧರ್ಮಾಂಧರಾದ ಮುಸಲ್ಮಾನರು ಅವರ ಈ ದುಸ್ಸಾಹಸಕ್ಕೆ ಧೋರಣೆಗೆ ಬೆಂಬಲ ಕೊಡದಿದ್ದರೆ ಅವರ ಆಸೆ ಕೈಗೂಡುತ್ತಿರಲಿಲ್ಲವಾದರೂ ತಮ್ಮ ಜಾಣತನ, ಸಾಹಸ, ಧರ್ಮಾಂಧರನ್ನು ಒಲಿಸಿಕೊಳ್ಳುವ ಹಿಡಿತ, ಕುಶಾಗ್ರ ಬುದ್ಧಿಮತ್ತೆ ಮೊದಲಾದವುಗಳಿಂದ ಜಿನ್ನಾರು ಅಶಕ್ಯವಾಗಿದ್ದುದನ್ನು ಶಕ್ಯ ಮಾಡಿ ತೋರಿಸಿದರು. ಈ ದೃಷ್ಟಿಯಿಂದ ಅವರು ಐತಿಹಾಸಿಕ ಪುರುಷರೆಂದು ಪರಿಗಣಿಸಲ್ಪಡುವದರಲ್ಲಿ ಸಂದೇಹವಿಲ್ಲ. ತಮ್ಮ ಹಟಮಾರಿತನದಿಂದ ದೇಶದಲ್ಲಿ ಎಷ್ಟೊಂದು ಅನರ್ಥ ಅನಾಹುತಗಳುಂಟಾಗಬಹುದೆಂಬದರ ಪರಿವೆ ಕೂಡ ಇಲ್ಲದೆ ಜಿನ್ನಾರು ಪಾಕಿಸ್ತಾನವನ್ನು ಪ್ರಸ್ಥಾಪಿಸಿಕೊಂಡರು. ಅದರ ಕಹಿ ಫಲಗಳನ್ನು ಪಾಕಿಸ್ತಾನ ಹಿಂದುಸ್ತಾನಗಳೆರಡೂ ಈಗಲೂ ಅನುಭವಿಸುತ್ತಿವೆ. ಏನೇ ಆದರೂ ತಮ್ಮ ಅಚ್ಚು ಮೆಚ್ಚಿನ ಪಾಕಿಸ್ತಾನವಿನ್ನೂ ಭದ್ರವಾಗುವ ಪೂರ್ವದಲ್ಲಿಯೇ ಅವರು ಪೈಗಂಬರವಾಸಿಗಳಾದುದು ದುರ್ದೈವದ ಸಂಗತಿಯು. ಪಾಕಿಸ್ತಾನಕ್ಕಾದ ಈ ಹಾನಿಯ ಬಗ್ಗೆ ನಾವು ಸಹಾನುಭೂತಿಯನ್ನು ವ್ಯಕ್ತಪಡಿಸದಿರಲಾರೆವು.

ಮೈಸೂರಿನ "ಮಾದರಿ" !

ಆರ್ಡಿನನ್ಸ ಅಥವಾ ಸುಗ್ರೀವಾಜ್ಞೆಗಳನ್ನು ಹೊರಡಿಸಿ ರಾಜ್ಯಭಾರ ಮಾಡುವದು ಅಪದ್ಧರ್ಮವೆಂದೂ ಅದನ್ನು ಬಹಳ ಸಂಯಮದಿಂದ ಪ್ರಯೋಗಿಸಬೇಕೆಂದೂ ಪ್ರಜಾತಂತ್ರದ ನಿಯಮ. ಆದರೆ ಮೈಸೂರಿನ "ಮಾದರಿ" ಪ್ರಜಾತಂತ್ರದಲ್ಲಿ ಕಳೆದವಾರ ಹೊರಟ ಮಹಾರಾಜರ ಸುಗ್ರೀವಾಜ್ಞೆ ಅತ್ಯಂತ ಅಸಂಯತವೂ ಅನವಶ್ಯಕವೂ ಆಗಿದೆಯೆಂದು ಹೇಳದೆ ವಿಧಿಯಿಲ್ಲ. ಗೋಪಾಲರಾವ ವಿಚಾರಣಸಮಿತಿಯ ವಿಷಯದಲ್ಲಿ ಟೀಕೆಗಳನ್ನು ಬರೆದ ಮತ್ತು ಪ್ರಸಿದ್ಧಿಸಿದ ಶ್ರೀ ಎಲ್ ಎಸ್. ರಾಜು, ಶ್ರೀ ಪಿ. ಆರ್. ರಾಮಯ್ಯ ಮತ್ತು ಶ್ರೀ ಪಿ. ಬಿ. ಶ್ರೀನಿವಾಸನ್ ಇವರಿಗೆ ಆ ಸಮಿತಿ, ಕೋರ್ಟಿನ ಅವಮಾನದ ಆರೋಪ ಹೊರಿಸಿ ವಿಧಿಸಿದ ಶಿಕ್ಷೆಯ ವಿರುದ್ಧ ಮೈಸೂರು ಹೈಕೋರ್ಟಿಗೆ ಆರೋಪಿಗಳು ಅರ್ಜಿ ಮಾಡಿಕೊಂಡು ಸಮಿತಿಗೆ ಈ ರೀತಿ ಶಿಕ್ಷೆ ವಿಧಿಸುವ ಅಧಿಕಾರವಿಲ್ಲೆಂದು ವಾದಿಸಿದ್ದರು. ಅದರ ವಿಚಾರಣೆಯಾಗಿ ತೀರ್ಪು ಕಾದಿರಿಸಲ್ಪಟ್ಟಿತ್ತು. ಈ ನಡುವೆ ಮಹಾರಾಜರ ಈ ಆರ್ಡಿನನ್ಸ ಹೊರಟು ಸಮಿತಿಯ ಮೇಲೆ ಹೈಕೋರ್ಟಿನ ಅಧಿಕಾರವಿಲ್ಲವೆಂದು ಸಾರಿದ್ದಲ್ಲದೆ, ಸಮಿತಿ ಮೊದಲಿಂದ ಮಾಡಿದ ಕಾರ್ಯಗಳೂ ಕೊಟ್ಟ ಶಿಕ್ಷೆಗಳೂ (ಕ್ರಮಬದ್ಧವಾಗಿಲ್ಲದಿದ್ದರೂ) ಕ್ರಮಬದ್ಧವೆಂದು ಗ್ರಹಿಸಲ್ಪಡಬೇಕೆಂದು ವಿಧಿಸಿತು. ಮದ್ರಾಸ ಹೈಕೋರ್ಟಿನ ನಿವೃತ್ತ ನ್ಯಾಯಮೂರ್ತಿ ಅಯ್ಯರರು ಹೇಳಿದಂತೆ ಇದು ಅತ್ಯಂತ ಖಂಡನಾರ್ಹವಾಗಿದೆಯಲ್ಲದೆ ಹೈಕೋರ್ಟಿಗೆ ಅವಮಾನ ಮಾಡುವಂಥದು. ಹೈಕೋರ್ಟಿನವರು ಈ ಅಪೀಲನ್ನು ಕಿತ್ತುಹಾಕುತ್ತ ಮಹಾರಾಜರ ಆರ್ಡಿನನ್ಸು ಈ ಸಂಧಿಯಲ್ಲಿ ಹೊರಟಿರದಿದ್ದರೆ, ಹಿಂದಿನ ಕಾಯದೆಯಂತೆ ಆರೋಪಿಗಳು ನಿರ್ದೋಷಿಗಳೇ ಆಗಿದ್ದರೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಅಂದಮೇಲೆ ಗೋಪಾಲರಾವ ಸಮಿತಿಯವರು ಕಾಯದೆ ವಿರುದ್ಧವಾಗಿ ವಿಧಿಸಿದ ಶಿಕ್ಷೆಯನ್ನು ಕಾಯಂ ಮಾಡುವದಕ್ಕಾಗಿ ಈ ಆರ್ಡಿನನ್ಸು ಬೇಕೆಂದೇ ಹೊರಟಿತು. ಇದು ನಾಗರಿಕ ಸ್ವಾತಂತ್ರ್ಯ ಪತ್ರಿಕಾ ಸ್ವಾತಂತ್ರ್ಯಗಳ ಅಪಹಾರವಲ್ಲದಿದ್ದರೆ ಮತ್ತೇನು? ಅದೂ ಇಂಥ ಸ್ವಾತಂತ್ರ್ಯಗಳಿಗಾಗಿ ಹೋರಾಡಿದ್ದ ಕಾಂಗ್ರೆಸ್ ಮಂತ್ರಿಗಳೇ ಇದನ್ನು ಹೊರಡಿಸಲು ಮಹಾರಾಜರಿಗೆ ಸಲಹೆ ಇತ್ತದ್ದು ಇನ್ನಷ್ಟು ನಿಂದ್ಯವಾದುದು. ಗೋಪಾಲರಾವ ಪ್ರಕರಣವೇನಾದರೂ ರಾಷ್ಟ್ರೀಯ ಮಹತ್ವದ್ದೋ ದೇಶ ಸಂರಕ್ಷಣಕ್ಕೆ ಸಂಬಂಧಿಸಿದ್ದೋ ಆಗಿದ್ದರೆ ಮಾತು ಬೇರೆಯಿತ್ತು. ಇದೋ ಕ್ಷುಲ್ಲಕ ದಿವಾಳಿ ಪ್ರಕರಣ, ಇದಕ್ಕೋಸ್ಕರ ಈ ಬ್ರಹ್ಮಾಸ್ತ್ರವೆತ್ತಿದ್ದು ಮೈಸೂರಿನ "ಜನಪ್ರಿಯ" ಮಂತ್ರಿ ಮಂಡಲಕ್ಕೆ ಶೋಭಿಸದ್ದು. ಇಂಥ ವಿಶೇಷಾಜ್ಞೆಯನ್ನು ಹೊರಡಿಸಲಿಕ್ಕೆ ಅಂಥ ಗಂಡಾಂತರ ಪ್ರಸಂಗವೇನಿದ್ದಿತೆಂಬ ಬಗ್ಗೆ ಮೈಸೂರು ಸರಕಾರವು ಸ್ಪಷ್ಟೀಕರಿಸುವದೋ

ಚಲಾವಣೆಯ ಸಮಸ್ಯೆ

ಹಿಂದೀ ಸರಕಾರ ಮತ್ತು ಜನತೆಯ ಲಕ್ಷ್ಯವನ್ನು ತಿಆಪ್ರಸರಣ ಮತ್ತು ಅತಿಮೂಲ್ಯಗಳು ಈಗ ಹೆಚ್ಚಾಗಿ ಸೆಳೆದಿವೆ. ಈ ತೊಂದರೆಗಳಿಂದ ಹೊರ ಹೊರಡುವ ಮಾರ್ಗವನ್ನು ಸೂಚಿಸಲು ಉದ್ಯಮಿಗಳ, ಅರ್ಥಶಾಸ್ತ್ರಿಗಳ ಮತ್ತು ತಜ್ಞರ ಪರಿಷತ್ತುಗಳನ್ನು ಹಿಂದೀ ಸರಕಾರ ಆಮಂತ್ರಿಸಿತು. ನಿಸ್ಸಂಶಯವಾಗಿಯೂ ಅವರು ಮೇಧಾವಿಗಳು, ವಿದ್ವಾಂಸರು ಮತ್ತು ಸಮರ್ಥರು. ಅವರ ಹತ್ತಿರ ಅಂಕೆ ಸಂಖ್ಯೆಗಳ ಪಟ್ಟಿಯಿದೆಯಲ್ಲದೆ ಅವರು ಅಂತಾರಾಷ್ಟ್ರೀಯ ವ್ಯಾಪಾರ ಮತ್ತು ರಾಜಕಾರಣಗಳನ್ನು ತಿಳಿದವರು. ಆದರೆ ಸಲಹೆ ಕೊಡಲೆಂದು ಕರೆಸಿದವರಲ್ಲಿ ಗುಣಪಡಿಸಲು ಕೊಟ್ಟ ರೋಗಗಳ ಸ್ವಭಾವದ ದೆಸೆಯಿಂದ ಸ್ವತಃ ಒಬ್ಬರಿಗಿಂತ ಒಬ್ಬರು ಅಧಮರಾಗಿದ್ದಾರೆಂಬುದು ವಸ್ತುಸ್ಥಿತಿಯಾಗಿದೆ. ಅವರಲ್ಲಿ ಅನೇಕರು ಇಲ್ಲಿಯ ವರೆಗೆ ದುಃಖಕರವೆಂದು ಸಾರ್ವಜನಿಕರಿಗೆ ತೋರುವ ಸಂಗತಿಗಳಿಂದ ನಿಜವಾಗಿಯೂ ಲಾಭಹೊಂದಿದವರಾಗಿದ್ದಾರೆ. ದೊಡ್ಡದಾದ ಜಾಗತಿಕ ಯುದ್ಧವೊಂದೇ ಅಲ್ಲ, ದೇಶ ವಿಭಜನೆ, ಜನರ ಅಪಗಮನ ಆಗಮನಗಳು ಕಾಶ್ಮೀರದ ಯುದ್ಧ, ನಿಜಾಮರೊಡನೆ ತೋರಿದ ವೈರ; ಅನ್ನ, ಸಕ್ಕರೆ, ತುಪ್ಪ, ಬಟ್ಟೆ, ಸೀಮೆಯೆಣ್ಣೆ, ಕಟ್ಟಿಗೆ, ಇದ್ದಲು, ಮನೆ, ಗೋಗ್ರಾಸ, ಹಿಂಡಿ ಮತ್ತು ಇತರ ಹಲವಾರು ಸಾಮಗ್ರಿಗಳ (ಮೋಟಾರು ಕಾರುಗಳಿಗೆ ಅಗತ್ಯವಾದ ಪೆಟ್ರೋಲೊಂದನ್ನು ಬಹುಶಃ ಬಿಟ್ಟು) ಅಭಾವ ಅವರ ಸುಖವನ್ನು ಕಡಿಮೆಮಾಡಲಿಲ್ಲ. ಇಲ್ಲವೆ ಜೀವನಮಟ್ಟವನ್ನು ಇಳಿಸಿಲ್ಲ. ಸೀದಾ ಪದ್ಧತಿ ಅವರ ಯುದ್ಧಪೂರ್ವ ಜೀವನರೀತಿಯನ್ನೇನೂ ಹೆಚ್ಚಾಗಿ ಅವಸ್ಥಾಂತರಗೊಳಿಸಿಲ್ಲ. ಕೈಬೆರಳಷ್ಟು ಅತಿಥಿಗಳನ್ನಲ್ಲದೆ ಹೆಚ್ಚಿಗೆ ಜನರನ್ನು ಊಟಕ್ಕೆ ಕರೆಯಬಾರದೆಂಬ ಆಜ್ಞೆ ಅವರೆದುರು ಸಾಮಾಜಿಕ ಇಲ್ಲವೆ ಆರ್ಥಿಕವಾದ ಯಾವ ಗಂಭೀರ ಸಮಸ್ಯೆಯನ್ನೂ ಒಡ್ಡಲಿಲ್ಲ. ಅವರಲ್ಲಿ ಅನೇಕರು ತಮ್ಮಲ್ಲಿ ಬೇಕಾದಷ್ಟಿರುವ ಮತ್ತು ತಮ್ಮೆಡೆಗೆ ಸೆಳೆದುಕೊಳ್ಳಬಲ್ಲ ನೋಟು ನಾಣ್ಯಗಳ ನೆರವಿನಿಂದ ಎಲ್ಲ ನಿಯಂತ್ರಣದ ಕಟ್ಟುಗಳನ್ನೂ ದಾಟ ಹೋಗುವ ಸ್ಥಿತಿಯಲ್ಲಿ ಇದ್ದವರು. ಸೀದಾದ ಒಂದು ಪದಾರ್ಥವನ್ನೂ ತರದೆ ಅವರು ನೂರಾರು ಅತಿಥಿಗಳಿಗೆ ಔತಣ ನೀಡಬಲ್ಲರು. ಅವರು ಸಮಸ್ಯೆಯನ್ನು ಬಿಡಿಸ ಬಂದುದು ಕೇವಲ ಪ್ರತ್ಯಗಾತ್ಮರಾಗಿ, ಸಾಕ್ಷೀಭೂತರಾಗಿ.

ಸ್ವತಃ ಅವರಲ್ಲಿ ಹಲವರು ಈಗ ನಡೆಯುತ್ತಿರುವಂತೆಯೇ ಪರಿಸ್ಥಿತಿ ಉಳಿಯಬೇಕೆಂಬುದರಲ್ಲಿ ಆಸಕ್ತಿಯುಳ್ಳವರಾಗಿದ್ದಾರೆ. ಅವರು ಎಷ್ಟೇ ಪ್ರಾಮಾಣಿಕತೆಯಿಂದಲೂ ಸಹಾನುಭೂತಿಯಿಂದಲೂ ವಿಚಾರ ಮಾಡಲು ಯತ್ನಿಸಿದರೂ ಅವರ ಸ್ವಸಂರಕ್ಷಣಾಪ್ರವೃತ್ತಿಯು ಯಾವ ತರಣೋಪಾಯವನ್ನೂ ಸ್ವವರ್ಗೀಯರ ಸುಖ ಮತ್ತು ಲಾಭಗಳನ್ನು ಅದು ತಕ್ಕಮಟ್ಟಿಗೆ ಕಡಿಮೆ ಮಾಡುವುದಾದರೆ "ಕಾರ್ಯಕಾರಿಯಾದ ಸಲಹೆ" ಎಂದು ಅದನ್ನು ಗಣಿಸಲು ಬಿಡದು.

ಈ ರಾಜಕೀಯ ಮತ್ತು ಔದ್ಯಮಿಕ ಪ್ರಭಾವಿಗಳ ರಾಜಕೀಯ ಔದ್ಯಮಿಕ ಮತ್ತು ಆರ್ಥಿಕ ವಾದಗಳು ಮತ್ತು ಧೋರಣಗಳೇ ಸ್ವತಃ ಇಂದಿನ ಅಸ್ತವ್ಯಸ್ತತೆಯನ್ನು ಹುಟ್ಟಿಸಿವೆ. ಜಗತ್ತನ್ನು ಇಂದಿನ ಕಂಟಕದಲ್ಲಿ ಒಗೆದ ವಾದ ಮತ್ತು ಧೋರಣಗಳಲ್ಲೇ ಅವರು ಇನ್ನೂ ತಮ್ಮ ನಂಬಿಗೆಯನ್ನು ದೃಢವಾಗಿ ಇಡುತ್ತಾರೆ. ಅವರ ಸ್ವಭಾವವನ್ನರಿತರೆ ನಿಜವಾದ ತರಣೋಪಾಯವನ್ನು ಅವರು ಸೂಚಿಸಬಲ್ಲರೆಂಬುದನ್ನು ನಿರೀಕ್ಷಿಸಲಾಗದು. ದಿವಾಳಿಯ ಸ್ಥಿತಿಗೆ ತನ್ನ ವ್ಯಾಪಾರಸಂಸ್ಥೆಯನ್ನು ತಂದರೂ ಕಂತ್ರಾಟು ಮತ್ತು ಸಟ್ಟಾ ಲೆಕ್ಕಾಚಾರದ ವ್ಯಾಪಾರದಲ್ಲೇ ಶ್ರದ್ಧೆಯಿಡುವ ಸಟ್ಟಾ ಆಡುವವನು ತನ್ನ ವ್ಯಾಪಾರಸಂಸ್ಥೆಯನ್ನು ಸಂಕಟದಿಂದ ಪಾರು ಮಾಡಲಾರನು. ಏಕೆಂದರೆ, "ಕಳೆದುಕೊಳ್ಳುತ್ತಿರುವ ಜೂಜುಗಾರ ದ್ವಿಗುಣಿತ ಉತ್ಸಾಹದಿಂದ ಆಡುತ್ತಾನೆ" ಎಂಬ ಗುಜರಾತಿ ಗಾದೆಯಂತೆ ಅವನ ಧೋರಣೆ. ಅವನು ತೊಂದರೆಯಿಂದ ಏನಾದರೂ ಪಾರಾದರೆ ಅದು ಕೇವಲ ಆಕಸ್ಮಿಕವೆಂದೂ ಅವನ ಅಧಿಕಾರಕ್ಕೆ ಮೀರಿದ ಹೊರಗಿನ ಶಕ್ತಿಗಳಿಂದಲೇ ಎಂದೂ ತಿಳಿಯಬೇಕು.

ಮೂರನೆಯದಾಗಿ, ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರು ತಮ್ಮ ಅರ್ಥಶಾಸ್ತ್ರದ ಪಠ್ಯಪುಸ್ತಕಗಳಲ್ಲಿ ಏನೇ ಹೇಳಲಿ, ಇಡೀ ಜಗತ್ತಿನಲ್ಲಿ ಇಂದು ಪ್ರಚಲಿತವಿರುವ ಅರ್ಥಸೂತ್ರವೆಂದರೆ "ವೈಶ್ಯವಾದ"ವೊಂದೇ! ಚಿನ್ನ ಅಥವಾ ಬೆಳ್ಳಿಯಿಂದ ಅಥವಾ ಇನ್ನಾವುದಾದರೂ ಸ್ಪರ್ಶರಹಿತ ಮೂಲದಿಂದ ಬೆಂಬಲ ಪಡೆದಿದ್ದ ನೋಟು ಐಶ್ವರ್ಯದ ಮಟ್ಟದ ಅಳತೆಗೋಲಾಗಿದೆಯಲ್ಲದೆ ಸ್ವತಃ ಐಶ್ವರ್ಯವೆಂದೇ ಗಣಿಸಲ್ಪಡುತ್ತದೆ. ಸ್ವತಃ ಅದೇ ಜೀವನದ ನಿಜವಾದ ಯಾವ ಆವಶ್ಯಕ ಪದಾರ್ಥವನ್ನೂ ಒದಗಿಸಲಾಗಲಿ ಉತ್ಪಾದಿಸಲಾಗಲಿ ಸಮರ್ಥವಿರದಿದ್ದರೂ ಅದಕ್ಕೆ ಬಡ್ಡಿಯನ್ನು ಕೇವಲ ನಿಕ್ಷೇಪಸ್ಥಾನದ ಬದಲಾವಣೆಯಿಂದ ಉತ್ಪಾದಿಸುವ ಶಕ್ತಿಯನ್ನು ಕೊಡಲಾಗಿದೆ; ಬಡ್ಡಿಯನ್ನು ಕೊಡುವುದೆಂದರೆ ಸಂಪತ್ತಿನ ಇಲ್ಲವೆ ಆವಶ್ಯಕ ಪದಾರ್ಥಗಳ ಉತ್ಪಾದನೆಯನ್ನು ಕಡಿಮೆ ಮಾಡುವುದು ಎಂಬುದನ್ನು ಮರೆತುಬಿಡಲಾಗಿದೆ. ವೈಶ್ಯಬುದ್ಧಿಯು ಅಷ್ಟು ಆಳವಾಗಿ ವಿಚಾರ ಮಾಡಲಾರದು. ಪತ್ರಿಕೆಗಳಲ್ಲಿ ಬಂದಿರುವ ವರದಿಗಳ ಮೇಲಿಂದ ಉದ್ಯಮಿ ಮತ್ತು ಅರ್ಥಶಾಸ್ತ್ರಿಗಳ ಸಲಹೆಗಳ ಯೋಗ್ಯತೆಯನ್ನು ನಿರ್ಣಯಿಸುವುದಾದರೆ ಮೇಲಿನ ನ್ಯೂನತೆಗಳಿಂದ ಅವು ತುಂಬಿವೆ. ಉದಾಹರಣೆ ಬೇಕಾದರೆ, ಕೆಲವು ಸಲಹೆಗಳು ಈ ಕೆಳಗಿನಂತಿವೆ:

(೧) ಸರಕಾರವು ತನ್ನ ಆದಾಯ ಹೆಚ್ಚಿಸಿ ಖರ್ಚನ್ನು ಕಡಿಮೆ ಮಾಡಬೇಕು. ಈ ಕೆಲಸಕ್ಕಾಗಿ ಪಾನನಿರೋಧವನ್ನು ಕೆಲ ಕಾಲ ನಿಲ್ಲಿಸಬೇಕು ಇಲ್ಲವೆ ನಿಧಾನಿಸಬೇಕು, ಸಾಮಾಜಿಕ, ವಿದ್ಯಾಸಂಬಂಧಿ ಮತ್ತು ಸಾರ್ವಜನಿಕ ಹಿತದ ಚಟುವಟಿಕೆಗಳನ್ನು ಮಿತಿಯೊಳಗಿಡಬೇಕು; ಭೂಕಂದಾಯದಲ್ಲಿ ನಿರಾಶ್ರಿತರ ಪುನರ್ನಿವಾಸ ಮತ್ತು ಕಾಶ್ಮೀರಯುದ್ಧಗಳ ಖರ್ಚಗಾಗಿ ತೆಗೆಯಬಾರದು; ಅದಕ್ಕೆ ಸಾಲ ತೆಗೆಯಬೇಕು. (ಅಂದರೆ–ಮುಂದಿನ ಪೀಳಿಗೆಯ ಮೇಲೆ ಅದರ ಭಾರವನ್ನು ಹೇರಬೇಕು).

(೨) ಉತ್ಪಾದನೆ ಹೆಚ್ಚಬೇಕು; ಇದಕ್ಕಾಗಿ ಬಂಡವಾಲದ ಲಾಭದ ಮೇಲಿನ ತೆರಿಗೆಯನ್ನು ತೆಗೆದುಹಾಕಿ ಅದು ಸಂಕುಚಿತವಾಗಿ ಒಳಗೇ ನಿಂತಿರದಂತೆ ಮಾಡಬೇಕು. ನೂರಕ್ಕೆ ೬ ರ ವರೆಗೆ ಲಾಭಾಂಶ ಏರಲು ಬಿಡಬೇಕು. ಖಾತ್ರಿಯಾದ ಉದ್ಯಮಧೋರಣೆಯನ್ನು ಪುನಃ ಸಾರಬೇಕಲ್ಲದೆ ರೈತರು ಮತ್ತು ಕಾರಖಾನೆಯ ಕೆಲಸಗಾರರು ಕೂಡಿಟ್ಟ ಹಣವನ್ನು ಬಳಸಿಕೊಳ್ಳಬೇಕು. ಇಂದಿನ ನೋಟು ನಾಣ್ಯಗಳ ಬೆಲೆಯನ್ನು ಇಳಿಸುವ ಉದ್ದೇಶ ತಾಳದೆ ಒಳ್ಳೆಯ ಕಾಳು, ಸೀಮೆಯೆಣ್ಣೆ, ಬೆಂಕಿಪೆಟ್ಟಿಗೆ ಮುಂತಾದ ಜೀವನಾವಶ್ಯಕ ವಸ್ತುಗಳನ್ನು ಧಾರಾಳವಾಗಿ ಹೊರಗಿನಿಂದ ತರಿಸಬೇಕು; ಮತ್ತು ಉಕ್ಕು, ಅಪೂರ್ವವಾದ ಖನಿಜ, ಉದ್ಯಮದ ಮುಖ್ಯವಾದ ಅಪಕ್ವ ಸಾಮಗ್ರಿ ಮುಂತಾದ ಮೂಲಭೂತ ದ್ರವ್ಯಗಳನ್ನು ಹೆಚ್ಚಾಗಿ ಆಯಾತ ಮಾಡಿಕೊಳ್ಳಬೇಕು:

(೩) ಒಕ್ಕಲುತನವನ್ನು ಪ್ರೋತ್ಸಾಹಿಸಬೇಕೆಂಬುದನ್ನು ಹೇಳಲಾಗಿದೆಯೆಂಬುದರಲ್ಲಿ ಸಂದೇಹವಿಲ್ಲ. ಆದರೆ ಮೇಲಿನ ಹಿನ್ನೆಲೆಯಲ್ಲಿದ್ದರೆ ಆದರ ಅರ್ಥ ಔದ್ಯಮಿಕ ಮತ್ತು ವಾಣಿಜ್ಯ ಸಂಬಂಧಿ ಒಕ್ಕಲುತನದ ಅಭಿವೃದ್ಧಿಯೆಂದಾಗಿದ್ದರೆ ನಿಜವಾಗಿ ಆಶ್ಚರ್ಯಪಡಬೇಕಾಗುತ್ತದೆ. ಅಂದರೆ, ರೊಕ್ಕದ ಬೆಳೆಗಳಾದ ಹೊಗೆಸೊಪ್ಪು, ಹತ್ತಿ, ಚಹ, ಕಾಫಿ, ಕಬ್ಬು ಮುಂತಾದವು:

(೪) ತನ್ನ ಧೋರಣವನ್ನು ಅಮಲಿನಲ್ಲಿ ತರುವಲ್ಲಿ ನೆರವಾಗಲು ಸರಕಾರವು ಅರ್ಥಶಾಸ್ತ್ರಿಗಳ ವ್ಯಾಪಾರಿಗಳ ಮತ್ತು ಶ್ರಮಜೀವಿಗಳ ಪ್ರಾತಿನಿಧಿಕ ಸಮಿತಿಗಳನ್ನು ಇಲ್ಲವೆ ಒಂದು ಸಲಹೆಗಾರ ಸಮಿತಿಯನ್ನು ಸದಾ ಇರುವಂತೆ ಸಿದ್ಧಪಡಿಸಿಕೊಳ್ಳಬೇಕು ಎಂದು ಸಲಹೆ ಮಾಡಲಾಗಿದೆ. ಹಳ್ಳಿಯ ಮನೆಯ ಇಲ್ಲವೆ ಚಿಕ್ಕ ಕೈಗಾರಿಕೆಗಳ ಪ್ರತಿನಿಧಿಗಳ ಹೆಸರನ್ನೇ ಎತ್ತಿಲ್ಲ; ಹಳ್ಳಿಯ ಕೆಲಸಗಾರರು, ಶ್ರಮಜೀವಿಗಳು, ರೈತರು, ಗೋಸಂತಾನವರ್ಧಕರು ಮತ್ತು ಮಿತವಾದ ನಿರ್ದಿಷ್ಟ ಆದಾಯವುಳ್ಳ ಬಳಕೆಗಾರರ ಪ್ರತಿನಿಧಿಗಳ ಬಗ್ಗೆ ಏನೂ ಹೇಳಿಲ್ಲ. ಅತಿಮೂಲ್ಯ ಮತ್ತು ಅತಿಪ್ರಸರಣಗಳ ಎಕ್ಕಡ ಯಾರಿಗೆ ಚುಚ್ಚುವುದೋ ಆ ಮನುಷ್ಯನನ್ನು ಬಿಟ್ಟು ಬಿಟ್ಟಿರುವುದು ಎದ್ದು ಕಾಣುತ್ತದೆ.

ನಿಯಂತ್ರಣ, ಕೇಡಿತನ ಹತ್ತಿಕ್ಕುವ ಕಾಯದೆ, ಶಾಸನಬದ್ಧ ಮೂಲ್ಯನಿಶ್ಚಯ ಸೀದಾಪದ್ಧತಿ ಮುಂತಾದವುಗಳ ಸಾಮರ್ಥ್ಯಕ್ಕೆ ಅವರಿಗೆ ಒಂದು ನಿಧಾನ [illegible] ಇದೆ. ಈ ಪದ್ಧತಿಗಳನ್ನು [illegible] ಬಳಸಿ, ಬಿಟ್ಟು–ಹೇಗೆ ಮಾಡಿದರೂ ಒಂದೇ ಸಮನಾಗಿ ಅವುಗಳಿಂದ ನಿಜವಾಗಿ [illegible] ಉಪಕಾರವಾಗದುದನ್ನೂ [illegible] ಅಥವಾ ಕಳ್ಳಪೇಟೆಗಾರರಿಗೆ ಕಣ್ಣಿಗೆ ಕಾಣುವ ಯಾವ ಅಡಚಣೆಯೂ ಉಂಟಾಗದುದನ್ನೂ ನೋಡಿದ್ದಾಗಿದೆ.

ಪಂಡಿತರೆನಿಸಿದ ಅರ್ಥಶಾಸ್ತ್ರಿಗಳಿಗೆ, ಅನುಭವಸ್ಥರೂ ಪ್ರತಿಭಾಶಾಲಿಗಳೂ ಎನಿಸಿದ ಮುತ್ಸದ್ದಿಯರಿಗೆ ಮತ್ತು ರಾಜಕೀಯ ಧುರೀಣರಿಗೆ ದೃಢಭಕ್ತಿ ತೋರಿಸಿ, ಈ ಸಮಿತಿಗಳು ಮಾಡಿದ ವಿವಿಧ ಸಲಹೆಗಳು, ಪ್ರಾಮಾಣಿಕವಾಗಿ ಚೆನ್ನಾಗಿ ಅಮಲಿನಲ್ಲಿ ತಂದಾಗಲೂ ರಾಷ್ಟ್ರಕ್ಕೆ ಉದ್ದಿಷ್ಟ ಪರಿಹಾರವನ್ನು ಕೊಡಲಾರವು ಅಥವಾ ಅದನ್ನು ಸಮೃದ್ಧಿಯತ್ತ ಒಯ್ಯಲಾರವು ಎಂದು ನಾನು ನಮ್ರನಾಗಿ ಹೇಳಬಯಸುತ್ತೇನೆ. ಅವರು ತೋರಿಸುವ ಮತ್ತು ಹಿಡಿದ ದಾರಿ ಸುಪ್ರಸಿದ್ಧವಾದುದೇ ಇದೆ–ಅದು ಕಡೆಯಲ್ಲಿ ದಿವಾಳಿಗೆ ಒಯ್ದು ಮುಟ್ಟಿಸುವಂಥದು. ಅದು ಅನೇಕ ಚಿಕ್ಕ ಉದ್ಯಮಿಗಳನ್ನು ವಿನಾಶಕ್ಕೀಡುಮಾಡಲು ಕೆಲವೇ ದೊಡ್ಡ ಉದ್ಯಮಿಗಳಿಗೆ ಅವಕಾಶ ಕೊಡುವುದು ಮತ್ತು ಒಂದು ದೊಡ್ಡ ದೇಶವನ್ನು ದಿವಾಳಿಗೆ ಎದುರು ಮಾಡಲಿರುವುದು. ಅವರ ತೋರಿಕೆಯ ಸಮೃದ್ಧಿ ಎಂದರೆ ಹೊಸ ಸಾಲ ಹೆಚ್ಚು ಲಾಭ ಕೊಟ್ಟೀತೆಂಬ ಆಸೆಯಿಂದ ಒಂದು ಲಕ್ಷ ರೂಪಾಯಿಯ ಸಾಲ ತೀರಿಸಲು ೫ ಲಕ್ಷ ರೂಪಾಯಿಯ ಸಾಲ ಮಾಡಿದಂತೆಯೇ ಸರಿ.

ತನ್ನ ಉದ್ಯಮವನ್ನು ಅವನು ಕೆಲಕಾಲ ಸೊಗಸಾಗಿ ಸಾಗಿಸಿಕೊಂಡು ಹೋಗಬಹುದು. ಒಂದು ವಿಧವಾದ ವಿಚಾರಪ್ರಣಾಲಿಗೂ ಕಾರ್ಯಪದ್ಧತಿಗೂ ಬಹುಕಾಲದಿಂದ ಪಳಗಿ ಹೋಗಿ ಬೇರೆ ದೃಷ್ಟಿಕೋನದಿಂದ ವಿಚಾರಿಸಿ ಕೆಡುಕಿನ ಮೂಲ ಕಾರಣವನ್ನು ಹುಡುಕಲು ಅಥವಾ ಸರಿಯಾಗಿದ್ದದ್ದನ್ನು ಅನುಸರಿಸಲು ಅವರಿಗೆ ಧೈರ್ಯವೇ ಇಲ್ಲದಾಗಿದೆ. ಇಲ್ಲಿ ನನಗೊಬ್ಬ ದೊಡ್ಡ ಉದ್ಯಮಗಾರರ ನೆನಪಾಗುತ್ತದೆ. ಅವರು ತುಂಬ ಪ್ರಾಮಾಣಿಕರು. ಆದರೆ ಅವರು ಬೆಳೆದು ಬಂದದ್ದು ಈಗಿನ ಉದ್ಯಮಪದ್ಧತಿಯ ವಾತಾವರಣದಲ್ಲಿ. ಅವರ ವ್ಯವಹಾರಗಳು ತೊಡಕುತೊಡಕಾಗ ತೊಡಗಿದ್ದವು. ಅವರು ಬದುಕುವ ಒಂದೇ ಒಂದು ಉಪಾಯವೆಂದರೆ ಎಲ್ಲ ಸಾಹುಕಾರರಿಗೂ ಕೊಡುವದನ್ನು ಕೊಟ್ಟು ತಮ್ಮ ಉದ್ಯಮ ನಿಲ್ಲಿಸಿ ಬಿಡುವದೇ ಎಂಬುದಾಗಿ ನನಗೂ ಶ್ರೀ ಜಮನಾಲಾಲಜಿ ಬಜಾಜರಿಗೂ ಸ್ಪಷ್ಟವಾಗಿ ತೋರಿತು. ಇದಕ್ಕಾಗಿ ಅವರ ಬಳಿ ಸಾಕಷ್ಟು ಆಸ್ತಿ ಇತ್ತು. ಆ ಮೇಲೆ ಅವರು ಸಣ್ಣ ಪ್ರಮಾಣದಲ್ಲಿ ಹೊಸದಾಗಿ ತಮ್ಮ ಜೀವನವೃತ್ತಿಯನ್ನು ಕೈಕೊಳ್ಳಬೇಕೆಂದು ನಮ್ಮ ಸಲಹೆಯಿತ್ತು. ಆದರೆ ಅವರಿಗೆ ಧೈರ್ಯವಾಗದೆ ಹೆಚ್ಚಿನ ತೊಡಕಿನಲ್ಲಿ ಕಾಲಿಕ್ಕಹತ್ತಿದರು. ಅವರ ಸುದೈವದಿಂದಲೇ ಎನ್ನಬೇಕು, ಅವರಿಗೆ ಸ್ವಲ್ಪ ಕಾಲ ಅನಾರೋಗ್ಯವಾಗಿ ದೇವರೇ ಅವರನ್ನು ಎಲ್ಲ ಸಂಕಟಗಳಿಂದಲೂ ಮುಕ್ತಮಾಡಿದನು. ಪರಂಪರಾಗತ ದೊಡ್ಡಸ್ತಿಕೆಯ ಹೆಮ್ಮೆಯ ಸೊಂಕಿಲ್ಲದ ಅವರ ಮಕ್ಕಳು ಶ್ರೀ ಜಮನಾಲಾಲಜಿಯ ಉಪದೇಶದಂತೆ ನಡೆದುಕೊಂಡು ತಲೆಭಾರದ ಉದ್ದಿಮೆ ನಿಲ್ಲಿಸಿ ಕೊಡುವವರಿಗೆಲ್ಲ ಕೊಟ್ಟು, ವ್ಯಾಜ್ಯವಿಲ್ಲದೆ ಉಳಿಸಿಕೊಳ್ಳಬಂದಷ್ಟನ್ನು ಉಳಿಸಿಕೊಂಡು ಅನಾಡಂಬರವಾಗಿ ಹೊಸ ಜೀವನವನ್ನು ಪ್ರಾರಂಭಿಸಿದರು.

ಇವರ ಕತೆಯೇ ರಾಷ್ಟ್ರಕ್ಕೂ ಅನ್ವಯಿಸುತ್ತದೆ–ಅದೇಕೆ ಇಡೀ ಜಗತ್ತಿಗೇ ಎಂದರೂ ಸಲ್ಲುವದು. ಜಗತ್ತಿನ ಅಪಾರ ಸಂಪದವನ್ನು ವಿಧ್ವಂಸಕ–ಯುದ್ಧಗಳಿಗಾಗಿ ನಾವು ಹಾಳುಮಾಡಿಬಿಟ್ಟಿದ್ದೇವೆ. ಕಳೆದ ಹನ್ನೆರಡು ವರ್ಷಗಳಿಗಿಂತ ಹೆಚ್ಚು ಕಾಲ ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ದಿನವೂ ವ್ಯಯವಾಗುತ್ತಿರುವ ಅಪಾರ ಸಂಪದದ ಒಂದು ಕಪರ್ದಕವೂ ಲೋಕಕಲ್ಯಾಣವನ್ನು ತರಲಿಲ್ಲ. ಅದರಿಂದ ಇನ್ನಷ್ಟು ಅಕಲ್ಯಾಣವೇ ಬೆಳೆದು ಬಂತು. ಆ ಸಂಪದವು ಅಸಂಖ್ಯಾತ ನಗರಗಳನ್ನೂ ಅಸಂಖ್ಯಾತ ಸ್ತ್ರೀಪುರುಷರನ್ನೂ ಶಿಶುಗಳನ್ನೂ ದನಗಳನ್ನೂ ಆಸ್ತಿಯನ್ನೂ ಸೂರೆಗೊಂಡಿತಲ್ಲದೆ ಕೊನೆಗೆ ಈ ಸಂಪದವು ತನ್ನನ್ನೇ ತಾನು ಸಂಹರಿಸಿಕೊಂಡಿತು. ಈ ಯುದ್ಧಪಿಪಾಸೆ ಇನ್ನೂ ತಣಿದಿಲ್ಲ. ಸೋತವರೂ ಗೆದ್ದವರೂ ಕೂಡಿಯೇ ಯುದ್ಧೋನ್ಮತ್ತರಾಗಿದ್ದಾರೆ. ಅರ್ಥಹೀನ ಸಂಪದದ ಬಲದಿಂದ, ಲಾಭದೃಷ್ಟಿಯಿಂದ ಅರ್ಥಹೀನವೇ ಆದ ಔದ್ಯೋಗೀಕರಣದ ಮುಖಾಂತರದಾಗಿ ಈ [illegible] ಕೊಳ್ಳುವ ಹವ್ಯಾಸ ನಡೆದಿದೆ.

ಎಲ್ಲರ ಬಾಯಲ್ಲಿಯೂ ಉತ್ಪಾದನೆ ಹೆಚ್ಚ ಬೇಕು ಎಂಬುದೇ ಮಾತು. ಆದರೆ [illegible] ದಾಗುತ್ತಿದೆ. [illegible] ತಿಳಿಯದಾಗುತ್ತಿದೆ. [illegible] ಪ್ರೋತ್ಸಾಹ ಕೊಡಬೇಕೆಂದು ಕೇಳಲಾಗುತ್ತಿದೆ. ಆದರೆ ಪ್ರೋತ್ಸಾಹ ಕೊಡತಕ್ಕದ್ದು [illegible] ಬೆಳೆಸುವದಕ್ಕೆ.

ಜನರ ಸಂಬಳಗಳೇ ಪಾವತಿಯಾಗುವಷ್ಟು ಚಲಾವಣೆಯ ಬೆಲೆಯನ್ನು [illegible] ವದು ಉಚಿತವಲ್ಲ. ಮುಕ್ತವಾದ ಹೊಸ ಚಲಾವಣೆಯ ಪದ್ಧತಿಯನ್ನೇ ಕಲ್ಪಿಸಬಹುದು. ಅಂದರೆ ಹೊಸದಾಗಿ ನೋಟುಗಳನ್ನು ಹೊರಡಿಸ ಅಗತ್ಯವೇ ಬೀಳುವದಿಲ್ಲ. ಈಗಿನ ನೋಟುಗಳನ್ನು ಸರಕಾರವು ತನ್ನ ಭಂಡಾರಕ್ಕೆ ಮರಳಿಸಿಕೊಳ್ಳಬಹುದು. ಈಗಿನ ಚಲಾವಣೆಯು [illegible] ಧನವಾಗಿ ಉಳಿದಿದೆ. ಅದ್ದರಿಂದ ಅವನ್ನು ಮರಳಿಸಿಕೊಳ್ಳಲು ಪ್ರಯತ್ನಿಸಬೇಕು. ಈ ಚಲಾವಣೆಗಿಂತ ಹೆಚ್ಚು ಬೆಲೆ ಬಾಳುವ ಶಾಸನಬದ್ಧ ವಿನಿಮಯ ಸಾಧನವನ್ನು ಬಳಕೆಯಲ್ಲಿ ತರುವದರ ಮೂಲಕ ಇದನ್ನು ಸಾಧಿಸಬಹುದು. ಹೊಸ ಅರ್ಥತತ್ವದ ಮೇಲೆ ಹೊಸ ಮಾದರಿಯ ಚಲಾವಣೆಯನ್ನು ಮುಂದಿಟ್ಟು ಈಗಿದ್ದ ಚಲಾವಣೆಯನ್ನು ತಿರುಗಿಸಿಕೊಳ್ಳಲೂ ಬಹುದು. ಉದಾಹರಣಾರ್ಥ, ನೂರು ರೂಪಾಯಿಯ ಮತ್ತು ಹತ್ತು ರೂಪಾಯಿಯ ನೋಟುಗಳನ್ನೆಲ್ಲ ಆಯಾ ಬೆಲೆಗೇ ತೆಗೆದುಕೊಂಡು ಅವುಗಳಿಗೆ ಪ್ರತಿಯಾಗಿ ಚಲಾವಣೆಯ ಹೊಸ ತಾರೀಖು ಹಾಕಿದ ಹೊಸ ನೋಟುಗಳನ್ನು ಕೊಡಬೇಕು; ವರ್ಷಾಂತ್ಯದಲ್ಲಿ ಈ ನೋಟುಗಳು ಜನರ ಕೈಯಲ್ಲಿ ಇದ್ದರೆ ಪ್ರತಿ ರೂಪಾಯಿಗೂ ಒಂದು ಆಣೆ ಮುರಿಕೊಳ್ಳಲಾಗುವದೆಂದೂ ಆದರೆ ವರ್ಷದ ಕೊನೆಯ ತಿಂಗಳಲ್ಲಿ ಬ್ಯಾಂಕಿನಲ್ಲಿ ಅವನ್ನು ತಂದು ತೋರಿಸಿದ್ದಾದರೆ ಹೀಗೆ ರೂಪಾಯಿಗೆ ಒಂದು ಆಣೆ ಮುರಿಕೊಳ್ಳಲಾಗುವದಿಲ್ಲವೆಂದೂ ಶಾಸನಬದ್ಧವಾಗಿ ಸಾರಬೇಕು. ಹೀಗೆ ಮುರಿಕೊಳ್ಳುವ ಕ್ರಮವು ಪ್ರತಿ ವರ್ಷಾಂತ್ಯಕ್ಕೂ ನಡೆಯಬೇಕು. ಹೀಗಾಗುವದರಿಂದ ೧೯೪೯ರಲ್ಲಿ ಹೊರಡಿಸಿದ ೧೦ ರೂ. ದ ನೋಟು ೧೯೫೦ರಲ್ಲಿ ಇನ್ನೂ ಚಲಾವಣೆಯಲ್ಲಿದ್ದರೆ ಅದಕ್ಕೆ ೧೦ ಆಣೆ ಬೆಲೆ ಕಡಿಮೆಯಾಗುವದು. ಆದರೆ ಆ ವರ್ಷ ಮುಗಿವ ಮೊದಲೇ ಆ ನೋಟನ್ನು ಬ್ಯಾಂಕಿನಲ್ಲಿ ಒಪ್ಪಿಸಿದ್ದಾದರೆ ಅದಕ್ಕೆ ಪೂರ್ಣ ಬೆಲೆ ದೊರಕುವದಲ್ಲದೆ ಹೊಸ ತಾರೀಖು ಹಾಕಿದ ಹೊಸ ನೋಟನ್ನು ಅದರ ಒಡೆಯನಿಗೆ ಕೊಡಲಾಗುವದು. ಒಂದು ವೇಳೆ ೧೯೫೦ ರಲ್ಲಿಯೂ ೧೯೪೯ ರಲ್ಲಿ ಹೊರಟ ೧೦ರೂ ನೋಟು ಬ್ಯಾಂಕನ್ನು ಕಾಣದಿದ್ದರೆ ೧ ರೂ ೪ ಆಣೆ ಅದರ ಬೆಲೆ ಕಡಿಮೆಯಾಗುವದು. ಹೀಗೆ ಆ ನೋಟನ್ನು ಬ್ಯಾಂಕಿಗೆ ಒಪ್ಪಿಸಿ ಹೊಸದನ್ನು ಪಡೆಯುವ ವರೆಗೆ ಮುರಕೊಳ್ಳುವ ಈ ಕ್ರಮ ನಡೆಯುತಕ್ಕದ್ದು.

ಸಾರಾಂಶ, ರಾಷ್ಟ್ರವು ಆಧುನಿಕ ಉದ್ಯಮತತ್ವವನ್ನು ನಿರ್ನಾಮಗೊಳಿಸಬೇಕು. ಯಾಕೆಂದರೆ ಇಂದಿನ ಉದ್ಯಮಗಳು ಬದುಕುವದೂ ಬೆಳೆಯುವದೂ ಯುದ್ಧಗಳ ಮೂಲಕ, ಸಟ್ಟಾ ವ್ಯಾಪಾರದ ಮೂಲಕ. ನಾಡಿಗೆ ಏನು ಬೇಕೆಂಬುವನ್ನು ಲಕ್ಷಿಸದೆ ಪರದೇಶಕ್ಕೆ ಬೇಕಾದವುಗಳನ್ನೇ ಇವು ಹುಟ್ಟಿಸಿ ಪರದೇಶ ವ್ಯಾಪಾರ ಕಾಯ್ದುಕೊಳ್ಳಲು ತವಕಿಸುತ್ತವೆ. ಅನಾವಶ್ಯಕ ವಿಲಾಸ ವಸ್ತುಗಳನ್ನು ಹೆಚ್ಚಿಸಿ ವಿಧ್ವಂಸಕ ಶಸ್ತ್ರಗಳನ್ನು ಉತ್ಪಾದಿಸಿ ಈ ಉದ್ದಿಮೆಗಳು ತಾವು ಬದುಕಲು ಹವಣಿಸುವವು. ಉದ್ಯಮತತ್ವವು ವೈಯಕ್ತಿಕ ಅಥವಾ ರಾಷ್ಟ್ರೀಯ ಸುಗುಣಾಚರಣವನ್ನು ಹೆಚ್ಚಿಸುವಂತಹದಿರದು. "ಸಾಲ ತರುವ ಸಾಮರ್ಥ್ಯವೇ ಶಕ್ತಿಯ ಅಳತೆಗೋಲು" ಎಂಬ ಭಾವನೆಯು ವಿನಾಶಕವಾಗಿದೆ. ಪ್ರಾಮಾಣಿಕ ಉದ್ದಿಮೆಗಾರನನ್ನು ಅನುಸರಿಸತಕ್ಕ ಧೋರಣವಿದ್ದು, ತಿಳಿಗೇಡಿಯಾದ ಒಕ್ಕಲಿಗನೂ [illegible] ಸಟ್ಟಾಗಾರನೂ ಜಗತ್ತಿಗೆ [illegible] ವ್ಯಾಪಾ

(೧೦ ನೆಯ ಪುಟಕ್ಕೆ)

ಟಿಪ್ಪಣಿಗಳು

ನೆರೆ ಮತ್ತು ಕ್ಷಾಮ

ಪಂಜಾಬ ಮತ್ತು ಸಂಯುಕ್ತಪ್ರಾಂತದಿಂದ ಬಂದ ವಿಪರೀತ ನೆರೆಹಾವಳಿಯ ಸುದ್ದಿ ವಿಷಾದಕರವಾಗಿದೆ. ತಮ್ಮ ಕ್ರೂರತನ, ಮೂಢತ್ವ ಮತ್ತು ಅಜ್ಞಾನದಿಂದ ಅಲ್ಲಿನ ಮಾನವರು ಎಸಗಿದ ಅನರ್ಥ ಪರಂಪರೆ ಮತ್ತು ನಾಶವು ಸಾಕಷ್ಟಿರಲಿಲ್ಲವೋ ಎಂಬಂತೆ, ಅಷ್ಟೇ ಅಂಧ ಮತ್ತು ವಿವೇಕಶೂನ್ಯ ಪ್ರಕೃತಿಯು ಸತತ ಮಳೆ ಮತ್ತು ನೆರೆಯಿಂದ ಭಯಂಕರ ಅನರ್ಥವನ್ನುಂಟುಮಾಡಹತ್ತಿದೆ; ಅದರೆ ಅದೇ ಕಾಲಕ್ಕೆ ಪಶ್ಚಿಮ ಹಿಂದುಸ್ಥಾನದಲ್ಲಿ ಕ್ಷಾಮದ ಭೀತಿಯನ್ನು ಹಾಕಹತ್ತಿದೆ.

ಈ ದುರ್ದೈವಿ ಜನರ ಕಷ್ಟಪರಿಹಾರಕ್ಕಾಗಿ ಹಿಂದುಸ್ಥಾನದಲ್ಲಿಯ ಜನರೆಲ್ಲ ಶಕ್ಯವಿದ್ದ ಎಲ್ಲ ಬಗೆಯ ಸಹಾಯವನ್ನು ಸಲ್ಲಿಸುವರೆಂದು ನಾನು ಆಶಿಸುತ್ತೇನೆ. ಇದೀಗ ರಾಷ್ಟ್ರೀಯ ಸರಕಾರ ಸ್ಥಾಪಿತವಾಗಿದೆಯಾದ್ದರಿಂದ ಸಮಾಜಸೇವೆಯ ಸಂಘಗಳನ್ನು ಸ್ಥಾಪಿಸಿಕೊಂಡು ಭೂತದಯೆಯ ಕಾರ್ಯವನ್ನು ಮಾಡುವ ಅವಶ್ಯಕತೆಯೇನೂ ಉಳಿದಿಲ್ಲ ಎಂಬ ತಪ್ಪು ಕಲ್ಪನೆ ಮಾಡಿಕೊಂಡು ಇಂಥ ಸಹಾಯ ಸಲ್ಲಿಸುವ ಕರ್ತವ್ಯ ಮಾಡುವದನ್ನು ಬಿಟ್ಟು ಕುಳಿತರೆ ಅದೊಂದು ಬಗೆಯ ಘಾತಕ ಸ್ವರಾಜ್ಯವಾಗಿ ಪರಿಣಮಿಸಬಲ್ಲುದು. ಇಂಥ ಸಮಾಜಸೇವೆಯನ್ನು ಮೊದಲಿಗಿಂತ ಹೆಚ್ಚು ಪರಿಣಾಮಕರ ರೀತಿಯಲ್ಲಿ ಈಗ ಮಾಡುವದಕ್ಕಾಗಿಯೇ ಸ್ವರಾಜ್ಯದ ಪ್ರಯೋಜನ ಪಡೆಯತಕ್ಕದ್ದು ಎಂಬುದನ್ನು ಎಲ್ಲರೂ ತಿಳಿಯತಕ್ಕದ್ದು.

ವರ್ಧಾ ಕಿ. ಘ. ಮ.
೧೦–೯–೪೮

ಜನಾಬ ಶೋಬುಲ್ಲಾ ಖಾನ

ಹೈದರಾಬಾದ ಸಂಸ್ಥಾನದಲ್ಲಿ ಮತ್ತು ಹಿಂದೀ... ಒಕ್ಕೂಟ ಗಡಿ ಪ್ರದೇಶದಲ್ಲಿ ದಿನವೂ ನಡೆಯುತಿರುವ ವಿಷಾದಕರ ಕೊಲೆ ಮತ್ತು ಉಳಿದ ಅತ್ಯಾಚಾರಗಳಿಗೆ ಅನೇಕ ಒಳ್ಳೆಕಾರ್ಯಕರ್ತರು ಆಹುತಿಯಾಗಹತ್ತಿರುವರು. ಅನೇಕರು ಎಷ್ಟೊಂದು ಕ್ರೂರತನದಿಂದ ಕೊಲ್ಲಲ್ಪಟ್ಟರೆಂಬುದನ್ನು ಕೇಳುವದು ಅತ್ಯಂತ ದುಃಖದ ಸಂಗತಿಯು. ಹೈದರಾಬಾದದಿಂದ ಪ್ರಸಿದ್ಧವಾಗುತಿದ್ದ ಇಮ್ರೋಜವೆಂಬ ಉರ್ದು ದೈನಿಕಪತ್ರಿಕೆಯ ತರುಣ ಸಂಪಾದಕರಾಗಿದ್ದ ಜನಾಬ ಶೋಬುಲ್ಲಾ ಖಾನರು ಇಂಥ ಅತ್ಯಾಚಾರಗಳಿಗೆ ಬಲಿಯಾದವರಲ್ಲಿ ಒಬ್ಬರು. ಸಂಸ್ಥಾನದಲ್ಲಿಯ ಅನ್ಯಾಯದ ಆಡಳಿತೆ, ಜಾತ್ಯಂಧತೆ ಮತ್ತು ಧರ್ಮಾಂಧತೆ ಹಾಗು ರಜಾಕಾರರ ಅತ್ಯಂತಿಕ ಕ್ರೌರ್ಯವನ್ನು ನಿಷೇಧಿಸಿದ್ದೇ ಅವರು ಮಾಡಿದ ಮಹಾಪರಾಧ! ಜಾತ್ಯತೀತ ಪ್ರಜಾಪ್ರಭುತ್ವದ ಪ್ರತಿಪಾದಕರಾಗಿದ್ದರವರು.

ಅವರಿಗೆ ಅವರ ಕಾರ್ಯದಲ್ಲಿ ಸಹಾಯಕರಾಗಿದ್ದ ಅವರ ಬೀಗನಿಗೂ ತೀವ್ರ ಗಾಯಗಳಾಗಿದ್ದು ಈಗ ಆಸ್ಪತ್ರೆಯಲ್ಲಿರುವರು. ಖಾನ ಸಾಹೇಬರಿಗೆ ಮರಣ ಕಾಲಕ್ಕೆ ಇನ್ನೂ ಮೂವತ್ತುವರುಷಗಳುಕೂಡಆಗಿರಲಿಲ್ಲಅವರಿಗೆ ಹೆಂಡತಿ ಇಬ್ಬರು ಮಕ್ಕಳು ಇರುವರು. ಅವರ ಕಡೆ ಕೂಸು ಅವರು ಕೊಲೆ ಮಾಡಲ್ಪಟ್ಟು ನಾಲ್ಕು ದಿನಗಳ ನಂತರ ಜನನವಾಯಿತು. ಕುರುಡರ ರಾಜಕಾರಣದ ದುಷ್ಪರಿಣಾಮವಿದು! ದುಷ್ಟತನ ಮತ್ತು ರೊಚ್ಚನ್ನು ನಿಷೇಧಿಸಿದ್ದಕ್ಕಾಗಿ ಸ್ವಜಾತಿಯವರಿಂದಲೆ ಅವರು ಕೊಲ್ಲಲ್ಪಟ್ಟದ್ದು ಶುಭ ಲಕ್ಷಣವು. ಕೊನೆಯಲ್ಲಿ ಮಿತ್ರತ್ವದ ಸಂಬಂಧ ಬೆಳೆಯುವಾಗ— ಮುಂಜೆಲ್ಲ ಮಾಯವಾದನಂತರ ಈ ಬಗೆಯ ಸ್ನೇಹ ಸಂಬಂಧ ಸ್ಥಾಪಿತವಾಗಲೇಬೇಕಾಗುವದು—ಇಂಥ ಹುತಾತ್ಮರೇ ಏಕೀಕೃತ ರಾಷ್ಟ್ರದ ಕೋನಶಿಲೆಯನ್ನು ಕೂಡಿಸಿದವರೆಂದು ಕೃತಜ್ಞತಾಪೂರ್ವಕವಾಗಿ ಸ್ಮರಿಸಲ್ಪಡುವರೆಂಬಲ್ಲಿ ಸಂದೇಹವಿಲ್ಲ. ಖಾನಸಾಹೇಬರ ಆಪ್ತಬಂಧುಗಳಿಗೆ ನನ್ನ ಹೃತ್ಪೂರ್ವಕವಾದ ಸಹಾನುಭೂತಿಯನ್ನು ಈ ಮೂಲಕ ವ್ಯಕ್ತಪಡಿಸುತ್ತೇನೆ. ಇಂಥ ಶೂರ ಹುತಾತ್ಮರ ಸಂಬಂಧಿಕರಾದ ಪ್ರಶಂಸೆಗೆ ಅವರು ಪಾತ್ರರಾದುದಕ್ಕಾಗಿ ನಾನವರನ್ನು ಅಭಿನಂದಿಸುತ್ತೇನೆ. ಅವರನ್ನು ಕಳೆದುಕೊಂಡದ್ದು ಅವರ ಬಂಧುಗಳಿಗೂ ರಾಷ್ಟ್ರಕ್ಕೂ ಅತ್ಯಂತ ಹಾನಿಕರವಾದುದು. ಆದರೆ ಅವರು ಹುತಾತ್ಮರಾದುದೇನು ವಿಷಾದಕರವಲ್ಲ.

ವರ್ಧಾ ೧೩–೯–೪೮ —ಕಿ. ಘ. ಮ.

ಹೈದರಾಬಾದ ಶರಣಾಗತಿ

(೬ ನೇ ಪುಟದಿಂದ)

ಇರಬಹುದೆಂದು ಬಳ್ಳಿ ಕಾರಣವೆಂದು ತಿಳಿದಿತು. ಅಸಂಖ್ಯಾತ ರಜಾಕಾರರು ಶರಣು ಬಂದರು. ಉತ್ತರಕ್ಕೆ ಪರಭಣಿ ಪ್ರದೇಶದಲ್ಲಿ ಬಾಲಘಾಟ ಎಂಬ ಪರ್ವತಮಯ ಭಾಗವನ್ನು ನಮ್ಮ ಸೇನೆ ವಶಪಡಿಸಿಕೊಂಡಿತು. ಅಸಂಖ್ಯಾತ ಮಶಿನ್‌ಗನ್ನುಗಳು ರಾಯಫಲಗಳೂ ದೊರೆತವು. ಈಶಾನ್ಯದಲ್ಲಿ ಆದಿಲಾಬಾದ ಜಿಲ್ಲೆಯ ಸೋಂಪೊ ಎಂಬ ಸ್ಥಳವನ್ನು ಆಕ್ರಮಿಸಿದರು. ನಿನ್ನೆರಾತ್ರಿ ಸೂರ್ಯಪೇಟೆಯಿಂದ ೧೪ಮೈಲಿನ ಮೇಲಿದ್ದ ನಕ್ರೇಕಲ ಎಂಬ ಸ್ಥಳವನ್ನು ಆಕ್ರಮಿಸಿದ್ದರು. ಇಲ್ಲಿಂದ ಸಿಕಂದರಾಬಾದದತ್ತ ಮುನ್ನುಗ್ಗುತ್ತಿದ್ದಾರೆ.

ಔರಂಗಾಬಾದವನ್ನು ಆಕ್ರಮಿಸುತ್ತಲೇ ಎಲ್ಲರ ಬಳಿಗಿದ್ದ ಶಸ್ತ್ರಾಸ್ತ್ರ ತಂದೊಪ್ಪಿಸಬೇಕೆಂದು ನಮ್ಮ ಸೈನ್ಯಾಧಿಕಾರಿ ಹೇಳುತ್ತಲೇ ಹಾಗೆ ಎಲ್ಲರೂ ಶಸ್ತ್ರತ್ಯಾಗಮಾಡಿದರು. ಔರಂಗಾಬಾದದಲ್ಲಿ ಒಂದು ಶಸ್ತ್ರಾಸ್ತ್ರಕಾರಖಾನೆಯನ್ನು ವಶಪಡಿಸಿಕೊಂಡರು. ರಾಜಕುಮಾರ ಆಝಮ್‌ಜಾಹನ ಅರಮನೆಯಲ್ಲಿ ಈ ಕಾರಖಾನೆಯಿತ್ತು. ಇಲ್ಲಿ ಬಹಳ ರಭಸದಿಂದ ಹಗಲಿರುಳೂ ಶಸ್ತ್ರಾಸ್ತ್ರಗಳು ದೊಡ್ಡ ಪ್ರಮಾಣದಲ್ಲಿ ಸಿದ್ಧವಾಗುತ್ತಿದ್ದವು.

ಈ ದಿನ ಸಂಜೆಗೆ ಹಿಂದಿ ಸೈನ್ಯವು ಹೈದರಾಬಾದದ ಮಹಾದ್ವಾರವನ್ನು ಮುಟ್ಟಿದಾಗ ನಿಜಾಮರು ಉಪಾಯಗಾಣದೆ ಶರಣಾಗತರಾದರು. ಲಾಯಕಅಲಿ ಮಂತ್ರಿಮಂಡಲ ರಾಜೀನಾಮೆ ಕೊಟ್ಟಿತು. ಹಿಂದೀ ಸೈನಿಕರ ಈ ಅಪ್ರತಿಮ ವಿಜಯಕ್ಕೆ ಅವರನ್ನು ಎಷ್ಟು ಅಭಿನಂದಿಸಿದರೂ ಕಡಮೆಯೇ. "ಜಯಹಿಂದ".

ಗೆದ್ದಲ್ಲೆಲ್ಲ ಹೊಸ ಆಡಳಿತ

ನಿಜಾಮರ ಪ್ರದೇಶಗಳನ್ನು ಗೆಲ್ಲುತ್ತ ಹೊರಟಂತೆ ಗೆದ್ದಲ್ಲೆಲ್ಲ ಜೊತೆ ಜೊತೆಗೆ ನಾಗರಿಕ ಆಡಳಿತದ ಯೋಜನೆಯನ್ನೂ ಹಿಂದ ಸರಕಾರವು ಮೊದಲೇ ಯೋಜಿಸಿತ್ತು.

ನಾಸಿಕದ ಕಲೆಕ್ಟರರಾದ ಶ್ರೀ ಎಲ್. ಜಿ. ರಾಜವಾಡೆ ಆಯ. ಸಿ. ಎಸ್. ಇವರನ್ನು ಔರಂಗಾಬಾದದ ಕಲೆಕ್ಟರರನ್ನಾಗಿ ನೇಮಿಸಲಾಗಿದೆಯೆಂದು ತಿಳಿಯುತ್ತದೆ. ಇದರಂತೆ ಮದ್ರಾಸಕ್ಕೆ ಹೊಂದಿದ ೮ ಜಿಲ್ಲೆಗಳ ಅಧಿಕಾರಿಗಳನ್ನೂ ಈಗಾಗಲೇ ನಿರ್ದಿಷ್ಟಪಡಿಸಲಾಗಿತ್ತು.

ದಂಡಯಾತ್ರೆಯ ಅಧಿಪತಿಗಳು

ಮುಖ್ಯ ಸೇನಾಪತಿ:- ಮಹಾರಾಜ ಶ್ರೀ ರಾಜೇಂದ್ರ ಸಿಂಹಜಿ.

ದಲಪತಿಗಳು:— ಸೊಲ್ಲಾಪುರ ರಂಗಕ್ಕೆ ಮೇ. ಜ. ಚೌಧರಿ. ವಿಜಯವಾಡ ರಂಗಕ್ಕೆ ಮೇ. ಜ. ರುದ್ರ. ಮುಂಬಯಿ ರಂಗಕ್ಕೆ (ಸೊಲ್ಲಾಪುರದ ಉತ್ತರ) ಮೇ. ಜ ಬ್ರಾರ ಮಧ್ಯಪ್ರಾಂತ ರಂಗಕ್ಕೆ ಬಿ. ಶಿವದತ್ತಸಿಂಗ

ವಿಮಾನ ದಲಪತಿ:— ಏರ ವ್ಹಾಯಿಸ ಮಾರ್ಶಲ ಮುಕರ್ಜಿ.

ಶಾಂತಿಯಾಚನೆ

ತಾ. ೧೭ ಶುಕ್ರವಾರ ನಸುಕು ೩–೪೦ ಕ್ಕೆ ಹೈದರಾಬಾದ ಮುಖ್ಯ ಮಂತ್ರಿಯಾದ ಮೀರಲಾಯಕ ಅಲಿಯವರು ಭಾರತದ ಮುಖ್ಯಮಂತ್ರಿ ಪಂಡಿತ ಜವಾಹರಲಾಲರಿಗೆ ಶಾಂತಿ ಭಿಕ್ಷೆ ಬೇಡಿ ಕೂಡಲೇ ಯುದ್ಧ ನಿಲ್ಲಿಸಿ ಉದಾರ ಒಪ್ಪಂದ ಮಾಡಿಕೊಳ್ಳಬೇಕೆಂದು ವಿಜ್ಞಾಪಿಸಿಕೊಂಡ ಸುದ್ದಿ ಬಂದಿತು.

ಮುನಸಿಯವರ ಸ್ಥಾನಬದ್ಧತೆ

ಹೈದರಾಬಾದದಲ್ಲಿ ಸೈನಿಕ ಕ್ರಮವು ಪ್ರಾರಂಭವಾಗುತ್ತಲೇ ಭಾರತದ ಏಜೆಂಟ ಜನರಲರಾದ ಶ್ರೀ. ಕೆ. ಎಂ. ಮುನಸಿಯವರನ್ನು ಹೈದರಾಬಾದದಲ್ಲಿ ಸ್ಥಾನಬದ್ಧತೆಯಲ್ಲಿರಿಸಲಾಯ್ತು. ಅವರ ಅಂಗರಕ್ಷಕರ ಶಸ್ತ್ರಾಸ್ತ್ರಗಳನ್ನು ಕಸಿದುಕೊಂಡು ಮುನಸಿಯವರ ಪರಿವಾರವನ್ನೆಲ್ಲ ಬಂಧಿಸಿದರು. ದಿಲ್ಲಿಗೆ ಈ ವಾರ್ತೆ ತಲಪುತ್ತಲೇ ಹಿಂದುಸ್ಥಾನ ಸರಕಾರವೂ ಹೈದರಾಬಾದದ ಏಜೆಂಟ ಜನರಲರಾದ ಶ್ರೀ. ಎಸ್. ಎಂ. ರಜವಿಯವರನ್ನು ಅವರಿದ್ದ ಅರಮನೆಯಲ್ಲಿಯೇ ಸ್ಥಾನಬದ್ಧತೆಯಲ್ಲಿಇರಿಸಿತು. ಅವರ ಅರಮನೆಯ ಕಾವಲಿಗೆ ಈಗ ಹಿಂದಿಸೈನಿಕರಿದ್ದಾರೆ. ಸ್ಥಾನಬದ್ಧರಾಗಿದ್ದರೂ ರಜವಿಯವರುದಿಲ್ಲಿಯಲ್ಲಿಬೇಕಾದಲ್ಲಿತಮ್ಮ ಮೋಟಾರಿನಲ್ಲಿ ತಿರುಗುವ ಸೌಕರ್ಯ ಕೊಡಲಾಗಿವೆ. ಆದರೆ ಹೈದರಾಬಾದದಲ್ಲಿ ಶ್ರೀ. ಮುನಸಿಯವರಿಗೆ ಜೀವದ ಹೆದರಿಕೆಯನ್ನೂ ರಜಾಕಾರರು ಹಾಕುತ್ತಿದ್ದರೆಂದು ತಿಳಿಯುತ್ತದೆ.

ಹೈದರಾಬಾದದ ಮೊರೆ

ನಿಜಾಮರು ದಿಕ್ಕೆಟ್ಟು ಸಿಕ್ಕವರಿಗೆ ತಮ್ಮನ್ನು ಬದುಕಿಸಬೇಕೆಂದು ಅಂಗಲಾಚಿ ಬೇಡುತ್ತಿದ್ದಾರೆ. ಅಮೇರಿಕೆ ಅಧ್ಯಕ್ಷ ಟ್ರೂಮನ್ನರಿಗೆ ಮೊರೆಯಿಟ್ಟರು, ಅರಬ ರಾಷ್ಟ್ರಗಳಿಗೆ ಬೇಡಿಕೊಂಡರು. ಅವರುೂ ಈ ಇಲ್ಲದ ತೊಡಕಿನ ಉಸಾಬರಿ ಬೇಡ. ನಿಮ್ಮ ಪಾಡು ನಿಮಗೆ ಎಂದು ನಿಜಾಮರಿಗೆ ತಿಳಿಸಿಬಿಟ್ಟರು. ಈ ಸಂಯುಕ್ತ ರಾಷ್ಟ್ರ ಸಂಘಕ್ಕೆ ಮೊರೆಯಿಟ್ಟದ್ದು ಸೋಮವಾರ ತಾ ೨೦ ಕ್ಕೆ ಅದರ ಯುಕ್ತಾಯುಕ್ತತೆಯನ್ನು ವಿಚಾರಿಸಲಾಗುವದೆಂದು ತಾ. ೧೬ ಕ್ಕೆ ಕೂಡಿದ ಸಂ. ರಾ. ಸಂಘದ ಸಭೆ ನಿರ್ಣಯಿಸಿತು. ಸಂಯುಕ್ತ ರಾ. ಸಂಘಕ್ಕೆ ಹೈದರಾಬಾದ ಪ್ರಕರಣ ಮಂಡಿಸಲು ಇಬ್ಬರು ಹಿಂದುಗಳೂ ಹೋಗತಕ್ಕದ್ದೆಂದು ಮೊದಲು ನಿಜಾಮರು ನಿರ್ಣಯಿಸಿದ್ದರು. ಆದರೆ ಆಯತ್ತ ಹೊತ್ತಿನಲ್ಲಿಅವರಿಗೆ ಈ ಸುದ್ದಿಯನ್ನು ಸಹ ತಿಳಿಸದೆ ಕಳ್ಳತನದಿಂದ ಸಂಯುಕ್ತರಾಷ್ಟ್ರ ಸಂಘಕ್ಕೆ ಪ್ರತಿನಿಧಿಗಳನ್ನು ಕಳಿಸಲಾಯ್ತು ಎಂಬದು ವೈಶಿಷ್ಟ್ಯಪೂರ್ಣ ಸಂಗತಿಯಾಗಿದೆ.

ಇನ್ನುಳಿದ ಸಂಗತಿಗಳು

ಹೈದರಾಬಾದದೊಡನೆ ಈಗ ತಂತೀ ಸಂಪರ್ಕ ತಪ್ಪಿದೆ. ಹೈದರಾಬಾದದಲ್ಲಿ ಹಿಂದುಸ್ಥಾನದ ಅಂಚೆ ಖಾತೆಯ ಎಲ್ಲ ಅಧಿಕಾರಿಗಳೂ ಕಾರಕೂನರು ಬಂಧಿತರಾಗಿದ್ದಾರೆ.

ಹಿಂದುಸ್ಥಾನದ ಗವರ್ನರ ಜನರಲರಾದ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್ಯರು ಮುಂಜಾಗ್ರತೆ ವಹಿಸಿದೇಶದಲ್ಲೆಲ್ಲ ಗಂಭೀರ ಪರಿಸ್ಥಿತಿಯನ್ನು ಸಾರಿ ಶಾಂತಿ ಸುವ್ಯವಸ್ಥೆ ಕಾಯಲು ಸರಕಾರಕ್ಕೆ ವಿಶೇಷ ಅಧಿಕಾರ ಕೊಟ್ಟಿದ್ದಾರೆ ಅರಾಷ್ಟ್ರೀಯವಾಗಿ ವರ್ತಿಸಿದವರನ್ನೆಲ್ಲ ಇದರನ್ವಯ ಗುಂಡಿಕ್ಕಿ ಕೊಲ್ಲಲಾಗುವದು.

ತಾ. ೧೫ ರಂದು ಹಿಂದುಸ್ಥಾನದ ಮುಖ್ಯ ಮಂತ್ರಿಗಳು ಮುಂಬಯಿಯಲ್ಲಿ ೩ ಲಕ್ಷ ಜನ ಸಮುದಾಯದ ಮುಂದೆ ಮಾತನಾಡುತ್ತ ಹೈದರಾಬಾದ ನಿಜಾಮರು ತಳೆದ ಧೋರಣೆಗೆ ವಿಷಾದವ್ಯಕ್ತಪಡಿಸಿ ಅನಿವಾರ್ಯವಾಗಿ ಸೈನಿಕ ಕ್ರಮ ಕೈಕೊಳ್ಳಲಾಯಿತೆಂದೂ ಈ ದಂಡಯಾತ್ರೆಯು ಇನ್ನು ೫—೬ ದಿನಗಳಲ್ಲಿಯೇ ಜಯಪ್ರದವಾಗಿ ಮುಕ್ತಾಯವಾಗಬಹುದೆಂದೂ ಹೇಳಿ ಈ ಶೀಘ್ರ ವಿಜಯಕ್ಕೆ ಸೈನ್ಯ ಬಲಕ್ಕಿಂತ ಅನುಕೂಲ ಜನಾಭಿಪ್ರಾಯ ಬಲವೇ ಕಾರಣವೆಂದು ಹೇಳಿ ಭಾರತದ ಮತ್ತೂ ಹೈದರಾಬಾದದ ಹಿಂದು ಮುಸಲ್ಮಾನರನ್ನು ಇದಕ್ಕಾಗಿ ಅಭಿನಂದಿಸಿದರು. ತಾ. ೧೬ ರಂದು ಹಿಂದುಸ್ಥಾನದ ಸಂಸ್ಥಾನ ಮಂತ್ರಿಗಳೂ ಉಪ ಮುಖ್ಯ ಮಂತ್ರಿಗಳೂ ಆದ ಸರದಾರ ವಲ್ಲಭಭಾಯಿ ಪಟೇಲರೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿ ಕಾರ್ಯಕ್ಕಾಗಿ ಸೈನಿಕರ ಬೆನ್ನು ತಟ್ಟಿ ಸಹಕಾರಕ್ಕಾಗಿ ಹಿಂದು ಮುಸಲ್ಮಾನರನ್ನೆಲ್ಲ ಅಭಿನಂದಿಸಿದ್ದಾರೆ.

ರೇಲ್ವೆ ನೌಕರರಲ್ಲಿ ವಿಜ್ಞಾಪನೆ

ಎಂ. ಎಸ್. ಎಂ. ರೇಲ್ವೆ ಕೆಲಸಗಾರ ಸಂಘದ ಹುಬ್ಬಳ್ಳಿ ಶಾಖೆಯ ಕಾರ್ಯದರ್ಶಿ ಶ್ರೀ ನಾರಾಯಣನ್‌ರು ಒಂದು ಪ್ರಕಟನೆ ಹೊರಡಿಸಿ, "ಪೀಡಿತ ಹೈದರಾಬಾದದ ವಿಮೋಚನೆಗೆ ಹಿಂದಿ ಸೈನ್ಯವು ಹೊರಟದ್ದು ಈ ಸಂದರ್ಭದಲ್ಲಿ ರೇಲ್ವೆ ಕೆಲಸಗಾರರ ಮೇಲೆ ದೊಡ್ಡ ಹೊಣೆಯಿದೆ. ಪ್ರತಿಯೊಬ್ಬ ರೇಲ್ವೆ ಕೆಲಸಗಾರನೂ ಅವನು ಗ್ಯಾಂಗಮನ್, ಇಂಜಿನಿಯರ, ಪಾಯಿಂಟ್ಸ ಮನ್ ಅಥವಾ ಡ್ರಾಯವ್ಹರ ಯಾರೇ ಇರಲಿ ಈ ವಿಮೋಚನಾ ಸೈನ್ಯದ ಮುಖ್ಯ ಅಂಗಗಳಿದ್ದಂತೆಯೇ. ಆದ್ದರಿಂದ ರೇಲ್ವೆ ನೌಕರರಾರೂ ಸಂಕುಚಿತರಾಗಿ ದೇಶಸೇವೆಯ ಈ ಸಂದರ್ಭವನ್ನು ಹಾಗೇ ಹೋಗಗೊಡಬಾರದು" ಎಂದು ಮೊದಲಾಗಿ ಹೇಳಿದ್ದಾರೆ.

ಮುಂಬಯಿ ಶಾಸನ ಸಭೆಯ ಸದಸ್ಯರಾದ ಶ್ರೀ ರಾಮರಾವ ಹುಕ್ಕೇರಿಕರರು ಒಂದು ಪ್ರಕಟನೆಯಲ್ಲಿ, ಹಿಂದಿ ಸೈನಿಕರ ದಂಡಯಾತ್ರೆಯ ಕಾಲಕ್ಕೆ ನಾಗರಿಕರಲ್ಲರೂ ಸಿವಿಲ್ ಮತ್ತು ಸೈನ್ಯಾಧಿಕಾರಿಗಳೊಡನೆ ಸಂಪೂರ್ಣ ಸಹಕರಿಸಿ ಶಾಂತಿ ಸುವ್ಯವಸ್ಥೆಯನ್ನು ಕಾಯಲು ನೆರವಾಗಬೇಕೆಂದೂ ಪ್ರಸಂಗ ಬಂದರೆ ಸ್ವಾರ್ಥತ್ಯಾಗಕ್ಕೂ ಸಿದ್ಧರಾಗಬೇಕೆಂದೂ ಬೇಡಿಕೊಂಡಿದ್ದಾರೆ.

ಚಲಾವಣೆಯ ಸಮಸ್ಯೆ

(೯ ನೆಯ ಪುಟದಿಂದ)

ರಿಯೂ ಈ ಹಾದಿಯಲ್ಲಿ ಅಡಿ ಇಡುತ್ತಾನೆ ಅಷ್ಟೇ.

ಅನೇಕ ದೇಶಗಳು ಈ ಧೋರಣವನ್ನೇ ಅನುಸರಿಸಿ ತಮ್ಮ ನಾಡಿನ ಋಣಭಾರವನ್ನು ವಿಪರೀತ ಹೆಚ್ಚಿಸುತ್ತ ಹೋಗಿವೆ. ಹೀಗೆ ಮಾಡಿ ಒಂದಾದರೂ ದೇಶವು ತನ್ನ ನಾಡಿನ ಜನಕ್ಕೆ ಸುಖ ಶಾಂತಿಯನ್ನು ತಂದುದಿಲ್ಲ; ಇನ್ನು ಜಗತ್ತಿನ ಸುಖ ಶಾಂತಿಯನ್ನು ಹೆಚ್ಚಿಸುವ ಮಾತಂತೂ ದೂರವೇ. ಇದರಿಂದ ಜಗದ ಯುದ್ಧಬುದ್ಧಿಯೂ ಪ್ರಭುತ್ವಲಾಲಸೆಯೂ ಮಾತ್ರ ಬೆಳೆದು ನಿಂತವು. ದುಡ್ಡೆಂಬುದು ಜಗತ್ತಿನಲ್ಲಿ ಅತ್ಯಂತ ಅನುತ್ಪಾದಕ ಪದಾರ್ಥವಾಗಿದೆ. ಹೀಗಿದ್ದರೂ ದುಡ್ಡೇ ಸರ್ವ ಸಂಪತ್ತಿನ ಉಗಮಸ್ಥಾನವೆಂದು ಮೂಢ ನಂಬಿಗೆ ಬೇರೂರಿ ಹೋಗಿದೆ.

ಗಜವೆಂಬುದು ಉದ್ದವನ್ನು ಅಳೆವ ಒಂದು ಸಂಕೇತ. ೫೦೦೦ ಗಜ ಬಟ್ಟೆಯೆಂದರೆ ಅಷ್ಟು ಮೊತ್ತದ ವಸ್ತ್ರವಲ್ಲದೆ ಅಷ್ಟು ಗಜದಂಡಗಳಲ್ಲ. ೫೦೦೦ ಗಜ ಬಟ್ಟೆ ಮಾರಬೇಕೆಂಬ ವ್ಯಾಪಾರಿಯು ೫೦೦೦ ಗಜದಂಡಗಳನ್ನು ತಂದಿಟ್ಟುಕೊಳ್ಳುತ್ತಾನೆಯೆ? ಆದರೆ ಚಲಾವಣೆಯ ವಿಚಿತ್ರವಾದ ಅಂಧ ಶ್ರದ್ಧೆಯ ಮೂಲಕ ೫೦೦೦ ರೂ. ಬೆಲೆ ಬಾಳುವ ಒಂದು ಮನೆ ಅಥವಾ ಹೊಲಕ್ಕಿಂತ ೫೦೦೦ ಕಾಗದ ತುಂಡುಗಳು ಅಥವಾ ರೂಪಾಯಿಗಳೆಂದು ಹೇಳಲಾಗುವ ಅಷ್ಟು ನಾಣ್ಯಗಳು ನಮಗೆ ಹೆಚ್ಚು ಪ್ರಯೋಜನಕಾರಿಯಾಗಿ ತೋರುತಿವೆ.

ಅಳತೆ ಪ್ರಮಾಣ ಎಂಬುದು ಉಳಿಯಲಿ. ಆದರೆ ಅಳತೆಯು ಅಳತೆಯಾಗಿಯೇ ಉಳಿಯಬೇಕಲ್ಲದೆ ಸಂಪತ್ತಿನ ಸಾರವೇ ಅದಾಗಿರಬಾರದು. ಅದು ಅನುತ್ಪಾದಕ ರುಕ್ಷ ವಸ್ತುವಾಗಿದ್ದು ಈ ಸಂಗತಿಯನ್ನು ಕೃತ್ರಿಮವಾಗಿ ಮರೆಮಾಚಕೂಡದು. ಹಣಕ್ಕಾಗಿ ಕೊಡುವ ಬಡ್ಡಿಯೂ ಲಾಭಾಂಶವೂ ಅದರ ಅನುತ್ಪಾದಕ ರುಕ್ಷತೆಯನ್ನು ಕೃತಕವಾಗಿ ಮರೆಯಿಸುತ್ತವೆ. ಇದು ನೈತಿಕವೂ ಅಲ್ಲ ಉಳಿತಾಯದ್ದೂ ಅಲ್ಲ.

ವರ್ಧಾ ೮–೯–೪೮ } ಕಿಶೋರಲಾಲ ಮಶ್ರುವಾಲಾ

ನಿಜಾಮರ ಹೊಸ ಮಂತ್ರಿಮಂಡಳ?

ನಿಜಾಮರು ತಮ್ಮ ಮಂತ್ರಿಮಂಡಲದ ರಾಜೀನಾಮೆ ಸ್ವೀಕರಿಸಿ ಶನಿವಾರ ೧೮–೯–೪೮ ರಂದು ಹೊಸ ಮಂತ್ರಿಮಂಡಳ ಸ್ಥಾಪಿಸುವರೆಂದು ಮೀರ ಲಾಯಕ ಅಲ್ಲಿ ಅವರೇ ಹೈದ್ರಾಬಾದ ಆಕಾಶವಾಣಿಯಿಂದ ಬಿತ್ತರಿಸಿದರು.

ರೂಪರಂಗ

ಚಲಚ್ಚಿತ್ರದಲ್ಲಿ ಕ್ರೌರ್ಯದ ನೋಟ

ಚಲಚ್ಚಿತ್ರದಲ್ಲಿ ಕಾಮಸೂತ್ರದಂತೆ ಕ್ರೌರ್ಯ ಸೂತ್ರವೂ ಒಂದು ಭಯಂಕರ ವಿನಾಶಕ ಅಸ್ತ್ರವಾಗಿದೆ. ಅಜ್ಞಾನಿಗಳೂ ಮಕ್ಕಳೂ ಇಂಥ Fighting Pictures–ಯುದ್ಧ ಪ್ರದರ್ಶಕ ಚಿತ್ರಗಳನ್ನು ಕಂಡು ಆನಂದಿಸುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಲು ಸಮಾಜ ಅಥವಾ ಸರಕಾರ ಅವಕಾಶಕೊಟ್ಟರೆ ಆ ಅಜ್ಞಾನಿಗಳಲ್ಲಿ ಮತ್ತು ಮಕ್ಕಳಲ್ಲಿ ರಾಕ್ಷಸಬುದ್ಧಿ ಉದಯವಾಗದಿರದು. ಹಾಗಾದ ಮೇಲೆ ತಮ್ಮ ಹೊಣೆಯನ್ನು ತಿಳಿಯದೆ ಅವರನ್ನು ಕೇಡಿಗಳೆಂದು ದೂರುವುದು, ದ್ವೇಷಿಸುವುದು ಎಂದಾದರೂ ನ್ಯಾಯವೆನಿಸೀತೇ ?

ಅಮೇರಿಕದ ಡಾಕ್ಟರ್ ಫ್ರೆಡ್ರಿಕ್ ವರ್ಥ್ಯಾಮರು ಇದೇ ಮಾತನ್ನು ಅಲ್ಲಿಯ Comic Books–ತಮಾಷೆಯ ಪುಸ್ತಕಗಳ ಬಗ್ಗೆ ಹೇಳಿದ್ದಾರೆ. ಆ ಪುಸ್ತಕಗಳಲ್ಲಿ ಹುಡುಗ ಹುಡುಗಿಯರಲ್ಲಿ ಮತ್ಸರ ಹುಟ್ಟುವಂತೆ ಹುಡುಗರಲ್ಲಿ ಹೊಡೆದಾಡುವ ಬುದ್ಧಿ ಉತ್ಪನ್ನವಾಗುವಂತೆ ನಾನಾ ವಿಧದ ಕಥೆ, ಚಿತ್ರ ಇತ್ಯಾದಿಗಳನ್ನು ಕೊಟ್ಟಿರುತ್ತಾರಂತೆ. ಅಲ್ಲದೆ ಪ್ರಾಣಿಗಳ ಹಿಂಸೆಯನ್ನು ಕೂಡ ತಮಾಷೆ ಎಂದು ತೋರುವಂತೆ ಚಿತ್ರಿಸಿರುವರಂತೆ! ಇದರಿಂದ ಹುಡುಗ ಹುಡುಗಿಯರು ತಮಗೇ ಗೊತ್ತಿಲ್ಲದಂತೆ ಮೆಲ್ಲಗೆ ಬುದ್ಧಿಪರಿವರ್ತನೆ ಹೊಂದಿ ಗುಪ್ತ ಅಥವಾ ಪ್ರಕಟವಾದ ಕೇಡಿಗಳಾಗುತ್ತ ಹೋಗುವುದು ಅನೇಕ ಕಡೆ ಕಂಡು ಬಂದುದರಿಂದ ಆ ನಾಡಿನ ೩ ನಗರಗಳು ಆಗಲೇ ಅಂಥ ಪುಸ್ತಕಗಳನ್ನು ಮಾರುವುದನ್ನು ಬಹಿಷ್ಕರಿಸಿವೆ ಎಂದು ಡಾಕ್ಟರರು ಬರೆದಿರುತ್ತಾರೆ.

ತಾಯ್ತಂದೆಯರು ಮಕ್ಕಳಲ್ಲಿ ಭೇದಭಾವ, ತಾತ್ಸಾರಭಾವ, ಕರ್ತವ್ಯಜ್ಞಾನಹೀನತೆಗಳನ್ನು ತಾಳಿರುವುದೇ ಅವರ ದುರ್ವಿದ್ಯಾಭ್ಯಾಸಕ್ಕೆ ಕಾರಣ ಎನ್ನುತ್ತಾರೆ ಮೇಲಿನ ವಿದ್ವಾಂಸರು. ಕೆಟ್ಟ ಪುಸ್ತಕ, ಚಿತ್ರ, [illegible]ಸಂಪರ್ಕ, ಸ[illegible]ಲನ ಇವುಗಳಿಂದ ಮಕ್ಕಳನ್ನು ದೂರವಿ[illegible]ತಾಯ್ತಂದೆಯರ ಆದ್ಯಕರ್ತವ್ಯವೆಂದು ತಿಳಿ[illegible] ಹಿಂದುಸ್ತಾನದ ಪ್ರಜೆಗಳಲ್ಲಿ [illegible] ಬೆಳೆಯದೆ ವಂಚನಾ[illegible] ಬೆಳೆಯುವಂತಾಗಲು ಕಾರಣ [illegible] ಚಿಕ್ಕಮಕ್ಕಳಿಗೇನು ತಿಳಿಯುತ್ತದೆ? ಅವಕ್ಕೇನು ಹೇಳುವದು, ದೊಡ್ಡವರಾದ ಹಾಗೆ ಎಲ್ಲ ತಾನೇ ತಿಳಿಯುತ್ತದೆ-ಎಂಬ ಗೃಹಸ್ಥರೂ ಗೃಹಿಣಿಯರೂ ನಮ್ಮ ನಾಡಿನಲ್ಲಿ ಹೆಚ್ಚಾಗಿರುವುದು ಶೋಚನೀಯ. ಶಿಕ್ಷಣದಲ್ಲಿ ಶಿಕ್ಷಕರಿಗಿಂತ ಮಾತಾಪಿತೃಗಳ ಹೊಣೆಯೇ ಹೆಚ್ಚೆಂಬುದನ್ನು ತರುಣ ತರುಣಿಯರು ಅರಿತ ಹೊರತು ಗಾಂಧಿಯವರು ಬೋಧಿಸಿದ ಯಾವ ಸದುಪದೇಶವನ್ನೂ ಮಕ್ಕಳು ದೊಡ್ಡವರಾದ ಮೇಲೆ ಬುದ್ಧಿ ಬೆಳೆದರೂ ಅರಗಿಸಿಕೊಳ್ಳುವ ಹೃದಯಬಲವನ್ನು ಪಡೆಯಲಾರರು.

—ಸುಭದ್ರೆ.

ಹಾಲಿವುಡ್ಡಿನ ಅನೀತಿ

ಇಡೀ ಜಗತ್ತಿನಲ್ಲಿ ರಸಿಕತೆಯ ಆಭಾಸಕ್ಕೆ ಮೊದಲು ಪ್ಯಾರಿಸ್ ಕೇಂದ್ರವಾಗಿತ್ತು. ಈಗ ಕಲಾಭಾಸವಾದ ಸಿನೆಮದ ಕೇಂದ್ರವಾದ ಹಾಲಿವುಡ್ಡಿನಲ್ಲಿ ನೀತಿಯು ನೆಲೆಗಟ್ಟಿ ಅಂಶವನ್ನು ಕುಮಾರಿ ಜೆ. ಪ್ರೆಸ್ಸನ್ ಎಂಬ ಕಾದಂಬರಿಕಾರ್ತಿ ಬರೆಯುತ್ತಾಳೆ.

ಈ ಬರಹಗಾರ್ತಿಯ ಪ್ರಕಾರ ಅತ್ಯಂತ ನಾಸ್ತಿಕ ಹುಡುಗಿ ಕೂಡ ನಾಚುವಷ್ಟು ಅನೀತಿಕರವಾಗಿ ಹಾಲಿವುಡ್ಡಿನ ತಾರೆಯರು ನಡೆದುಕೊಳ್ಳುತ್ತಾರೆ. ಅವರು ಮನಸ್ವಿಯಾಗಿ ಕುಡಿದು ಅವರ ಅತ್ಯಂತ ಆಪ್ತ ಸ್ನೇಹಿತೆಯರ ಗಂಡಂದಿರನ್ನು ಕೂಡ ಶೀಲಭ್ರಂಶಗೊಳಿಸುವ ಹವ್ಯಾಸಕ್ಕೆ ಬಿದ್ದು ಇಡೀ ಜನತೆಯಲ್ಲೇ ವ್ಯಭಿಚಾರವನ್ನು ಪ್ರಚೋದಿಸಿ ನಾಗರಿಕತೆಗೆ ಕಂಟಕ ಪ್ರಾಯರಾಗಿದ್ದಾರೆ. ಇದನ್ನು ಕಂಡು ಹೇಸಿ ಕುಮಾರಿ ಪ್ರೆಸ್ಸನ್ನಳು “ ನಿಜವಾಗಿ ಹೆಂಗಸು ಸುಖವಾಗಿರಬೇಕಾದರೆ ತನಗೆ ಪ್ರಿಯನಾದ ಒಬ್ಬನನ್ನು ಮದುವೆಯಾಗಿ ಮನೆಮಾಡಿಕೊಂಡು ೩ ಮಕ್ಕಳನ್ನು ಪಡೆಯುವುದೇ ” ಎಂದು ತನ್ನ ವಿವೇಕವಾಣಿಯಿಂದ ಸಾರುತ್ತಾಳೆ.

ಪರಿಶೀಲಕರ ಸಲಹೆ

ಹಿತಕರವಾದ ರಾಷ್ಟ್ರೀಯ ಜೀವನವನ್ನು ರೂಪಿಸುವುದರಲ್ಲಿ ಸಿನೆಮ ಯೋಗ್ಯ ಪಾತ್ರವಹಿಸುವಂತೆ ನೋಡಿಕೊಳ್ಳುವುದರ ಸಲುವಾಗಿ ಮುಂಬಯಿಯ ಚಿತ್ರಪರಿಶೀಲನ ಸಮಿತಿಯು ಸಾಮಾಜಿಕರಿಗೆ ಅನಾರೋಗ್ಯಕರವಾದ ಮನೋರಂಜನೆ ದೊರಕದಂತೆ ಮಾಡಲು ವಿವರಪೂರ್ಣವಾದ ಸಲಹೆಗಳನ್ನು ಕೊಟ್ಟಿದೆ. ಈ ಸಲಹೆಗಳನ್ನು ಹಿಂದೀ ಚಲಚ್ಚಿತ್ರ ನಿರ್ಮಾಪಕರ ಸಂಘದೊಡನೆ ಚರ್ಚಿಸಿದ ನಂತರ ತಯಾರಿಸಿ, ಸರಕಾರದ ಒಪ್ಪಿಗೆಯನ್ನು ಪಡೆಯಲಾಗಿದೆ. ಅವುಗಳಲ್ಲಿ ಕೆಲವು ಸಲಹೆಗಳು ಹೀಗಿವೆ:

ಕಾಮೋತ್ತೇಜಕ, ಅಸಹ್ಯ, ಸಂಶಯಾತ್ಮಕ ಮತ್ತು ಅಸಂಬದ್ಧ ಶೀರ್ಷಿಕೆಗಳು ಅಭಿನಯ ಮಾತು ಅಥವಾ ಹಾಡಿನಲ್ಲಿ ಅಶ್ಲೀಲತೆ ಮತ್ತು ಜುಗುಪ್ಸೆ ಹುಟ್ಟುವಿಕೆ, ಶಿಷ್ಟರಿಗೆ ಉದ್ವೇಜಕವೆನಿಸುವುದು ಇಂಥವನ್ನು ತಡೆಹಿಡಿಯಲಾಗುವುದು.



[illegible] ಪ್ರಭಾತದಿಂದ [illegible] ಚಿತ್ರದಲ್ಲಿ [illegible] ರಾಜಸಿಂಗನನ್ನು ಒಲಿಸಲು ಪ್ರಯತ್ನಿಸುತ್ತಿದ್ದಾಳೆ.

ನೋಟಕರ ನೈತಿಕ ಅಧಃಪಾತಕ್ಕೆ ಕಾರಣವಾಗುವ ಒಂದು ಚಿತ್ರವನ್ನೂ ಪ್ರದರ್ಶಿಸಗೊಡಲಾಗದು.

ನ್ಯಾಯವೆಂದು ತೋರುವಂತೆ, ಆದರ್ಶವೆಂದು ತೋರುವಂತೆ ಪಾಪಕರ ಸಂಗತಿಗಳನ್ನು ಪ್ರದರ್ಶಿಸುವುದಕ್ಕೆ ಅವಕಾಶವಿಲ್ಲ. ಪಾಪ, ಕೇಡು ಅಥವಾ ದುಷ್ಕಟಗಳತ್ತ ಸಾಮಾಜಿಕರ ಸಹಾನುಭೂತಿ ಹೋಗಲು ಎಂದೂ ಬಿಡಲಾಗದು

ಕಾಯಿದೆಗೆ ವಿರುದ್ಧವಾದ ಕಾಮಸಂಬಂಧವೆನಿಸುವ ಸ್ವಚ್ಛಂದ ಪ್ರಣಯ, ಸಹವಾಸ ವಿವಾಹ (ಮದುವೆಯಿಲ್ಲದೆ ಗಂಡ ಹೆಂಡಿರಂತಿರುವುದು) ಅಥವಾ ಕನ್ಯಾಮಾತೃತ್ವ ಇಂಥವಕ್ಕೆ ಅಪ್ಪಣೆ ಸಿಗಲಾರದು. ವ್ಯಭಿಚಾರ ಅಥವಾ ಕಾಯಿದೆಗೆ ಒಪ್ಪದ ಕಾಮಸಂಬಂಧ ಇಂಥವು ಕಥಾರಚನೆಗೆ ಅವಶ್ಯವೆನಿಸಿದಾಗ ಅವನ್ನು ನ್ಯಾಯವೆಂದು ತೋರಿಸಿ, ಆಕರ್ಷಕವಾಗಿ ಪ್ರದರ್ಶಿಸಲು ಎಡೆಸಿಕ್ಕಲಾರದು. ಶಿಷ್ಟರಿಗೆ ಅಸಹ್ಯವೆನಿಸುವಂತೆ ವಯಸ್ಕರು ಕಾಮೋತ್ತೇಜಕವಾಗಿ ಮುತ್ತಿಡುವುದು ಮತ್ತು ಅಪ್ಪುವುದನ್ನು ತೋರಿಸಲಾಗದು. ಇದು ಪಾಶ್ಚಾತ್ಯ ದೇಶಗಳಲ್ಲಿ ಸಾಮಾನ್ಯವೆನಿಸಿದರೂ ಎಲ್ಲರೆದುರು ವಯಸ್ಕರು ಚುಂಬಿಸುವುದು ಮತ್ತು ಆಲಿಂಗಿಸುವುದು ನಮ್ಮ ದೇಶಕ್ಕೆ ಸಹಜವಾದವಲ್ಲ.

ಸವ್ಯಸಾಚಿ

ಕಲಕತ್ತದ “ ಅಸೋಸಿಯೇಟೆಡ್ [illegible]ನವರು “ ಸವ್ಯಸಾಚಿ ” ಎಂಬ ಚಿತ್ರವನ್ನು ತಯಾರಿಸುತ್ತಿದ್ದಾರೆ. ಅದರಲ್ಲಿ ಕಮಲ [illegible], [illegible]ಮಿಶ್ರ, ಸಂಧ್ಯಾರಾಣಿ, ಪರೇಶ [illegible], ಬಿಪಿನಗುಪ್ತ, ಮುಂತಾದ ನಟನಟಿಯರು ಭಾಗ ವಹಿಸಿದ್ದಾರೆ. ಸವ್ಯಸಾಚಿ ಎಂಬುದು ಶ್ರೀ ಶರಚ್ಚಂದ್ರ ಚಟರ್ಜಿ ಬರೆದ ದೇಶಪ್ರೇಮನಿರ್ಭರವಾದ ಒಂದು ಅದ್ಭುತ ಸಾಹಸದ ಕಥೆಯಾದ “ಪಥೇರ್‌ದಬೀ” ಎಂಬುದರ ಹ್ರಸ್ವರೂಪ. ಇದರಲ್ಲಿ ಹಿಂದೀ ಕ್ರಾಂತಿಯ ಒಂದು ಆಕರ್ಷಕ ಉದಾಹರಣೆಯಿದೆ.

ಹುಚ್ಚು ಪ್ರಣಯಕಥೆಗಳ ಸುರಿಮಳೆ ಸಿನೆಮಪ್ರಪಂಚವನ್ನು ಹೊಲಸೆಬ್ಬಿಸಿದ ಈ ಕಾಲದಲ್ಲಿ ಇಂಥ ಆದರ್ಶವಾಙ್ಮಯಕ್ಕೆ ಸೇರಬಹುದೆನಿಸುವ ಉತ್ತಮ ಕಥೆಯೊಂದನ್ನು ಆರಿಸಿಕೊಂಡು ಚಿತ್ರ ತೆಗೆದ ಅಸೋಸಿಯೇಟೆಡ್ “ ಪಿಕ್ಚರ್ಸ್ ” ನವರನ್ನು ಅಭಿನಂದಿಸದಿರಲಾಗದು. ಮೂಲ ಕಾದಂಬರಿಕಾರರಾದ ಶರತ್‌ಚಂದ್ರರ ಕಥಾರಚನೆಯ ವೈಶಿಷ್ಟ್ಯವನ್ನು ಇಲ್ಲಿ ಹೊಸದಾಗಿ ಹೇಳಬೇಕಾಗಿಲ್ಲ. ಅದರಿಂದ ಚಿತ್ರವು ಸರ್ವಾದರಣೀಯವೆನಿಸಬಹುದೆಂದೂ ಬಹಳ ಜನರು ನಿರೀಕ್ಷಿಸುತ್ತಿದ್ದಾರೆ.

[illegible]

([illegible])

ಈಗ [illegible] ದಿನಗಳಿಂದ [illegible] ಪ್ಯಾರಿಸ್ [illegible]. [illegible] ದಿನಕ್ಕೊಂದು ಮುಂತ್ರಿಮಂಡಳ [illegible] ಈ ಫ್ರಾನ್ಸಿನ ಸುಂದರ ನಗರದಲ್ಲಿ ಸೆ. [illegible] ಸಂ. ರಾ. ಸಂಘದ ಎಂಟನೆಯ ಸಾಹಿತ್ಯಸಭೆ ಸೇರುವುದು. “ ಎಫಿಲ್ ಟವರ ಸುಂದರ [illegible]ಗದಲ್ಲಿರುವ ಎರಡು ದೊಡ್ಡದಾದ ಮ್ಯೂಸಿಯಮ ಬಂಗಲೆಗಳನ್ನು ಸಂ. ರಾ. ಸಂಘದ ಸಭೆಗಾಗಿ ಸಿದ್ಧಗೊಳಿಸುತ್ತಿದ್ದಾರೆ. ಪ್ರಪಂಚದ ಪ್ರತಿನಿಧಿಗಳಿಗೆ ಈ ದಿಕ್ಕಿನಿಂದ ಪ್ಯಾರಿಸ್ ನಗರದ ದೃಶ್ಯ ಬಹು ಸೊಗಸಾಗಿ ಕಾಣುತ್ತದೆ.

ಲಂಡನ್ನಿನಿಂದ ಡೋವರಿಗೆ ಬಂದು ಅಲ್ಲಿ ಹಡಗು ಹತ್ತಿ ಫ್ರಾನ್ಸಿನ ಗಡಿಯಲ್ಲಿರುವ ಕೆಲೆ ಪಟ್ಟಣಕ್ಕೆ ಬಂದೆ; ಕೆಲೆಗೆ ಬಂದ ಕೂಡಲೇ ಇಂಗ್ಲಿಷ್ ಭಾಷೆಯ ಮಿತಿ ಎಷ್ಟಿದೆ ಎಂಬುದು ಬಹು ಚೆನ್ನಾಗಿ ಗೊತ್ತಾಗುವದು. ಕೆಲೆಯಿಂದ ಪ್ಯಾರಿಸ್ಸಿಗೆ ಸೀದಾ ದೋಣಿ–ರೈಲು Boat Train ಇದೆ; ನಾಲ್ಕು ಘಂಟೆಗಳ ದಾರಿ ಪ್ಯಾರಿಸ್. ಫ್ರಾನ್ಸಿನ ಆಹಾರ ಪದ್ಧತಿ ಯಾವ ರೀತಿ ಇದೆ ಎಂಬುದು ರೈಲಿನಲ್ಲಿ ಕೊಡುವ ಆಹಾರದಿಂದಲೇ ಗೊತ್ತಾಗುವುದು. ಬ್ರೆಡ್ ಒಂದು ಬಿಟ್ಟು ತರಕಾರಿ ಆಹಾರ ಒಂದೂ ಸಿಕ್ಕುವುದಿಲ್ಲ. ರೈಲಿನಲ್ಲಿ ಕಾಫಿ, ಚಹಾ ಕೊಡುತ್ತಾರೆ. ಸಕ್ಕರೆ ಕಡಿಮೆ. ಹಾಲೇ ಇಲ್ಲ ಬ್ರೆಡ್ಡೂ ಒಣಗಿ ಹೋಗಿರುತ್ತದೆ.

ರೈಲು ಪ್ಯಾರಿಸ್ಸಿನ ಹತ್ತಿರ ಬರಬರುತ್ತಲೇ ಪ್ಯಾರಿಸ್ಸಿನ ಸುಂದರ ದೃಶ್ಯಗಳು ಕಣ್ಣಿಗೆ ಗೋಚರವಾಗುವುವು. ಇಂಗ್ಲೀಷು ಬರುವ ಥಾಮಸ್ ಕುಕ್, ಅಮೇರಿಕನ್ ಎಕ್ಸ್‌ಪ್ರೆಸ್ ಕಂಪೆನಿಯ ಪ್ರಯಾಣಪ್ರತಿನಿಧಿಗಳು ರೇಲ್ವೆ ನಿಲ್ದಾಣದಲ್ಲಿ ಹಾಜರಿರುತ್ತಾರೆ. ತಾತ್ಕಾಲಿಕ ಸಹಾಯ ಅವರಿಂದ ಪಡೆಯಬಹುದು.

ಪ್ಯಾರಿಸ್ಸಿನಲ್ಲಿ ಜೀವನ ಸ್ವಲ್ಪ ತುಟ್ಟಿಯೆಂದೇ ಹೇಳಬೇಕು. ಇಲ್ಲಿಯ ಹಣದ ಚಲಾವಣೆ ಚೀನದಲ್ಲಿದ್ದಂತೆ; ಹಣಕ್ಕೆ ಬೆಲೆ ಕಡಿಮೆ. ಇಲ್ಲಿಯ ಹಣಕ್ಕೆ ಫ್ರಾಂಕ್ ಎಂದು ಹೆಸರು. ಒಂದು ಫ್ರ್ಯಾಂಕಿಗೆ ನಮ್ಮಲ್ಲಿಯ ಒಂದು ಬಿಲ್ಲೆ.

ಇಂಗ್ಲೆಂಡಿನಿಂದ ಬರುವ ಪ್ರಯಾಣಿಕರಿಗೆ ಯುರೋಪ್ ಪ್ರವಾಸಕ್ಕಾಗಿ ಕೇವಲ ೩೫ ಪೌಂಡುಗಳನ್ನು ಖರ್ಚು ಮಾಡಲು ಮಾತ್ರ ಅವಕಾಶ. ಭಾರತೀಯ ವಿದ್ಯಾರ್ಥಿಗಳಿಗೆ ಭಾರತ ಸರಕಾರದವರು ೧೫೦ ಪೌಂಡುಗಳನ್ನು ಖರ್ಚು ಮಾಡಲು ಅವಕಾಶ ಕೊಟ್ಟಿದ್ದಾರೆ. ಬೆಲ್ಜಿಯಂ ಮತ್ತು ಸ್ವಿಜರ್ಲೆಂಡ್, ಈ ಎರಡು ದೇಶಗಳಲ್ಲಿಯೂ ನಾಣ್ಯ ಇರುವುದರಿಂದ ಅಲ್ಲಿಗೆ ಬೆಲೆ ನಿರ್ಣಯ ಮಾಡಿ ಅಪ್ಪಣೆ ಚೀಟಿ ಕೊಡುತ್ತಾರೆ. ಇಂಗ್ಲೆಂಡಿನ ಒಂದು ಪೌಂಡಿಗೆ ಅಧಿಕೃತವಾಗಿ ಫ್ರಾನ್ಸಿನ ೮೬೮ ಫ್ರಾಂಕುಗಳು ಸಿಕ್ಕುತ್ತವೆ. ಕಳ್ಳ ವ್ಯಾಪಾರದಲ್ಲಿ ೧೦೫೦ ಫ್ರಾಂಕುಗಳು. ಕಳ್ಳ ವ್ಯಾಪಾರ ಎಂದರೆ ಅದು ಸರಿಯಾದ ಶಬ್ದವಾಗಲಾರದು. ಇಲ್ಲಿ ನಡೆಯುವುದು ಸ್ವಚ್ಛಂದ ವ್ಯಾಪಾರ Free Market. ಹಾಗೆಯೇ ಒಂದು ಸ್ವಿಜರ್ಲೆಂಡಿನ ಫ್ರಾಂಕಿಗೆ ಅಧಿಕೃತ ಬೆಲೆ ೬೫ ಫ್ರಾಂಕುಗಳು; ಕಳ್ಳ ವ್ಯಾಪಾರದಲ್ಲಿ ೯೫. ಒಂದು ಪೌಂಡಿಗೆ ೧೭ ಸ್ವಿಜರ್ಲೆಂಡ್ ಫ್ರಾಂಕುಗಳು ನಮ್ಮಲ್ಲಿಯ ಒಂದು ರೂಪಾಯಿಗೆ ಸುಮಾರು ಸ್ವಿಜರ್ಲೆಂಡಿನ ಒಂದು ಫ್ರಾಂಕು ಆಗುತ್ತದೆ. ಈ ಕಳ್ಳ ವ್ಯಾಪಾರ, ಇಲ್ಲಿಯ ಬ್ಯಾಂಕುಗಳು, ಅಂಗಡಿಗಳು ಮತ್ತು ರಸ್ತೆಗಳಲ್ಲೆಲ್ಲ ನಡೆಯುತ್ತದೆ. ಅಮೇರಿಕನ್ ಡಾಲರುಗಳಿಗೆ ಇಲ್ಲಿ ತುಂಬ ಬೆಲೆ. ಒಂದು ಅಮೇರಿಕನ್ ಡಾಲರಿಗೆ ಕಳ್ಳ ವ್ಯಾಪಾರದಲ್ಲಿ ೩೭೫ ಫ್ರೆಂಚ್ ಫ್ರಾಂಕುಗಳು ಸಿಕ್ಕುತ್ತವೆ; ಅಧಿಕೃತವಾಗಿ ಕೇವಲ ೩೦೫ ಫ್ರಾಂಕುಗಳು ಮಾತ್ರ.


ಇಲ್ಲಿಯ ಜೀವನ ತುಟ್ಟಿ ಎಂದೆನಲ್ಲ, ಅದು ಹೀಗೆ: ಒಂದು ಕಪ್ಪು ಕಾಫಿ, (ಹಾಲಿಲ್ಲದ್ದು) ಮತ್ತು ಒಣಗಿದ ಚೂರು ಬ್ರೆಡ್ಡಿಗೆ ೧೧೦ [illegible]

[illegible]

ಪ್ಯಾರಿಸ್ಸಿನಲ್ಲಿ [illegible] ದಂಗಡಿ.” “ಅದು ಹಾರಿಗೊಬ್ಬ [illegible] ಇದು ಪ್ಯಾರಿಸ್ಸಿನ ವಿಶೇಷ. ಈ [illegible]ಗಳ ಮುಂದೆ ಅನೇಕ ಕಾರ್ಯಗಳನ್ನು [illegible]ತ್ತಾರೆ. [illegible] ನಲ್ಲಿ ಮದಿರೆಯಂದು, ಮನಮೋ[illegible] ನಿತ್ಯಸುಮಂಗಲಿಯರು ಸುರಾಪಾನ [illegible] ರಾತ್ರಿಯ ಬೇಟೆಗಾಗಿ [illegible] ನೋಡಬಹುದು. ಫ್ರಾನ್ಸ್ [illegible] ಎಂದು ಮೊದಲಿನಿಂದ [illegible] ನಗರ!

[illegible]

[illegible] ಸುಭದ್ರೆ



ರೈತ ಪ್ರಪಂಚ

ಹೊಲ ಪಾಳು ಮಾಡಿದರೆ ಹಾನಿ

ಹೊಲಗಳನ್ನು [illegible] ತುಂಡು ಮಾಡುತ್ತ ಹೋದರೆ [illegible] ಅನಿಷ್ಟ [illegible] ಬೆಳೆಯುತ್ತಿವೆ. [illegible] ಈ [illegible] ಭೂಮಿಯ ಶಕ್ತಿಯು ಹೇಗೆ [illegible] ಒಂದು ಉದಾಹರಣೆ ತೆಗೆದು ಕೊಳ್ಳುವಾ. ಒಬ್ಬನಿಗೆ ೧೨ ಎಕರೆ ಭೂಮಿ ಮತ್ತು ನಾಲ್ವರು ಗಂಡು ಮಕ್ಕಳು ಇದ್ದರೆ ಪಾಲಿನಲ್ಲಿ ಒಬ್ಬೊಬ್ಬನಿಗೆ ೩ ಎಕರೆ ಬರುವದು. ಇವನಿಗೆ ಒಬ್ಬೊಬ್ಬನಿಗೆ ಮತ್ತೆ ೪ ಗಂಡು ಮಕ್ಕಳಾದರೆ ಹೊಲಪಾಲು ಮಾಡುವಾಗ ಒಬ್ಬೊಬ್ಬನಿಗೆ ೧ ಎಕರೆ ಸಹ ಭೂಮಿ ಬರುವದಿಲ್ಲ. ಹೀಗೆ ಬಂದ ಭೂಮಿಯಲ್ಲಿ ಕೆಲಸ ಮಾಡುವದು ಕಷ್ಟವೂ, ವೆಚ್ಚವೂ ಆಗುವದಲ್ಲದೆ ಬೆಳೆಯ ಪ್ರಮಾಣವೂ ತಗ್ಗುವದು ಮತ್ತು ಭೂಮಿಯ ಪಾಲಿಗಾಗಿ ಹಾಕುವ ನಡುವಿನ ಹಾದಿಗಳಲ್ಲಿ ಹೊಲದ ಎಷ್ಟೋ ಭಾಗ ಹಾಳಾಗಿ ಹೋಗುವದು. ಹೀಗಾಗಿ ೧೨ ಎಕರೆ ಹಾಸು ಹೊಲದಲ್ಲಿ ಬರುವ ಉತ್ಪನ್ನದ ಅರ್ಧದಷ್ಟೂ ಪಾಳಾದ ೧೨ ಎಕರೆಗಳಲ್ಲಿ ಬರುವದಿಲ್ಲ.

ಇದನ್ನು ಮನಗಂಡೇ ಮುಂಬಯಿ ಸರಕಾರವು ೧೯೪೭ ರಲ್ಲಿ ಹೊಲಗಳ ಒಳಪಾಲು ಮಾಡಿ ಅವನ್ನು ತುಂಡರಿಸುವದನ್ನು ತಡೆಯಲು ಮತ್ತು ತುಂಡಾದವುಗಳನ್ನು ಒಂದುಗೂಡಿಸುವ ಕಾಯದೆಯನ್ನು ರೂಪಗೊಳಿಸಿತು. ಈ ವಿಷಯದ ಬಗ್ಗೆ ೪೦ ವರ್ಷಗಳಿಂದಲೂ ಹಿಂದು ಸ್ಥಾನದ ಎಲ್ಲ ಪ್ರಾಂತಗಳೂ ವಿಚಾರಿಸಹತ್ತಿದ್ದವು. ಹೀಗೆ ಹೊಲ ತುಂಡಾಗುವದರ ದುಷ್ಪರಿಣಾಮವನ್ನು ಹಿಂದಕ್ಕೆ ಒಕ್ಕಲತನದ ಸಂಬಂಧದಲ್ಲಿ ನೇಮಿಸಲ್ಪಟ್ಟ ರಾಯಲ ಕಮಿಶನ್ ಸಹ ಒತ್ತಿ ಹೇಳಿದೆ. ಬರಗಾಲ ನಿವಾರಣಾ ಸಮಿತಿಯೂ ಇದನ್ನೇ ಎತ್ತಿ ಹಿಡಿದಿದೆ.

ನಮ್ಮ ದೇಶದಲ್ಲಿಯಷ್ಟೇ ಈ ಹೊಲಪಾಲು ಮಾಡುವದರಿಂದಾಗುವ ಹಾನಿಯು ಸಮಸ್ಯೆ ಎದ್ದಿದೆಯೆಂದಲ್ಲ. ಎಲ್ಲ ದೇಶಗಳಲ್ಲಿಯೂ ಈ ಸ್ಥಿತಿಯಿದ್ದು ಆಯಾ ಸರಕಾರಗಳು ಕೂಡಲೇ ತಕ್ಕ ಉಪಾಯ ಕೈಕೊಂಡು ಹೊಲಗಳು ಪಟ್ಟಿಯಾಗುವದನ್ನು ತಡೆದದ್ದು ಕಂಡು ಬರುತ್ತದೆ. ಈ ಅನಿಷ್ಟವನ್ನು ಹೋಗಲಾಡಿಸಲು ಡೆನ್‌ಮಾರ್ಕದಲ್ಲಿ ೧೮೩೭ ರಲ್ಲಿಯೇ ಕಾಯದೆ ಮಾಡಲಾಯ್ತು. ಆದ್ದರಿಂದ ಈ ವಿಷಯದಲ್ಲಿ ಡೆನ್‌ಮಾರ್ಕದ ಅನುಭವವು ಬಹಳ ಉಪಯುಕ್ತವಾದುದಾಗಿದೆ. ಎಂದೇ ನಮ್ಮ ನಾಡಿನ ಸಹಕಾರೀ ಯೋಜನಾ ಸಮಿತಿಯು ತುಂಡಾದ ಭೂಮಿಯನ್ನು ಒಂದುಗೂಡಿಸುವ ಕಾರ್‍ಯದಲ್ಲಿ ಡೆನ್‌ಮಾರ್ಕದ ಅನುಭವದ ಲಾಭ ಪಡೆಯಬೇಕೆಂದೂ ಆ ದೇಶದಲ್ಲಿ ಗೊತ್ತುಪಡಿಸಲಾದ ಕನಿಷ್ಠ ಭೂಕ್ಷೇತ್ರಕ್ಕಿಂತ ಇಲ್ಲಿಯ ಭೂಕ್ಷೇತ್ರ ಚಿಕ್ಕದಿರಕೂಡದೆಂದೂ ಶಿಫಾರಸು ಮಾಡಿ ಹಾಗೆ ಒಂದು ಕಾಯದೆ ಮಾಡಲು ಸೂಚಿಸಿತು. ಇದೇ ಬಗೆಯ ಕಾಯದೆ ಮಾಡುವ ಅವಶ್ಯಕತೆಯು ಫ್ರಾನ್ಸ, ಸ್ವಿಝರ್ಲಂಡ, ಬೆಲ್ಜಿಯಮ್ ಜರ್ಮನಿ, ಜಪಾನಗಳಲ್ಲಿಯೂ ಕಂಡು ಬಂದಿತು. ಈ ದೇಶದವರು ಸುಮ್ಮನೆ ಅನುಮಾನಿಸುತ್ತ ಕೂಡದೆ ದೇಶದ ಅಭಿವೃದ್ಧಿಗಾಗಿ ತುಂಡು ಹೊಲಗಳನ್ನು ಒಂದುಗೂಡಿಸುವ ಯೋಜನೆಯನ್ನು ಕಾಯದೇಮೂಲಕ ಕೃತಿಗಿಳಿಸಿಯೇ ಬಿಟ್ಟರು. ನಮ್ಮ ಜನರ ಅಜ್ಞಾನ ಮೂಲಕವಾಗಿ ಇಂತಹ ಪ್ರಯತ್ನಕ್ಕೆ ಈ ವರೆಗೆ ಜನಮತವು ಪ್ರತಿಕೂಲವಾಗಿತ್ತು. ಈಗ ಸರಕಾರವು ಈ ಬಗ್ಗೆ ಕಾಯದೆ ಮಾಡಿದ್ದು ಅದರ ಮುಖ್ಯಾಂಶಗಳು ಹೀಗಿವೆ.

(೧) ಯಾವ ಪ್ರದೇಶದಲ್ಲಿ ಕನಿಷ್ಠ ಭೂಮಿಯ ಪ್ರಮಾಣವು ಎಷ್ಟಿದ್ದರೆ ಲಾಭದಾಯಕವೋ ಅಷ್ಟು ಪ್ರಮಾಣವನ್ನು ಗೊತ್ತುಪಡಿಸಲಾಗುವದು.

(೨) ಈ ಪ್ರಮಾಣಕ್ಕೆ ಕಡಮೆ ಇರುವ ಭೂಮಿಯನ್ನು ತುಂಡು ಎಂದು ಪರಿಗಣಿಸಿ ನೆರೆಯ ಭೂಮಿಯನ್ನು ಸಾಗು ಮಾಡುವ ರೈತನಿಗೇ ಇದನ್ನು ಸಾಗು ಮಾಡಲು ಕೊಡಲಾಗುವದಲ್ಲದೆ ಇತರರಿಗೆ ಕೊಡುವದಿಲ್ಲ.

(೩) ಇಂತಹ ಪಟ್ಟಿಗಳನ್ನು ಮಾರುವದಿದ್ದರೆ ನೆರೆಯ ಹೊಲದವನಿಗೇ ಅದನ್ನು ಕೊಡಲಾಗುವದು. ಒಂದು ವೇಳೆ ನೆರೆಯ ಹೊಲದವನು ಸಾಕಷ್ಟು ಬೆಲೆ ಕೊಡಲು ನಿರಾಕರಿಸಿದರೆ ಪಟ್ಟಿಯ ಒಡೆಯನಿಗೆ ಹಾನಿಯಾಗದಂತೆ ನೋಡಿಕೊಳ್ಳಲು ಕಾಯದೆಯಲ್ಲಿ ತಕ್ಕ ಏರ್ಪಾಟಿದೆ.

(೪) ಯಾವದೇ ಪ್ರದೇಶದಲ್ಲಿ ಹೊಲಗಳನ್ನು ಒಂದು ಗೂಡಿಸುವ ಕ್ರಮವನ್ನು ಸರಕಾರವು ಕೈಕೊಳ್ಳುವ ಮೊದಲು ಸಾಕಷ್ಟು ಅವಕಾಶ ಕೊಟ್ಟು ಸಂಬಂಧಪಟ್ಟವರಿಗೆ ತಿಳಿಸಲಾಗುವದು. ಏನಾದರೂ ತಕರಾರು ಇದ್ದರೆ ಅವನ್ನು ಕೇಳಿ ನಿಮುರ್ಣಿಸಲಾಗುವದು.

ಹೀಗೆ ತುಂಡು ಹೊಲಗಳನ್ನು ಒಂದುಗೂಡಿಸುವ ಹಾಗೂ ಅವುಗಳ ಒಳಪಾಲುಗಳನ್ನು ತಡೆಗಟ್ಟುವ ಉದ್ದೇಶವು ರೈತರ ಕಲ್ಯಾಣವೇ ಆಗಿದೆ. ಇದರಿಂದ ರೈತರ ಬಾಳು ಸುಧಾರಿಸುವದು. ಈ ದೃಷ್ಟಿಯಿಂದ ಈ ಕಾಯದೆಯು ಅತ್ಯಂತ ಮಹತ್ವದೂ, ಉಪಯುಕ್ತವೂ ಆಗಿದೆ.

ಮುಂಬೈಪ್ರಾಂತದಲ್ಲಿ ೩॥ ಕೋಟಿ ಎಕರೆ ಭೂಮಿ

ಈ ಪ್ರಾಂತದಲ್ಲಿ ಸುಮಾರು ೩॥ ಕೋಟಿ ಎಕರೆ ಭೂಮಿಯಲ್ಲಿ ಬೆಳೆ ಎತ್ತಲಾಗುತ್ತದೆ. ಇದರಲ್ಲಿ ೧೦ ಲಕ್ಷ ಎಕರೆಗಳಷ್ಟು ಭೂಮಿ ಕೆರೆ, ಕಾಲುವೆಗಳ ಮುಖಾಂತರ ಕೃತ್ರಿಮವಾಗಿ ನೀರುಣ್ಣುವದು. ಉಳಿದ ಭೂಭಾಗವು ಮಳೆಯನ್ನೆ ಅವಲಂಬಿಸಿರಬೇಕಾಗುವದು. ಆದ್ದರಿಂದ ಪ್ರಾಂತದ ಒಕ್ಕಲತನವು ಒಂದು ದೊಡ್ಡ ಸಮಸ್ಯೆಯೇ ಆಗಿದೆ. ಮುಂಬೈ ಪ್ರಾಂತದ ಒಟ್ಟು ಕ್ಷೇತ್ರಫಲವು ೭೭,೦೧೧ ಚ. ಮೈಲು. ಇದರಲ್ಲಿ ಬರಗಾಲಕ್ಕೆ ಗುರಿಯಾಗದಿರುವ ಭಾಗವೆಂದರೆ ೨೪,೯೪೮ ಚ. ಮೈಲು ಮಾತ್ರ. ಮೇಲಿಂದ ಮೇಲೆ ಬರ ಬೀಳುವ ಭಾಗವು ೨೫,೯೧೮ ಚ. ಮೈಲು.

ಪ್ರಾಂತದ ಒಟ್ಟು ಕ್ಷೇತ್ರದಲ್ಲಿ ೧೦೦ ಕ್ಕೆ ೬೮ ರಷ್ಟು ಭಾಗದಲ್ಲಿ ಮಳೆ ಬಿದ್ದೀತೆಂಬ ಭರವಸೆಯೇ ಇರುವದಿಲ್ಲ. ಅಲ್ಲದೆ ೧೦೦ ಕ್ಕೆ ೩೫ ರಷ್ಟು ಭಾಗಕ್ಕೆ ಬರಗಾಲದ ಭೀತಿಯೂ ತಪ್ಪಿದ್ದಲ್ಲ.

ಮಳೆಯ ಅಭಾವದ ಭಾಗಗಳೆಂದರೆ ಅಹಮ್ಮದನಗರ, ಸೊಲ್ಲಾಪುರ, ಸಾತಾರಾ ಮತ್ತು ಪುಣೆ ಜಿಲ್ಹೆಯ ಕೆಲ ಭಾಗಗಳು, ಗುಜರಾತದಲ್ಲಿ ಬಡೋಜ, ಪಂಚಮಹಾಲ ಜಿಲ್ಹೆಗಳು ಕರ್ನಾಟಕದ ವಿಜಾಪುರ ಜಿಲ್ಹೆ, ಧಾರವಾಡ ಬೆಳಗಾವ ಜಿಲ್ಹೆಯ ಕೆಲಭಾಗಗಳು. ಈ ಭಾಗದಲ್ಲಿ ಮಳೆಯ ಅಭಾವವಿರುವದಿಷ್ಟೇ ಅಲ್ಲ ದೊಡ್ಡ ಮಳೆ ಬಿದ್ದರೆ ಹೊಲದೊಳಗಿನ ಮಣ್ಣು ಕೊಚ್ಚಿಕೊಂಡು ಹೋಗುವದು. ಇಲ್ಲಿ ಇದೂ ಒಂದು ಸಮಸ್ಯೆಯೇ ಆಗಿದೆ. ಈ ಭಾಗಗಳಲ್ಲಿ ಆಗಾಗ ಅಲ್ಪಕಾಲದವರೆಗೆ ದೊಡ್ಡ ಮಳೆ ಬೀಳುವದು ಸಾಗುವಳಿಗೆ ಮತ್ತು ಉತ್ಪಾದನೆಗೆ ಲಾಭದಾಯಕವಾಗಿ ಪರಿಣಮಿಸುವದಿಲ್ಲ. ಮಳೆ ನೀರು ಇಳಕಲು ಭೂಮಿಯ ಮೇಲಿನ ಮಣ್ಣಿನ ಹೊದಿಕೆಯನ್ನು ಕೊಚ್ಚಿಕೊಂಡು ಹೋಗುವದರಿಂದ ಭೂಮಿಗೆ ತುಂಬಿ ಬಾರದಷ್ಟು ಹಾನಿಯಾಗುವದು. ಹೊಲದ ಮಣ್ಣಿಗೆ ಹುಲುಸುಂಟಾಗಲೆಂದೇ ರೈತನು ಗೊಬ್ಬರ ಹಾಕುತ್ತಾನೆ. ಹೀಗೆ ಬಲಿಸಿದ ನೆಲದ ಮಣ್ಣೆಲ್ಲ ನೀರಗುಂಟ ಹರಿದು ಹೋದರೆ ಹೇಗೆ?

ಇದಕ್ಕಾಗಿಯೇ ಹೊಲಗಳಿಗೆ ಒಡ್ಡಿನ ಅವಶ್ಯಕತೆಯುಂಟಾಗುವದು. ಒಡ್ಡು ಮುಂತಾದವುಗಳಿಂದ ರಕ್ಷಿಸಲ್ಪಡದ ಹೊಲಗಳಿಂದ ಪ್ರತಿ ವರ್ಷ ಪ್ರತಿ ಒಂದು ಎಕರೆ ಭೂಮಿಯಿಂದ ೫೦ ಟನ್ನು ಫಲವತ್ತಾದ ಮಣ್ಣು ಹರಿದು ಹೋಗುತ್ತದೆಂದೂ ಒಮ್ಮೊಮ್ಮೆ ಈ ಪ್ರಮಾಣ ೧೩೦ ಟನ್ನಿನ ವರೆಗೂ ಏರುತ್ತದೆಂದೂ ಸಂಶೋಧನೆಯಿಂದ ತಿಳಿದು ಬಂದಿದೆ.

ಹಾಗಾದರೆ ಇದಕ್ಕೆ ಉಪಾಯವೇನು ಸರಕಾರದ ಯೋಜನೆಯೇನು ಎಂದು ಸಹಜವಾಗಿ ಯಾರಾದರೂ ಕೇಳಬಹುದು. ಸಾಗುವಳಿಯಲ್ಲಿರುವ ಭೂಮಿಯ ಪಾತಳಿಗನುಸರಿಸಿ ಒಡ್ಡು ಹಾಕುವದು ಮುಖ್ಯ ಅಂಶವಾಗಿದೆ. ಒಡ್ಡುಗಳು ಮಳೆನೀರನ್ನು ತಡೆಹಿಡಿದು ಹೊಲಗಳಲ್ಲಿಯೇ ಇಂಗುವಂತೆಯೂ ಕೊಚ್ಚಿ ಹೋಗುವ ಮಣ್ಣನ್ನು ಪ್ರತಿಬಂಧಿಸುವಂತೆಯೂ ಮಾಡುತ್ತವೆ. ಇದಕ್ಕಾಗಿ ಸರಕಾರವು ೮೫, ೭೮, ೯೪೭ ರೂ. ವೆಚ್ಚ ಮಾಡಿ ೭, ೨೪, ೫೫೫ ಎಕರೆ ಭೂಮಿಗೆ ಒಡ್ಡುಗಳನ್ನು ಹರಿಗಳನ್ನು ರಚಿಸಿತು. ಆದರೆ ೧೯೪೬ ರಲ್ಲಿ ಮಳೆ ಹೆಚ್ಚಾದ್ದರಿಂದ ಅನೇಕ ಸ್ಥಳಗಳಲ್ಲಿ ಒಡ್ಡು ಒಡೆದು ಹೋದವು. ಅಲ್ಲದೆ ಆಗ ಸರಕಾರವು ಅನುಸರಿಸಿದ ಒಡ್ಡು ಹಾಕುವ ಪದ್ಧತಿಯ ಸಮರ್ಪಕತೆಯ ಮತ್ತು ಪರಿಣಾಮದ ಪರೀಕ್ಷೆಯೂ ನಡೆದಿತು. ಇದನ್ನು ಪರಿಶೀಲಿಸಲು ಸರಕಾರವು ಒಂದು ಸಮಿತಿಯನ್ನು ನೇಮಿಸಿತು.

ಯಾವ ಪ್ರದೇಶದಲ್ಲಿ ಜನತೆಯ ಬೇಡಿಕೆ ಉಂಟೋ ಅಂತಹ ಭಾಗಗಳಲ್ಲಿ ವಿಸ್ತೃತವಾದ ಒಡ್ಡಿನ ಯೋಜನೆ ಕೈಕೊಳ್ಳಬಹುದೆಂದು ಈ ಸಮಿತಿಯು ಸೂಚಿಸಿತು. ಈ ಸೂಚನೆಯ ಮೇರೆಗೆ ಸರಕಾರವು ಹೆಜ್ಜೆ ಹಾಕಿ ಹಾಗೆ ಆಜ್ಞೆ ಹೊರಡಿಸಿದೆ. ಮೊದಲಿದ್ದ ಭೂ ಸುಧಾರಣ ಶಾಖೆಗೆ ಭೂ ಸಂರಕ್ಷಣ ಶಾಖೆಯೆಂದು ಹೊಸ ನಾಮಕರಣ ಮಾಡಲಾಗಿದೆ. ಒಡ್ಡಿನ ಕಾರ್ಯವು ಭೂ ಸಂರಕ್ಷಣ ಶಾಖೆಯವರಿಂದಲೇ ನಡೆದಿರಲಿ ಅಥವಾ ಒಕ್ಕಲಿಗರು ತಾವಾಗಿಯೇ ನಡೆಸಿರಲಿ, ಸರಕಾರವು ೧೦೦ ಕ್ಕೆ ೫೦ ರಷ್ಟು ಸಹಾಯ ಹಣವೆಂದು ಕೊಡುವದು. ಆದರೆ ೧ ಎಕರೆಗೆ ೧೦ ರೂ. ಗಿಂತ ಹೆಚ್ಚಿಗೆ ಕೊಡಲಾಗುವದಿಲ್ಲ. ಈ ಮೇಲೆ ೧೫ ಕಂತುಗಳಲ್ಲಿ ಸರಕಾರದ ಹಣವನ್ನು ಕೊಟ್ಟರಾಯಿತು. ರೈತರು ಸರಕಾರದ ಈ ವ್ಯವಸ್ಥೆಯ ಲಾಭ ಪಡೆದು ತಮ್ಮ ಉತ್ಪನ್ನವನ್ನೂ ದೇಶದ ಅನ್ನವನ್ನೂ ಹೆಚ್ಚಿಸಬೇಕು.

ನಾ ಕಂಡ ಪ್ಯಾರಿಸ್

(೧೧ ನೆಯ ಪುಟದಿಂದ ಬಂದುದು)

ಲಾರದು. ಮನೆಗಳು, ಕಟ್ಟಡಗಳು, ಸ್ಮಾರಕಗಳು, ಕಾಲೇಜುಗಳು, ಅರಮನೆಗಳು, ಪ್ರತಿಯೊಂದೂ ಒಂದೊಂದು ಹಳೆಯ ನೆನಪು ಕೊಡುತ್ತ ಕಲಾಪ್ರದರ್ಶಕ ಕುರುಹುಗಳಾಗಿವೆ. ಪ್ಯಾರಿಸ್ ನಗರದ ಉದ್ಯಾನ ವನಗಳು ಕೂಡ ಬಹು ಸೊಗಸಾಗಿವೆ.

ಈ ಸೊಗಸಿಗೆ ಮೆರುಗು ಕೊಡುವಂತೆ ಸೀನ್ ಎಂಬ ನದಿಯು ನಗರ ಮಧ್ಯದ ಎರಡೂ ಭಾಗಗಳಲ್ಲಿಯೂ ಹರಿದು ನಗರದ ಅಂದವನ್ನು ಹೆಚ್ಚಿಸಿದೆ.

ಫ್ರೆಂಚ್ ಭಾಷೆ ಬಾರದ ಪರದೇಶೀಯರು ಪ್ಯಾರಿಸ್ಸನ್ನು ನೋಡುವುದು ಹೇಗೆ? ಇಂಗ್ಲೀಷ್ ಭಾಷೆಯಲ್ಲಿ ವಿವರಿಸುವ ಮಾರ್ಗದರ್ಶಕರ ನ್ನೊಳಗೊಂಡ ಪ್ಯಾರಿಸ್ ಪ್ರವಾಸಗಳನ್ನು American Ex-press ಮತ್ತು Thomas Cook ಕಂಪನಿಗಳು ಪ್ರತಿದಿನ ಬೆಳಿಗ್ಗೆ ಮಧ್ಯಾನ್ಹದಲ್ಲಿ ನಡೆಸಿಕೊಡುತ್ತಾರೆ. ಚರಿತ್ರಾರ್ಹವಾದ ನವೀನವಾದ ಪ್ಯಾರಿಸ್ಸಿನ ಎಲ್ಲ ಮುಖ್ಯ ಪ್ರದೇಶಗಳನ್ನೂ ತೋರಿಸುತ್ತಾರೆ. ಇಂತಹ ಪ್ರವಾಸಗಳನ್ನು ಕೈಕೊಳ್ಳುವುದರಿಂದ ಸ್ವಲ್ಪಕಾಲದಲ್ಲಿ ನೋಡುವುದೆಲ್ಲವನ್ನೂ ನೋಡಬಹುದು. ಈ ಪ್ರವಾಸಗಳ ಬೆಲೆಸುಮಾರು ೧೫೦೦ ಫ್ರಾಂಕುಗಳಾಗುತ್ತವೆ

ಪ್ಯಾರಿಸ್ಸಿಗೆ ೧೦ ಮೈಲು ದೂರದಲ್ಲಿ ವರ್ಸೇಲ್ಸ ಪಟ್ಟಣವಿದೆ. ಇಲ್ಲಿಯೇ ಲೂಯಿ ೧೪, ೧೫, ೧೬, ರ ಅರಮನೆ ಇದೆ. ಪ್ಯಾರಿಸ್ಸಿನ ಜನ ೧೭೮೯ ನೆಯ ಕ್ರಾಂತಿಯಲ್ಲಿ ಇದೇ ಅರಮನೆಯನ್ನೇ ಮುತ್ತಿ ೧೬ ನೆಯ ಲುಯಿಯನ್ನು ಮತ್ತು ಆತನ ಹೆಂಡತಿ, ದಿನಕ್ಕೆ ೨೦ ಸಲ ತನ್ನ ಉಡುಪು ಬದಲಾಯಿಸುವ ಮೇರಿ ಅಂಟಾಯನೆಟ್ಟಗಳನ್ನು ಓಡಿಸಿಕೊಂಡು ಬಂದು ಪ್ಯಾರಿಸ್ಸಿನಲ್ಲಿ ಕೊಲೆ ಮಾಡಿದರು. ಈಗಲೂ ಈ ಅರಮನೆಯನ್ನು ಬಹು ಚೆನ್ನಾಗಿ ಕಾಪಾಡಿದ್ದಾರೆ. ಹಿಂದಿನ ಅರಸರು ಯಾವರೀತಿಯಲ್ಲಿ ಭೋಗ ಕೂಪದಲ್ಲಿ ಮುಳುಗಿ ಸ್ವವೈಭವದಿಂದ ಆಳುತ್ತಿದ್ದರೆಂಬುದನ್ನು ಫ್ರೆಂಚ್ ಜನರು ಯಾವಾಗಲೂ ಮರೆಯದಿರಲಿ ಎಂದು ಕ್ರಾಂತಿಕಾರರು ಇದನ್ನು ಹಾಳು ಮಾಡಿಲ್ಲ. ಇದು ಒಂದು ಪ್ರತೀಕವಾದರೆ, ಫ್ರೆಂಚ್ ಕ್ರಾಂತಿಕಾರರ ಸ್ಮಾರಕವೊಂದು ಕ್ರಾಂತಿಕಾರರ ನೆನಪನ್ನು ತರಲು ಪ್ಯಾರಿಸ್ ನಗರದ ಮಧ್ಯಭಾಗದಲ್ಲಿದೆ. ಹಿಂದಿನ ಬ್ಯಾಸ್ಟೈಲ್ ಸೆರೆಮನೆಯನ್ನು ನೆಲ ಸಮ ಮಾಡಿದ್ದರಿಂದ ಅದೊಂದು ದೊಡ್ಡಬೀದಿಯಾಗಿದೆ ಈಗ. ಅಲ್ಲಿ ಈಗಲೂ ಕತ್ತಲು ಕಾರಾಗಾರಗಳನ್ನು ಗುರುತಿಸಲು ಕರಿಯ ಕಲ್ಲಿನಿಂದ ಗುರುತು ಮಾಡಿದ್ದಾರೆ. ಪ್ಯಾರಿಸ್ಸಿನ ನಾನಾ ಕಡೆಗಳಲ್ಲಿ ಫ್ರಾನ್ಸಿನ ಮಹಾಕ್ರಾಂತಿಯ ವೀರರು ಕಲ್ಲಾಗಿ ನಿಂತಿದ್ದಾರೆ. !

ನೆಪೋಲಿಯನ್ ಬೋನಾಪಾರ್ಟ ಮಹಾಶಯನ ವರ್ಚಸ್ಸೂ ಕಾಣದೇ ಇಲ್ಲ. ಆತನ ಸಮಾಧಿಯು ನಗರದಲ್ಲಿಯೇ ಇದೆ. ದಿನವೂ ನೂರಾರು ಜನರು ಬಂದು ನೋಡಿಕೊಂಡು ಹೋಗುತ್ತಾರೆ.

ನಿಜಾಮರ ಜಪ್ತಾದ ಹಣದಿಂದ ೧೦ ಲಕ್ಷರೂ. ಪಾಲಿಸ್ತಾನಕ್ಕೆ ಕಾಣಿಕೆ

ನಿಜಾಮರು ಹಿಂದುಸ್ತಾನ ಸರಕಾರದ ಸಾಲಪತ್ರಗಳಲ್ಲಿ ಹಣವನ್ನು ಮರಳಿ ಕೊಡಬಾರದೆಂದು ಹಿಂದುಸ್ತಾನ ಸರಕಾರವು ನಿರ್ಧರಿಸಿದೆಯಷ್ಟೆ. ಆದರೆ ನಿಜಾಮರು ಪಾಲಿಸ್ತಾನ ನಿರಾಶ್ರಿತರ ನಿಧಿಗೆ ೧೦ ಲಕ್ಷ ರೂ. ಕಾಣಿಕೆ ಕೊಡಲು ಒಪ್ಪಿದ್ದರಿಂದ ಹಿಂದುಸ್ತಾನ ಸರಕಾರವು ತಮ್ಮ ವಶದಲ್ಲಿರುವ ನಿಜಾಮರ ಜಪ್ತಾದ ಹಣದಲ್ಲಿ ೧೦ ಲಕ್ಷ ರೂ. ಗಳನ್ನು ಪಾಲಿಸ್ತಾನ ನಿಧಿಗೆ ಕೊಟ್ಟಿದ್ದಾರೆಂದು ಹಿಂದುಸ್ತಾನ ಸರಕಾರದ ಪ್ರಕಟನೆ ಹೊರಟಿದೆ.

ಕರ್ನಾಟಕ

ಧಾರವಾಡ

ಮುಂಡರಗಿ ಪೇಟೆಕ್ಕೆ ಬಂದ ನಿರಾಶ್ರಿತ ರೋಗಿಗಳ ಔಷಧೋಪಚಾರ ನಿರ್ವಹಿಸಲು ಮುಂಡರಗಿಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದ್ದು ಗ್ರಾಮಸ್ಥರ ಸರ್ಟಿಫಿಕೇಟ ತೆಗೆದುಕೊಂಡು ಇದರ ಲಾಭ ಪಡೆಯಬೇಕು.

ನರೇಗಲ [ರೋಣ] ಗ್ರಾಮರಕ್ಷಕ ಮಂಡಲದ ವಿಶೇಷ ಸಾಧಾರಣ ಸಭೆ ಸೇರಿ ಮನೆಗೊಬ್ಬರಂತೆ ದಲದಲ್ಲಿ ಸೇರಬೇಕೆಂದು ನಿರ್ಣಯ ಕೈಕೊಳ್ಳಲಾಯಿತು. ಗ್ರಾಮ ಸಾಧಾರಣಾ ಮಂಡಲದವರು ಅಂಗಡಿಕಾರರಿಗೆ ಜಹಾಪುಡಿ ಮಾರಬಾರದೆಂದು ತಿಳಿಸಿದ್ದಾರೆ.

ಮ. ಗಾಂಧಿಯವರ ಸ್ಮಾರಕವಾಗಿ ಕೋಟುಮಚಗಿಯಲ್ಲಿ (ಗದಗ] ಒಂದು ಬಾವಿ ಕಡಿಸಲು ಪ್ರಾರಂಭವಾಗಿದ್ದು ಇದ್ದಲಿಗಿಯ ಶ್ರೀ. ಮಲ್ಲೇಶ್ವರಪ್ಪ ಹಳೇಪೇಟಿ ಇವರು ೧೨೧ ರೂ ಕೊಡಲು ವಾಗ್ದಾನಮಾಡಿ ೨೫ ರೂ ಕೊಟ್ಟರು.

ಮುಂಬಯಿ ಶಾಸನ ಸಭೆಯಲ್ಲಿ ಕಂದಾಯ ಮಂತ್ರಿಗಳು ಒಂದು ಪ್ರಶ್ನೆಗೆ ಉತ್ತರ ಕೊಡುತ್ತ ಬೆಳಗಾವಿ ಜಿಲ್ಲೆಯಲ್ಲಿ ೧೦೨ ಮಠಗಳೂ ೩೦೪೯ ಗುಡಿಗಳೂ ವಿಜಾಪುರ ಜಿಲ್ಲೆಯಲ್ಲಿ ೨೩ ಮಠಗಳೂ ೨೦೫೯ ಗುಡಿಗಳೂ ಧಾರವಾಡ ಜಿಲ್ಲೆಯಲ್ಲಿ ೪೬೨ ಮಠಗಳೂ ೩೯೯೨ ಗುಡಿಗಳೂ ಉ. ಕನ್ನಡ ಜಿಲ್ಲೆಯಲ್ಲಿ ೧೧೭ ಮಠಗಳೂ ೧೦೭೬ ಗುಡಿಗಳೂ ಇರುವವೆಂದು ತಿಳಿಸಿದರು.

ಬಂಕಾಪೂರ ತಾಲೂಕ ಕಾಂಗ್ರೆಸ ಕಮಿಟಿಯ ಅಧ್ಯಕ್ಷರಾದ ಶ್ರೀ ಧರಣೇಂದ್ರಪ್ಪ ಉಪಾಧ್ಯಾಯರು ತಾ. ೮ ಕ್ಕೆ ಹುಬ್ಬಳ್ಳಿಯಿಂದ ಗೂಡ್ಸಮೋಟಾರ ಮೇಲೆ ಧುಂಡಸಿಗೆ ಹೊರಟಾಗ ದಾರಿಯಲ್ಲಿ ಮೋಟಾರ ಅಪಘಾತವಾಗಿ ನಿಧನ ಹೊಂದಿದರೆಂದು ತಿಳಿಸಲು ತುಂಬ ವಿಷಾದವಾಗುತ್ತದೆ.

ಜಿಲ್ಲಾ ಸ್ಕೂಲಬೋರ್ಡಿನವರಿಂದ ಕಳಿಸಲ್ಪಟ್ಟ ಪ್ರಾಥಮಿಕ ಶಿಕ್ಷಕರ ೪ ನೇ ಗುಂಪಿನ ನೇಗೆಯ ವರ್ಗದ ಮುಕ್ತಾಯ ಸಮಾರಂಭವು ಕರ್ಜಗಿಯಲ್ಲಿ ತಾ. ೩ ರಂದು ಶ್ರೀ ಸಿದ್ದಪ್ಪಣ್ಣ ಹೊಸಮನಿ ಇವರ ಹಸ್ತದಿಂದ ನೆರವೇರಿತು.

ಗದಗಬೇಟಗೇರಿಯ ಸೋ. ಸ. ಕ್ಷತ್ರಿಯ ತರುಣ ಸಂಘದ ಜನರಲ ಲಾಯಬ್ರರಿಯ ೧೦ ನೇ ವಾರ್ಷಿಕ ಸಮಾರಂಭವು ನಡೆದು, ಶ್ರೀ ಘೋಂಡೀರಿಂಗ-ರಿಂಗ ದೇವಣಾ ಇವರು ಸಂಸ್ಥೆಯ ಕಾರ್ಯಕ್ಕೆ ಮೆಚ್ಚಿ ೧೦೧ ರೂ. ಕೊಡುವ ಆಶ್ವಾಸನವಿತ್ತರು. ಆಗ ಶ್ರೀ ಮೇರವಾಡೆ ಹುಬ್ಬಳ್ಳಿ ಅವರು ೨೫ ರೂ. ಶ್ರೀ ಭವಾನಸಾಹಬೀಬರು ೧೫ ರೂ. ಕೊಡುವದಾಗಿ ಹೇಳಿದರು ಹೆಚ್ಚು ಗುಣ ಪಡೆದು ಮ್ಯಾಟ್ರಿಕ್ ಪಾಸಾದ ಸಮಾಜದ ವಿದ್ಯಾರ್ಥಿಗೆ ೫೧ ರೂ. ಬಹುಮಾನ ಕೊಡುವದಾಗಿ ಶ್ರೀ ಮೇರವಾಡೆ ಆಶ್ವಾಸನ ಕೊಟ್ಟರು. ಇದೇ ಸಮಾರಂಭದಲ್ಲಿ ಗದಗ ತಾಲೂಕ ಕಾಂಗ್ರೆಸ ಕಮಿಟಿಗೆ ಅಧ್ಯಕ್ಷರಾಗಿ ಆಯ್ಕೆಗೊಂಡ ಶ್ರೀ ತುಳಜಪ್ಪ ಮಿಸ್ಕಿನ ಅವರಿಗೆ ಸತ್ಕಾರ ಸಮಾರಂಭ ನಡೆದಿತು.

ಹೆಸರೂರಿನ ನಿರಾಶ್ರಿತ ಅನ್ನಛತ್ರದಲ್ಲಿ ತಾ|| ೨೫ ರಿಂದ ೧ ರ ವರೆಗೆ ಸುಮಾರು ೨೭೩೦ ಜನ್ನರಿಗೆ ಅನ್ನಸಂತರ್ಪಣೆಯಾಯಿತು. ಹೊಳೆದಂಡೆಯ ಮೇಲೆ ಬೀಡು ಮಾಡಿದ ೨೩ ಕುಟುಂಬಗಳಿಗೆ ಸೀದಾ ಕೊಡಲಾಗುತ್ತಿರುವದು. ದಾನಶೂರ ಬಸರೀಗಿಡದ ವೀರಪ್ಪನವರು ಶಿಬಿರಕ್ಕೆ ಸರ್ವರೀತಿ ಸಹಾಯ ನೀಡುತ್ತಿರುವರು.

ನವಲಗುಂದ ತಾಲೂಕಿನ ಜಾವೂರ ಎಂಬ ಹಳ್ಳಿಯಲ್ಲಿ ಕೆಲವರು ವೈಯಕ್ತಿಕ ದ್ವೇಷದಿಂದ ಕುಲಕರ್ಣಿಯ ದಪ್ತರನ್ನು ನಾಶ ಮಾಡಿರುವರು. ಈ ಬಗ್ಗೆ ಅಲ್ಲಿಯ ಗೌಡನನ್ನ ಸಸ್ಪೆಂಡ ಮಾಡಲಾಗಿದೆಯೆಂದು ತಿಳಿಯುತ್ತದೆ.

ಹುಬ್ಬಳ್ಳಿಯಲ್ಲಿ ಅಂಗಡಿ ಇನಸ್ಪೆಕ್ಟರರಾಗಿದ್ದ ಶ್ರೀ ವಿ. ಎ. ಮುಂಡಿ ಇವರಿಗೆ ಲಂಚದ ಪ್ರಕರಣದಲ್ಲಿ ೧೫೦ ರೂ. ದಂಡವಾಗಿತ್ತು. ಈ ಶಿಕ್ಷೆ ಕಡಿಮೆಯಾಯಿತೆಂದು ಸರಕಾರದವರು ಹೈಕೋರ್ಟಿಗೆ ಅಪೀಲು ಮಾಡಿದ್ದರು. ಇದರ ವಿಚಾರಣೆಯಾಗಿ ಮೊದಲಿನ ದಂಡವಲ್ಲದೆ ಮುಂಡಿಯವರಿಗೆ ೬ ತಿಂಗಳ ಶಿಕ್ಷೆಯನ್ನೂ ವಿಧಿಸಲಾಗಿದೆಯೆಂದು ತಿಳಿಯುತ್ತದೆ.

ಷಡಕ್ಷರಯ್ಯಾ ಹಿರೇಮಠ ಎಂಬ ಹುಬ್ಬಳ್ಳಿಯ ಒಬ್ಬ ವರ್ತಕರು ಒಂದು ಚಿಮಣಿ ಎಣ್ಣಿ ಡಬ್ಬಿಯನ್ನು ೧೪ ರೂ ಗೆ ಮಾರುತ್ತಿದ್ದಾಗ ಲಂಚ ನಿರ್ಮೂಲ ಶಾಖೆಯ ಶ್ರೀ ಕಲ್ಲೂರ ಫೌಜದಾರರು ಹಿಡಿದು ಡಬ್ಬಿ ಮತ್ತು ರೂಪಾಯಿ ಜಪ್ತಿ ಮಾಡಿರುವರು.

ವಿಜಾಪುರ

ಬಾಗಲಕೋಟೆಯಲ್ಲಿ, ಒಂದೆ ಕಡೆ ಅದಿ ಅತಿಕ್ರಮಣವಾದ ಬಹುಕಾಲದ ವರೆಗಿದ್ದ ಮನೆಗಳನ್ನು ಕೆಡಹಲಾಗುತ್ತಿದೆಯೆಂದೂ ಈ ಕ್ರಮವು ಕಾಯದೇ ದೃಷ್ಟಿಯಿಂದ ಸರಿಯಿದ್ದರೂ ಮನೆಗಳ ಅಭಾವವಿರುವ ಈ ದಿನಗಳಲ್ಲಿ ಇದ್ದ ಮನೆಗಳನ್ನು ಹೀಗೆ ಹಿಂದುಮುಂದಿನ ವಿಚಾರವಿಲ್ಲದೆ ಕೆಡಹುವದು ಯೋಗ್ಯವಲ್ಲವೆಂದೂ ಈ ಕ್ರಮದಿಂದ ಜನರಲ್ಲಿ ಅಸಂತೋಷ ಉಂಟಾಗಿದೆಯೆಂದೂ ಒರ್ವರು ತಿಳಿಸುತ್ತಾರೆ.

ವಿಜಾಪುರದ ನಿರಾಶ್ರಿತ ಶಿಬಿರಕ್ಕೆ ಸ್ಥಳೀಯ ಅಧಿಕಾರಿಗಳು ಸಕಾಲಕ್ಕೆ ಬೇಡಿಕೆಗಳನ್ನು ಪೂರೈಸುತ್ತಿಲ್ಲವೆಂದೂ ಇದರಿಂದ ಅಲ್ಲಿದ್ದವರು ಸಂಕಷ್ಟಕ್ಕೆ ಗುರಿಯಾಗಿದ್ದಾರೆಂದೂ ನಿರಾಸಿತ ಸೇವಾ ಸಮಿತಿಯ ಕಾರ್ಯದರ್ಶಿಗಳು ಸರಕಾರಕ್ಕೆ ಅರಿಕೆ ಮಾಡಿಕೊಂಡಿದ್ದಾರೆ.

ಕಲಾದಿಗಿಯ ಶ್ರೀಮಂತ ದೇಸಾಯಿ ಶಿರಗುಪ್ಪಿ ಅವರು ಅಪ್ಪಾಸಾಹೇಬ ಇವರನ್ನು ಶ್ರೀ ಪಟ್ಟಾಧ್ಯಕ್ಷ ಹಿರೇಮಠ ಕಲಾದಗಿ ಅವರ ಸಮುಖದಲ್ಲಿ ವಿಧಿಪೂರ್ವಕ ದತ್ತಕ ತೆಗೆದುಕೊಂಡರು. ಆಗ ಶ್ರೀಮಂತರು ಮಠದ ಕಟ್ಟಡಕ್ಕಾಗಿ ೩ ಸಾವಿರ ರೂ. ಕೊಡುವದಾಗಿ ವಾಗ್ದಾನ ಮಾಡಿದರು.

ಬಾಗಲಕೋಟೆಯ ಸಕ್ರಿ ಹಾಯಸ್ಕೂಲಿಗೆ ಇಳಕಲ್ಲಿನ ಡಾ. ಚಂದ್ರಶೇಖರ ಶಾಸ್ತ್ರಿಗಳು ಭೆಟ್ಟಿ ಕೊಟ್ಟು ಸಂತೋಷ ವ್ಯಕ್ತಪಡಿಸಿ ೧೦೧ ರೂ. ಕೊಟ್ಟರು.

ಬಾಗಲಕೋಟೆಯ ಬಸವೇಶ್ವರ ಹಾಯಸ್ಕೂಲಿನ ೬ ವಿದ್ಯಾರ್ಥಿನಿಯರು ವಾರ್ಷಿಕ ಪರೀಕ್ಷೆಯಲ್ಲಿ ವಿಶೇಷ ಗುಣ ಪಡೆದದ್ದಕ್ಕೆ ಶ್ರೀಮತಿ ಪದ್ಮಾವತೀದೇವಿ ಅಂಗಡಿ ಅವರ ಹಸ್ತದಿಂದ ಪ್ರಶಸ್ತಿ ಪತ್ರ ಹಾಗು ೧೦೫ ರೂ. ಶಿಷ್ಯವೃತ್ತಿ ಕೊಡಿಸಲಾಯಿತು.

ಬಾಗಲಕೋಟೆಯ ವಾಸುದೇವ ವಿನೋದಿನಿ ನಾಟ್ಯ ಸಭೆಯವರು ಸಂಸ್ಥೆಯ ವಾರ್ಷಿಕೋತ್ಸವವನ್ನು ತಾ ೬ ಕ್ಕೆ ಶ್ರೀ ಅಂಗಡಿ ದಂಪತಿಗಳ ನೇತೃತ್ವದಲ್ಲಿ ಸಾಂಗಗೊಳಿದರಲ್ಲದೆ ಪುಲಿಕೇಶಿ ಎಂಬ ನಾಟಕವನ್ನು ಒಳ್ಳೆ ಯಶಸ್ವಿಯಾಗಿ ಅಭಿನಯಿಸಿದರು.

ತೀಕೋಟೆಯ ಸುತ್ತು ಮುತ್ತಲಿನ ಹಳ್ಳಿಗಳಲ್ಲಿ ಕಳೆದ ೨-೩ ವಾರ ದರೋಡೆಗಾರರ ಹಾವಳಿ ಬಹಳವಾಗಿದ್ದರಿಂದ ಪೋಲೀಸರು ಪರಿಶ್ರಮ ವಹಿಸಿ ತಾ ೭ ಕ್ಕೆ ಆ ದರೋಡೆಗಾರರನ್ನು ಬಂಧಿಸಿದರಲ್ಲದೆ ಮುಜ್ಜಂಡಿಯ ಅಡವಿಯಲ್ಲಿ ಅಡಗಿ ಕುಳಿತ ಕಳ್ಳರ ನಾಯಕನೆಂದು ಹೇಳಲ್ಪಡುವ ಸಿದರಾಯಾ ಸತ್ಯಪ್ಪ ನಾಟಿಕಾರ ಕೊಟ್ಟಲಗಿ ಇವನನ್ನೂ ಚಾತುರ್ಯದಿಂದ ಅವನ ಪಿಸ್ತೂಲ ಸಹಿತ ಹಿಡಿದು ತಿಕೋಟಗೆ ಒಯ್ದರು.

ಉತ್ತರ ಕನ್ನಡ

ಕಳೆದ ತಿಂಗಳ ಕೊನೆಯ ವಾರದಲ್ಲಿ ಕುಮಟಾದೊಳಗೆ ಒಕ್ಕಲತನ ಕೆಲಸಗಾರರ ವರ್ಗ ನಡೆಯಿತು. ಬೀಜ ಗೊಬ್ಬರ ಹಣ್ಣು ಹಂಪಲ ಮುಂತಾದ ಬಗ್ಗೆ ಆಯಾ ಶಾಖೆಯ ಅಧಿಕಾರಿಗಳು ಶಿಕ್ಷಣ ಕೊಟ್ಟರು.

ಗೋವನಕೊಪ್ಪದ ಪ್ರಾಥಮಿಕ ಶಿಕ್ಷಕರ ನೂಲುವ ವರ್ಗದ ಮುಕ್ತಾಯ ಸಮಾರಂಭವು ವಿದ್ಯಾಧಿಕಾರಿ ಶ್ರೀ ಸಾನೆಯವರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು. ವರ್ಧಾ ಕಾಲೇಜ ಪ್ರಿನ್ಸಿಪಾಲರಾದ ಶ್ರೀ ದೇಸಾಯಿಯವರು ಮೂಲ ಶಿಕ್ಷಣದ ತಮ್ಮ ಅನುಭವ ಹೇಳಿದರು ಚರಖಾ ಸಂಘದ ಮಂತ್ರಿಗಳಾದ ಶ್ರೀ ವಡವಿಯವರು ಮಾತನಾಡಿದರು.

ಹುಬ್ಬಳ್ಳಿಯ ರಾಷ್ಟ್ರೀಯ ಗಿರಣಿ ಮಜದೂರ ಸಂಘದ ಕಾರ್ಯದರ್ಶಿಗಳಾದ ಶ್ರೀ ದೇವಪೂರರು ಪ್ರಕಟನೆ ಹೊರಡಿಸಿ, ಹುಬ್ಬಳ್ಳಿ ಭಾರತಮಿಲ್ಲಿನಲ್ಲಿ ರಾತ್ರಿ ಪಾಳಿ ಪ್ರಾರಂಭವಾಗುವದಿದ್ದು ಕೆಲಸಬೇಕಾದವರು ಸಂಘಕ್ಕೆ ಬಂದು ತಮ್ಮ ಹೆಸರು ಕೊಡಬೇಕಾಗಿ ಬಿನ್ನಹಿಸಿದ್ದಾರೆ.

ಧಾರವಾಡ ಟ್ರೇನಿಂಗ ಕಾಲೇಜ ಪ್ರಿನ್ಸಿಪಾಲರಾಗಿ ನಿವೃತ್ತಿ ಹೊಂದಿದ ಶ್ರೀ ಹುಚ್ಚರಾವ ಉಮಡಿ, ಎಂ. ಎ. ಅವರು ಗಣೇಶ ಚತುರ್ಥಿಯ ದಿನ ಅಡ್ಡಾಡಲು ಹೋದಾಗ ಸ್ಮೃತಿ ತಪ್ಪಿ ಬಿದ್ದವರು ತಿರುಗಿ ಏಳಲೇ ಇಲ್ಲವೆಂದು ತಿಳಿಸಲು ವಿಷಾದವಾಗುತ್ತದೆ.

ಬೆಂಗಳೂರು ಮೈಸೂರು

ಹೊನ್ನಾಳಿಯ ಪೌರ ಸಭೆಗೆ ಶ್ರೀ ಪಟ್ಟಣಶೆಟ್ಟಿ ಮುರಿಗೆಪ್ಪನವರು ಪ್ರಥಮ ಸರಕಾರೇತರ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದು ಇವರು ಹಾಯಸ್ಕೂಲ ಸಾರ್ವತ್ರಿಕ ವಿದ್ಯಾರ್ಥಿ ನಿಲಯಕ್ಕೆ ೧ ಸಾವಿರ ರೂಪಾಯಿ ಕೊಟ್ಟು ಅದರ ಸಾಕೋದ್ಧಾರ ಕಾರ್ಯಕ್ಕೆ ನೆರವಾಗಿರುವರು. ಸ್ಥಳೀಯ ಸಂಸ್ಥೆಗಳ ಕಾರ್ಯಮೂಲಕವಾಗಿ ಶ್ರೀಯುತರು ಜನಪ್ರಿಯರಾಗಿದ್ದಾರೆ.

ಶಿವಮೊಗ್ಗೆಯ ಜಿಲ್ಲಾ ಸಮಾಜವಾದಿಗಳು ಈ ತಿಂಗಳ ಕೊನೆಯ ಒಳಗಾಗಿ ೧ ಸಾವಿರ ಸಭಾಸದರನ್ನು ಕೂಡಿಸಲು ಹಾಗೂ ಹಳ್ಳಿಗಳಲ್ಲಿ ಪ್ರಚಾರ ನಡೆಸಲು ನಿರ್ಧರಿಸಿದ್ದಾರೆ.

ಹಾಸನ ಜಿಲ್ಲಾ ಕಾಂಟ್ರ್ಯಾಕ್ಟರರ ಸಂಘದ ಆಶ್ರಯದಲ್ಲಿ ಅಖಿಲ ಮೈಸೂರು ಪಬ್ಲಿಕ ವರ್ಕ್ಸ ಕಾಂಟ್ರ್ಯಾಕ್ಟರರ ಸಮ್ಮೇಲನವನ್ನು ಹಾಸನದಲ್ಲಿ ಇದೇ ತಾ ೨೬ ಕ್ಕೆ ಭಾನುವಾರ ನಡೆಸಲು ಏರ್ಪಡಿಸಿರುತ್ತದೆ. ಸಂಸ್ಥಾನದ ಮರಾಮತ್ ಶಾಖಾಸಚಿವರಾದ ಶ್ರೀ ಎಚ್. ಸಿದ್ದಯ್ಯನವರು ಅಧ್ಯಕ್ಷತೆ ವಹಿಸುವರು. ಎಲ್ಲ ಕಾಂಟ್ರ್ಯಾಕ್ಟರರೂ ಸಹಕರಿಸಬೇಕೆಂದು ಕಾರ್ಯದರ್ಶಿಗಳು ವಿನಂತಿಸುತ್ತಾರೆ.

ಬೆಂಗಳೂರ ಸಿವಿಲ್ ಸ್ಟೇಶನ ವಿಭಾಗದ ೧೪ ನೂರು ಪೋಲೀಸರು ಸಂಬಳದ ಕಾರಣಕ್ಕಾಗಿ ತಾ ೧೦ ರಿಂದ ಸಂಪು ಹೂಡಿದ್ದರು. ಅವರಿಗೆ ತಾ ೧೨ ರ ಒಳಗೆ ಕೆಲಸಕ್ಕೆ ಹಾಜರ ಆಗಬೇಕೆಂದು ಮೈಸೂರು ಸರಕಾರವು ಎಚ್ಚರಿಕೆ ಕೊಟ್ಟಿತ್ತು. ತಾ ೧೨ರ ವರದಿಯಂತೆ ೧೦೦ಕ್ಕೆ ೮೦ ರಷ್ಟು ಪೋಲೀಸರು ಸಂಪು ಬಿಟ್ಟಿದ್ದಾರೆಂದು ಅಧಿಕೃತವಾಗಿ ತಿಳಿಯುತ್ತದೆ.

ಹಿಂದೀ ಸರಕಾರವು ಹೈದರಾಬಾದದ ಬಗ್ಗೆ ಯಾವ ಕ್ರಮ ಕೈಕೊಂಡರೂ ಮೈಸೂರ ಸಂಸ್ಥಾನದ ಮುಸಲ್ಮಾನರು ಬೆಂಬಲ ನೀಡುವರೆಂಬ ಗೊತ್ತುವಳಿಯು ತಾ. ೭ ಕ್ಕೆ ಸೇರಿದ ಮೈಸೂರು ಸಂಸ್ಥಾನ ಮುಸ್ಲಿಂ ಲೀಗಿನ ಸಭೆಯಲ್ಲಿ ಸ್ವೀಕೃತವಾಗಿದೆ.

ಮೈಸೂರು ಸರಕಾರದವರು ಅಜ್ಜಂಪುರಕ್ಕೆ ಹೊಸ ಮಾದರಿಯ ಮಿಡಲ ಸ್ಕೂಲಿಗೆ ಅನುವು ಮಾಡಿಕೊಟ್ಟಿದ್ದು ತಾ ೮ ಕ್ಕೆ ಅದರ ಪ್ರಾರಂಭೋತ್ಸವವು ನೆರವೇರಿತು ಉಪ್ಪಾರ ಜನಾಂಗದವರು ತಮ್ಮ ವಿದ್ಯಾರ್ಥಿನಿಲಯದ ಪ್ರಾರಂಭೋತ್ಸವವನ್ನು ಶ್ರೀ ಟಿ. ಸಿ. ಬಸಪ್ಪನವರ ಅಧ್ಯಕ್ಷತೆಯಲ್ಲಿ ಜರಗಿಸಿದರು ಸಭೆಯಲ್ಲಿ ಸಾವಿರಾರು ರೂಪಾಯಿಗಳ ವಾಗ್ದಾನವಾಯಿತು.

ಚಿಕ್ಕಮಂಗಳೂರಲ್ಲಿ ಪ್ಲೇಗು ಸುರುವಾಗಿದ್ದರಿಂದ ನಗರ ಸಭೆಯವರು ಸಂತೆಯನ್ನು ನಿಲ್ಲಿಸುವದು, ಸಿನೇಮಾ ಮುಚ್ಚುವದು, ಸಾಯನೋಗ್ಯಾಸ ಹೊಡೆಯುವದು ಮೊದಲಾದ ಉಪಾಯ ಕೈಕೊಂಡಿದ್ದಾರೆ.

ಕಳೆದ ೨ ತಿಂಗಳಿಂದ ಶೃಂಗೇರಿ ತಾಲೂಕಿನಲ್ಲಿ ಅಖಂಡ ಮಳೆ ಹತ್ತಿ ಅಡಕೆಗೆ ಕೊಳೆರೋಗ ತಗಲಿ ಬೆಳೆಕೆಟ್ಟಿದೆ ತೀರ್ಥಹಳ್ಳಿ, ಹೊಸ ನಗರ ತಾಲೂಕುಗಳಲ್ಲಿಯೂ ಕೆಲ ಭಾಗಗಳಲ್ಲಿ ಈ ರೋಗ ಸುರುವಾಗಿದೆ.

ಬಳ್ಳಾರಿ

ಬಳ್ಳಾರಿ ಜಿಲ್ಲಾ ಮದ್ಯ ಪ್ರತಿಬಂಧಕ ಅಧಿಕಾರಿಗಳಾದ ಶ್ರೀ. ಜಿ. ವ್ಹಿ. ರಂಗರೆಡ್ಡಿಯವರು ೪೦೦ ಸ್ಪೆಶಲ್ ಸಶಸ್ತ್ರ ಪೋಲೀಸ ಹಾಗು ತಮ್ಮ ಕಾವಲುಗಾರರೊಂದಿಗೆ ಭಟ್ಟಿ ಸರಾಯಿ ಶೋಧಿಸಿ ೧೭ ಜನರನ್ನು ಬಂಧಿಸಿದರೆಂದು ತಿಳಿಯುತ್ತದೆ.

ಎಮ್ಮಿಗನೂರ ವರ್ತಕರಾದ ಶ್ರೀ. ಜಿ. ಎಂ. ಶರಭಣ್ಣ ಹಾಗು ಜಿ. ಎಂ. ಶಂಕರಪ್ಪ ಇವರು ತಮ್ಮ ಕಟ್ಟಡ ಒಂದನ್ನು ಧರ್ಮಾರ್ಥ ವಾಚನಾಲಯಕ್ಕೆ ದಾನ ಮಾಡಿ ಕಾಗದ ಮಾಡಿ ಕೊಟ್ಟರು. ಅವರ ಗೌರವಾರ್ಥ ಸತ್ಕಾರಕೂಟ ನಡೆದಿತು.

ಬಳ್ಳಾರಿಯ ವಾರ್ಡಲಾ ಹಾಯಸ್ಕೂಲಿನಲ್ಲಿ ಹಿಂದಿ ಮಹಾವಿದ್ಯಾಲಯದ ಉದ್ಘಾಟನೆಯಾಯಿತು. ಇದಕ್ಕೆ ಮದ್ರಾಸ ಸರಕಾರದ ಮನ್ನಣೆ ಸಿಕ್ಕಿದೆ. ವಿಶಾರದ ಪರೀಕ್ಷೆಗೆ ವಿದ್ಯಾರ್ಥಿಗಳನ್ನೂ ಶಿಕ್ಷಕರನ್ನೂ ತರಬೇತುಗೊಳಿಸಲಾಗುವದು. ಬಳ್ಳಾರಿ, ಚಿತ್ತೂರ, ಮಂಗಳೂರ ಜಿಲ್ಲೆಗಳ ಸಲುವಾಗಿ ಇದು ತೆರೆಯಲ್ಪಟ್ಟಿದೆ.

ಬಳ್ಳಾರಿಯ ಪ್ರಭಾತ ಟಾಕೀಜದವರು ತಾ. ೫ ಕ್ಕೆ ಬಾಲರಾಜು ತೆಲಗು ಚಿತ್ರಪಟ ಪ್ರದರ್ಶನದ ಶತದಿನೋತ್ಸವ ಮಾಡಿ ನಿರ್ಮಾಪಕರೂ ನಿರ್ದೇಶಕರೂ ಆದ ಬಾಲರಾಮಯ್ಯಾ ಹಾಗೂ ವಿತರಣಕಾರರಾದ ಮಂಗರಾಜು ಅವರಿಗೆ ಬೆಳ್ಳಿ ಟ್ರ್ಯಾಫಿಗಳನ್ನೂ ನಟರಾದ ನಾಗೇಶ್ವರರಾವ ಹಾಗು ಶಿವರಾವ ಅವರಿಗೆ ಬಂಗಾರದ ಪದಕಗಳನ್ನೂ ಅರ್ಪಿಸಿದರು.

ದಕ್ಷಿಣ ಕನ್ನಡ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ [illegible] ಹಿಂದಿ ವಿತರಣೆ ಮಾಡಲು ಮದ್ರಾಸು ಸರ್ಕಾರವು ದ. ಕ. ಜಿಲ್ಲಾ ಕೋಆಪರೇಟಿವ್ ಸ್ಟೋರಿಗೆ ಅಧಿಕಾರವಿತ್ತಿದೆ. [illegible] ಗಳ ಗೋಣಿಚೆ ೧೧-೮-೨. ಕುಂದಾಪುರ, ಉಡುಪಿ, ಬ್ರಹ್ಮಾವರ, ಕಾರ್ಕಳ, ಮೂಡಬಿದ್ರೆ, ಅಜೆಕಾರು, ಮಂಗಳೂರು, ಮುಲ್ಕಿ, ಗುರುಪುರ, ಕೋಟೆಕಾರ್, ಧರ್ಮಸ್ಥಳ, ಬಂಟ್ವಾಳ, ಪುತ್ತೂರು, ಬೆಳ್ತಂಗಡಿ, ವಿಟ್ಲ, ಸುಳ್ಯ, ಬೆಳ್ಳಾರೆ, ಉಪ್ಪಿನಂಗಡಿ, ಕಾಸರಗೋಡು, ಹೊಸದುರ್ಗ, ಕುಂಬಳೆ, ಮಂಜೇಶ್ವರ-ಮುಂತಾದ ಕೇಂದ್ರಗಳಿಂದ ವಿತರಣೆ ಮಾಡುವ ವ್ಯವಸ್ಥೆಯಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಕೇಂದ್ರಗಳಲ್ಲಿರುವ ಬೇಕಾರ ಸಹಕಾರಿ ಸಂಘಗಳಿಗೆ ನೂಲು ವಿತರಣೆ ಮಾಡುವ ಅಧಿಕಾರವೀಯಲಾಗಿದೆ.

ದಕ್ಷಿಣ ಕನ್ನಡ ಮತ್ತು ಕೊಡಗು ಅಡಿಕೆ ಬೇಸಾಯಗಾರರ ಸಂಘದ ಕಾರ್ಯ ಸಮಿತಿಯ ಸಭೆಯು ಪುತ್ತೂರಲ್ಲಿ ಜರಗಿದಾಗ [illegible]ಹಳ್ಳಿ ಶಿವರಾಯರು ಜಿಲ್ಲೆಯ ಅಕ್ಕಿಯ ಪೂರೈಕೆಯ ವಿಚಾರವಾಗಿ ಮಾತನಾಡಿದರು. ಅಡಿಗೆ ಬೇಸಾಯಗಾರರಿಗೆ ಆಹಾರ ಧಾನ್ಯಗಳ ಪೂರೈಕೆಯ ಕುರಿತು ಯೋಜನೆ ತಯಾರಿಸಲು ಒಂದು ಸಮಿತಿಯು ನೇಮಕವಾಗಿದೆ.

ವಿಟ್ಲದಲ್ಲಿ ಒಂದು ಹೋಟೆಲ್ ಕೆಲಸಗಾರರ ಸಂಘವು ಸ್ಥಾಪಿಸಲ್ಪಟ್ಟಿತು. ೫ ಜನರಿಂದ ಕೂಡಿದ ಒಂದು ಕಾರ್ಯ ಸಮಿತಿಯೂ ರಚಿಸಲ್ಪಟ್ಟಿತು.

ವಿಟ್ಲದ ನಂ. ೫೬೨ನೇ ತಾಳಿಬೆಲ್ಲ ಸಹಕಾರಿ ಸಂಘದ ಮಹಾಸಭೆಯೊಂದು ಸ್ಥಳೀಯ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ. ಎ. ಜಿ. ತಿರುಮಲೇಶ್ವರ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ವಿಠಲದಾಸ ಶೆಟ್ಟರು ಸಂದರ್ಭೋಚಿತವಾಗಿ ಭಾಷಣಮಾಡಿದರು.

ಪಣಂಬೂರು ಹೊಸ ಶಾಲಾ ಕಟ್ಟಡ ಶಂಕುಸ್ಥಾಪನಾ ಕಾರ್ಯವು ಎಚ್. ಸೋಮಸುಂದರ ಅವರಿಂದ ಜರಗಿತು.

ದಿನಾಂಕ ೧೦ ರಿಂದ ಮಂಗಳೂರಲ್ಲಿ ೧೪೪ ನೇ ಪ್ರಕರಣ ಜಾರಿಯಲ್ಲಿ ತರಲಾಗಿದೆ. ಯಾವ ರೀತಿಯ ಸಭೆ, ಮೆರವಣಿಗೆ ಮಾಡುವವರೂ ಸಂಬಂಧ ಪಟ್ಟ ಅಧಿಕಾರಿಗಳಿಂದ ಅನುಮತಿ ಪಡೆಯಬೇಕೆಂದು ಸಾರಲಾಗಿದೆ.

ವೈದಿಕ ಧರ್ಮ ಪರಿಷತ್ತಿನ ವರ್ಧಂತ್ಯುತ್ಸವವು ಉಡುಪಿಯ ಶ್ರೀ ಅನಂತೇಶ್ವರ ದೇವರ ಸನ್ನಿಧಿಯಲ್ಲಿ ಭಜನೆ, ಮೆರವಣಿಗೆ, ವಾಸಪೂಜೆ ಮೊದಲಾದ ಕಾರ್ಯಕ್ರಮಗಳಿಂದ ಜರುಗಿತು.

ಶ್ರೀ. ಎ. ಎಸ್. ಪಿ. ಅಯ್ಯರರು ಮದ್ರಾಸ ಹಾಯಕೋರ್ಟಿನ ಜಜ್ಜರಾಗಿ ನೇಮಿಸಲ್ಪಟ್ಟಿದ್ದರಿಂದ ಉಡುಪಿಯ ಸ್ಥಳೀಯ ವಕೀಲ ಸಂಘದವರು ಸಭೆಸೇರಿ ಶ್ರೀಯುತರನ್ನು ಅಭಿನಂದಿಸಿದರು.

ಬಿಣಗಾಮೀನಿನ ಸಹಕಾರೀ ಸಂಘದ ೬ನೇ ವಾರ್ಷಿಕ ಸಾಧಾರಣ ಸಭೆಯು ತಾ.೧೨ಕ್ಕೆ ಬಿಣಗಾ ಸುಭಾಸ ವಾಚನಾಲಯದಲ್ಲಿ ಬುದ್ಧಾ ಬುದ್ಧಾ ತಾಂಡೇಲ ಇವರ ಅಧ್ಯಕ್ಷತೆಯಲ್ಲಿ ಕೂಡಿತ್ತು. ಮೀನಗಾರರಿಗೆ ಕೊಡುವ ಬೋನಸ್ಸನ್ನು ಅವರ ಮಕ್ಕಳ ಶಿಕ್ಷಣಕ್ಕೆ ಕೊಡಬೇಕೆಂದೂ ಮೀನು ಉದ್ಯೋಗ ಶಾಲೆಗೆ ೧೦ ರೂ. ಇನಾಮು ಕೊಡಬೇಕೆಂದೂ ನಿರ್ಣಯವಾಯಿತು. ಮತ್ತು ಮುಂದಿನ ವರ್ಷಕ್ಕೆ ಕಾರ್ಯಕಾರೀ ಮಂಡಲಕ್ಕೆ ಸದಸ್ಯರನ್ನು ಆರಿಸಲಾಯಿತು.

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ಪ್ರಾಥಮಿಕ ಶಾಲೆಗಳಲ್ಲಿ ೬೨,೬೦೩ ವಿದ್ಯಾರ್ಥಿಗಳಿದ್ದು ಜಿಲ್ಲೆಯಲ್ಲಿ ಶಾಲಾ ವಯಸ್ಸಿನ ಮಕ್ಕಳು ಒಟ್ಟು ೨,೨೧,೮೦೫ ಇರುವರೆಂದೂ ೧,೬೦,೨೫೧ ಮಕ್ಕಳು ಶಿಕ್ಷಣವಿಲ್ಲದೆ ಇರುವರೆಂದೂ ೪೭-೪೮ರಲ್ಲಿ ೩೧ ಗ್ರಾಮಗಳೊಳಗೆ ಒತ್ತಾಯದ ಶಿಕ್ಷಣ ಜಾರಿಯಲ್ಲಿ ಬಂದಿರುವದೆಂದೂ ತಿಳಿಯುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೪೫ ಹಾಯಸ್ಕೂಲಗಳಿದ್ದು ೭ ಶಾಲೆಗಳನ್ನು ಬೋರ್ಡಿನವರು ನಡೆಸುತ್ತಿರುವರು. ಅವುಗಳಲ್ಲಿ ೨೯೬೬ ವಿದ್ಯಾರ್ಥಿಗಳೂ ೪೬೧ ವಿದ್ಯಾರ್ಥಿನಿಯರೂ ಇರುವರು. ಈ ಬಗ್ಗೆ ಬೋರ್ಡಿನವರು ೨,೬೪,೮೭೫ ರೂ. ವೆಚ್ಚ ಮಾಡಿರುವರು.

ಹಿಂದುಸ್ತಾನ

ಮುಂಬಯಿ

ಪೂನಾ ಟಿಳಕರ ಕಾಯ್ದೆಯು ಅವಶೇಷವು ಸರಾಗವಾಗಿ ಸಾಗಲು ಸಹಾಯಕವಾಗಲೆಂದು ಒಂದು ಸಮಿತಿಯು ಸರಕಾರದಿಂದ ನಿಯುಕ್ತವಾಗಿದೆ. ಕಾಯಿದೆ ಸಂಬಂಧದ ತೊಡಕುಂಟಾದಾಗ ಮಾತ್ರ ಸಲಹೆ ಕೊಡುವದಲ್ಲದೆ ಬಳಕೆಯಲ್ಲಿ ಈ ಸಮಿತಿಯು ಕೈಹಾಕುವದಿಲ್ಲ.

ಮುಂಬಯಿ ನಗರ ಸಭೆಯ ಮುಸ್ಲಿಂ ಲೀಗ ಪಕ್ಷವು ಪುನರ್ಘಟಿಸಲ್ಪಟ್ಟು ಅದು ಜನತಾ ಪಕ್ಷವೆಂದು ಜಾತ್ಯತೀತ ಪಕ್ಷವಾಗಿ ಮಾರ್ಪಡುವದು.

ಲಾಯಸೆನ್ಸ ಪಡೆದ ೭ ಮುಸ್ಲಿ ಗುಂಡುಗಳ ಅಂಗಡಿಗಳನ್ನು ಮುಚ್ಚಿಸಿ ಮುಂಬಯಿ ಪೋಲೀಸರು ಸೀಲು ಮಾಡಿ ಕಾವಲಿಟ್ಟಿದ್ದಾರೆ. ಈ ಅಂಗಡಿಗಳು ಅಬ್ದುಲ ರಹಿಮಾನ ರಸ್ತೆಯಲ್ಲಿದ್ದು ಅವುಗಳ ಮಾಲಕರೆಲ್ಲ ಗೋಧ್ರಾದ ಮುಸಲ್ಮಾನರಿರುವರು. ಸಾರ್ವಜನಿಕ ಸುರಕ್ಷತತೆಯ ದೃಷ್ಟಿಯಿಂದ ಈ ಕ್ರಮ ಕೈಕೊಳ್ಳಲಾಗಿದೆ.

ಮುಂಬಯಿ ಸರಕಾರವು ಹೈದರಾಬಾದ ಗಡಿಯ ೬೦೦ ಮೈಲಿನ ಗಡಿಗುಂಟ ಎಲ್ಲ ಜಿಲ್ಲೆಗಳಲ್ಲಿಯೂ ಪಟ್ಟಣಗಳಲ್ಲಿಯೂ ಸಂರಕ್ಷಣದ ಎಲ್ಲ ಉಪಾಯಗಳನ್ನೂ ಕೈಕೊಂಡಿದ್ದಾರೆ. ಪೂರೈಕೆ ಮಾರ್ಗದ ಸೌಕರ್ಯಗಳಿಗೂ ವ್ಯತ್ಯಯ ಬರದಂತೆ ಪೂರ್ವಸಿದ್ಧತೆ ಮಾಡಲಾಗಿದೆ.

ಹೈದರಾಬಾದದೊಡನೆ ಸೈನಿಕ ಘರ್ಷಣೆಯುಂಟಾದಾಗ ಕೂಲಿಕಾರರು ನಿಷ್ಠೆಯಿಂದ ದುಡಿದು ಉತ್ಪಾದನೆ ಹೆಚ್ಚಿಸಿ ದೇಶಕ್ಕೆ ನೆರವಾಗಬೇಕೆಂದೂ ಮುಷ್ಕರ ಮೊದಲಾದ ವಿಘಾತಕ ಚಳವಳದಲ್ಲಿ ತೊಡಗಕೂಡದೆಂದೂ ಅಶೋಕ ಮೆಹತಾರು ಪ್ರಕಟನೆ ಹೊರಡಿಸಿದ್ದಾರೆ.

ತೃತೀಯ ಜಾಗತಿಕ ಯುದ್ಧವು ಸಂಭವಿಸಿದರೆ ಹಿಂದುಸ್ತಾನವು ತಟಸ್ಥವಾಗಿ ಉಳಿಯದೆ ಪಾಶ್ಚಾತ್ಯ ಪ್ರಜಾಪ್ರಭುತ್ವ ರಾಷ್ಟ್ರಗಳನ್ನು ಕೂಡಿಕೊಳ್ಳಬೇಕೆಂದೂ ರಶಿಯವನ್ನು ಕೂಡಿಕೊಳ್ಳುವದು ಲಾಭಕರವಲ್ಲವೆಂದೂ ಅಮೇರಿಕನ್ನದ ಪ್ರಸಿದ್ಧ ಲೇಖಕರಾದ ಲುಯಿ ಫಿಶರರು ಅಹಮ್ಮದಾಬಾದ ರೋಟರಿ ಕ್ಲಬ್ಬಿನಲ್ಲಿ ಮಾತಾಡುತ್ತ ಹೇಳಿದರು.

ಹಿಂದುಸ್ತಾನದ ರಿಝರ್ವ ಬ್ಯಾಂಕಿನ ಗವರ್ನರರಾದ ಸರ್ ಚಿಂತಾಮಣರಾವ ದೇಶಮುಖರು ಅಂತಾರಾಷ್ಟ್ರೀಯ ಹಣಕಾಸು ನಿಧಿ ಮತ್ತು ಅಂತಾರಾಷ್ಟ್ರೀಯ ಬ್ಯಾಂಕಿನ ಸಭೆಗೆ ಹಾಜರಿರಲು ವಾಶಿಂಗ್ಟನ್ನಕ್ಕೆ ತೆರಳಲು ತಾ. ೭ ಕ್ಕೆ ಲಂಡನ್ನಿಗೆ ಪ್ರಯಾಣ ಬೆಳಸಿದರು.

ಕೆಲವು ಲಿಂಗಾಯತ ದೇಶದ್ರೋಹಿಗಳು ಸ್ವಾರ್ಥಸಾಧನೆಗಾಗಿ ನಿಜಾಮ ಮಂತ್ರಿಮಂಡಳದಲ್ಲಿ ಸೇರಿದ್ದು ಇವರಿಗೆ ಜನರ ಬೆಂಬಲವಿಲ್ಲವೆಂದೂ ಲಿಂಗಾಯತ ಸಮಾಜವು ನಿಜಾಮ ಸರಕಾರದೊಡನೆ ಸಹಕರಿಸುತ್ತಿರುವದೆಂದು ನಡೆದ ನಿಜಾಮ ಸರಕಾರದ ಪ್ರಚಾರದಲ್ಲಿ ಹುರುಳಿಲ್ಲವೆಂದೂ ಹೈದರಾಬಾದ ಲಿಂಗಾಯತ ಪರಿಷತ್ತಿನ ಪ್ರಕಟನೆ ಹೊರಟಿದೆ.

ತಾ. ೯ ಕ್ಕೆ ಬಸರಾದಿಂದ ಮುಂಬಯಿಗೆ ವಿಮಾನದಲ್ಲಿ ಬಂದ ಬಬ್ಬ ಅರಬನನ್ನು ಸುಂಕದ ಅಧಿಕಾರಿಗಳು ಸಂಶಯದಿಂದ ಶೋಧಿಸಿ ೨೦೦ ತೊಲಿ ಬಂಗಾರವನ್ನು ಜಪ್ತ ಮಾಡಿದರು. ಈ ಬಂಗಾರವನ್ನು ಅವನು ಕೆಳಗೆ ಹಾಳೆಯಂತೆ ಮಾಡಿ ಪುಸ್ತಕರೂಪದಲ್ಲಿ ಇಟ್ಟುಕೊಂಡಿದ್ದನು.

ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ಮಂತ್ರಿಗಳಿಗೆ ಮಾನಪತ್ರ ಅರ್ಪಿಸಲು ೧೫ ರೂ. ಕ್ಕಿಂತ ಹೆಚ್ಚು ವೆಚ್ಚ ಮಾಡಕೂಡದೆಂದು ಮುಂಬೈ ಸರಕಾರವು ಪ್ರಕಟನೆ ಹೊರಡಿಸಿತ್ತು. ಇದನ್ನು ಮೀರಿ ಸುರತ ನಗರಸಭೆಯೂ ಮತ್ತೆ ೨೯ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳೂ ೧೫ರೂ ಕ್ಕಿಂತ ಹೆಚ್ಚು ವೆಚ್ಚ ಮಾಡಿದ್ದರಿಂದ ಅವಕ್ಕೆಲ್ಲ ಸ್ಪಷ್ಟೀಕರಣ ಕೇಳರುವದಲ್ಲದೆ ವೆಚ್ಚದ ಈ ಧನವನ್ನು ಇನ್ನಷ್ಟು ಹೆಚ್ಚಿಸಬೇಕೆಂದು ಬಂದ ಬೇಡಿಕೆಗಳನ್ನು ಮಾನ್ಯ ಮಾಡಲಾಗುವದಿಲ್ಲವೆಂದು ತಿಳಿಸಲಾಗಿದೆ.

ಲೀನವಾದ ಸಂಸ್ಥಾನಗಳಲ್ಲಿ ಲಾಯಸೆನ್ಸ ಇಲ್ಲದೆ ಶಸ್ತ್ರಾಸ್ತ್ರ ಇಟ್ಟುಕೊಂಡವರು ಅವನ್ನು ಸರಕಾರಕ್ಕೆ ಒಪ್ಪಿಸಬೇಕೆಂದೂ ಇಲ್ಲವೇ ಲಾಯಸೆನ್ಸ ಪಡೆದುಕೊಳ್ಳಬೇಕೆಂದೂ ಮುಂಬಯಿ ಸರಕಾರವು ಪ್ರಕಟನೆ ಹೊರಡಿಸಿದೆ.

ಹೊಸದಿಲ್ಲಿ

ಹಿಂದುಸ್ತಾನದ ರಾಜ್ಯಘಟನೆಯ ಕರಡಿನ ಬಗ್ಗೆ ಚರ್ಚೆ ನಡೆಸಿ ಅದನ್ನು ಅಂಗೀಕರಿಸಲು ಘಟನಾ ಸಮಿತಿಯ ಸಭೆಯು ನವಂಬರ ೪ ನೇ ತಾ. ಗೆ ಸೇರಲಿದೆಯೆಂದು ಘಟನಾಸಮಿತಿಯ ಕಚೇರಿಯಿಂದ ಪ್ರಕಟನೆ ಹೊರಟಿದೆ.

ಹಿಂದುಸ್ತಾನದ ಆಹಾರ ಮಂತ್ರಿ ಜಯರಾಮದಾಸರ ಅಧ್ಯಕ್ಷತೆಯಲ್ಲಿ ತಾ. ೮ ಕ್ಕೆ ಪ್ರಾಂತಿಕ ಆಹಾರ ಮಂತ್ರಿಗಳ ಸಭೆ ಸೇರಿತು. ಬರುವ ವರ್ಷ ಹೆಚ್ಚು ಆಹಾರ ಧಾನ್ಯ ಬೆಳೆಯಲು ಉಂಟಾಗುವ ಅಡಚಣಿ ದೂರ ಮಾಡಲು ಉಪಾಯ ಕಂಡುಹಿಡಿಯಲು ಒಂದು ಸಮಿತಿಯನ್ನು ನೇಮಿಸಿತು.

ಫೆಡರಲ್ ಪಬ್ಲಿಕ್ ಸರ್ವಿಸ ಕಮಿಶನ್ನಿನ ಪರೀಕ್ಷೆಗಳಿಗೆ ಕೂಡುವ ಉಮೇದವಾರರ ವಯಸ್ಸನ್ನು ೨೧ ರಿಂದ ೨೫ ರ ವರೆಗೆ ಏರಿಸಲಾಗಿದೆ.

ಸಂ. ರಾ. ಸಂಘಕ್ಕೆ ತೆರಳಬೇಕೆಂಬ ನಿಜಾಮ ಶಿಷ್ಟಮಂಡಲಕ್ಕೆ ಹಿಂದುಸ್ತಾನ-ಸರಕಾರವು ವಿಶೇಷ ಸೌಕರ್ಯ ಮಾಡಿ ಕೊಡಬೇಕೆಂದು ನಿಜಾಮರು ಕೇಳಿದ್ದರು. ಅದು ಸಾಧ್ಯವಿಲ್ಲೆಂದು ಹಿಂದುಸ್ತಾನ ಸರಕಾರವು ತಿಳಿಸಿದೆ.

ಅಪ್ಪಣೆಯಿಲ್ಲದೆ ಹಿಂದುಸ್ತಾನದ ಗಡಿಯಲ್ಲಿ ಪ್ರವೇಶಿಸಿದ್ದಕ್ಕೆ ಮೂವರು ಪಾಕಿಸ್ತಾನಿಗಳನ್ನು ಅಮೃತಸರದ ಪೋಲೀಸರು ಬಂಧಿಸಿದ್ದಾರೆ. ಇದೇ ಅಪರಾಧಕ್ಕಾಗಿ ಇನ್ನಿಬ್ಬರಿಗೆ ೨ ತಿಂಗಳ ಸಶ್ರಮ ಶಿಕ್ಷೆ ವಿಧಿಸಲಾಗಿದೆ.

ಹೈದರಾಬಾದ ಸಂಸ್ಥಾನವನ್ನು ನಿರ್ನಾಮ ಮಾಡಬೇಕೆಂದು ಭಾರತ ಸರಕಾರದ ಇಚ್ಛೆ ಇಲ್ಲವೆಂದೂ ಒಂದು ವೇಳೆ ಅದು ನಾಮಶೇಷವಾದರೆ ಅದಕ್ಕೆ ನಿಜಾಮ ಸರಕಾರವೇ ಹೊಣೆಯೆಂದೂ ಹಿಂದುಸ್ತಾನದ ಸಂರಕ್ಷಣ ಮಂತ್ರಿ ಸರದಾರ ಬಲದೇವಸಿಂಗರು ಒಂದು ಸಂದರ್ಭದಲ್ಲಿ ಹೇಳಿದರು.

ಬೆಲೆ ಏರುವದಕ್ಕೂ ವ್ಯಾಪಾರ ಕಟ್ಟಾಗುವದಕ್ಕೂ ರೇಲ್ವೆ ಸಾರಿಗೆಯೇ ಹೊಣೆಯೆಂದೂ ಅದು ಸುಧಾರಿಸದಿದ್ದರೆ ನಾಡಿನ ವ್ಯಾಪಾರಕ್ಕೆ ಧಕ್ಕೆ ಉಂಟೆಂದೂ ಹಿಂದೀ ವಣಿಕ್ ಮಹಾಮಂಡಲವು ಕಳಿಸಿದ ಮನವಿಗೆ, ಇದು ತಪ್ಪು ವಿಧಾನಗಳಿಂದ ಕೂಡಿದೆಯೆಂದು ರೇಲ್ವೆ ಮಂಡಲವು ಉತ್ತರ ಕೊಟ್ಟಿದೆ.

ಅ. ಭಾ. ಸಂಪಾದಕರ ಪರಿಷತ್ತಿನ ಸ್ಥಾಯಿ ಸಮಿತಿಯ ಸಭೆಯು ತಾ. ೭ ಕ್ಕೆ ಶ್ರೀ. ದೇವದಾಸ ಗಾಂಧಿಯವರ ಅಧ್ಯಕ್ಷತೆಯಲ್ಲಿ ದಿಲ್ಲಿಯಲ್ಲಿ ಸೇರಿತ್ತು. ಗವರ್ನರ ಜನರಲ್ಲರಾದ ಶ್ರೀ. ರಾಜಗೋಪಾಲಾಚಾರ್ಯರು ಸದಸ್ಯರ ಗೌರವಾರ್ಥವಾಗಿ ಸರಕಾರೀ ಭವನದಲ್ಲಿ ಸತ್ಕಾರ ಕೂಟ ಏರ್ಪಡಿಸಿದ್ದರು. ಸದ್ಯದ ಪರಿಸ್ಥಿತಿಯಲ್ಲಿ ಪತ್ರಿಕಾಕರ್ತರು ಸರಕಾರದೊಡನೆ ಸಹಕರಿಸಿ ಹೊಣೆಯರಿತು ನಡೆಯಬೇಕೆಂದು ಸರದಾರ ಪಟೇಲರು ಕೇಳಿಕೊಂಡರಲ್ಲದೆ ಈ ಸಮಿತಿಗೆ ಕೇಂದ್ರ ಸರಕಾರವು ಎಲ್ಲ ಸಹಾಯವನ್ನು ನೀಡುವದೆಂದು ಆಶ್ವಾಸನ ಕೊಟ್ಟರು.

ಹಿಂದೀ ಸರಕಾರದ ವಿದೇಶ ಶಾಖೆಯು ಒಂದು ಪ್ರಕಟನೆ ಹೊರಡಿಸಿ, ಇದೇ ೨೧ ಕ್ಕೆ ಪ್ಯಾರಿಸಿನಲ್ಲಿ ಸೇರಲಿರುವ ಸಂಯುಕ್ತರಾಷ್ಟ್ರಸಂಘದ ತೃತೀಯ ಸಾಮಾನ್ಯ ಸಭೆಗೆ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರ ಅಧ್ಯಕ್ಷತೆಯಲ್ಲಿ ಹಿಂದೀ ಶಿಷ್ಟಮಂಡಲವನ್ನು ಕಳಿಸಲಾಗುವದೆಂದು ಸಾರಿದೆ.

೧೯೪೮—೪೯ ಮತ್ತು ೫೦ ನೇ ವರ್ಷದಲ್ಲಿ ಹಿಂದುಸ್ತಾನಕ್ಕೆ ಒಟ್ಟು ೮೭೩ ಹೊಸ ರೇಲ್ವೆ ಇಂಜಿನುಗಳು ಬರುವವೆಂದು ಚೀಫ ರೇಲ್ವೆ ಕಮೀಶನರ ಶ್ರೀ. ಬಖಲೆಯವರು ತಿಳಿಸಿದರು.

ಮಹಾತ್ಮಾ ಗಾಂಧೀ ಜಯಂತಿಯನ್ನು ಇದೇ ತಾ. ೨೫ ರಿಂದ ೧೫ ದಿನ ಆಚರಿಸಬೇಕೆಂದೂ ಗಾಂಧೀ ಸ್ಮಾರಕ ನಿಧಿ ಸಂಗ್ರಹವೇ ಮುಖ್ಯ ಕಾರ್ಯವಾಗಿರಬೇಕೆಂದೂ ಪ್ರತಿಯೊಬ್ಬನೂ ೧೦ ದಿನದ ಆದಾಯವನ್ನು ಸಲ್ಲಿಸಬೇಕೆಂದೂ ಕಾಂಗ್ರೆಸ ಕಾರ್ಯಸಮಿತಿಯು ನಿರ್ಧರಿಸಿದೆಯೆಂದು ಅ. ಭಾ. ಕಾಂ. ಸಮಿತಿಯ ಕಚೇರಿಯ ಪ್ರಕಟನೆ ಹೊರಟಿದೆ.

ಕಲಕತ್ತಾದಲ್ಲಿದ್ದ ಇಂಪೀರಿಯಲ ಲಾಯಬ್ರರಿಯ ಹೆಸರನ್ನು ನ್ಯಾಶನಲ ಲ್ಯಾಯಬ್ರರಿ ಎಂಬುದಾಗಿ ಬದಲಾಗಿದೆಯೆಂದು ಹಿಂದೀ ಸರಕಾರದ ಪ್ರಕಟನೆ ಹೊರಟಿದೆ.

ಮದ್ರಾಸ

ಮದ್ರಾಸದ ಹೊಸ ಗವ್ಹರ್ನರರಾದ ಭಾವನಗರದ ಮಹಾರಾಜರಾದ ಸರ ಶ್ರೀಕೃಷ್ಣಸಿಂಹಜಿ ಅವರ ಪ್ರತಿಜ್ಞಾವಿಧಿಯು ಸರಕಾರೀ ಭವನದ ರಾಜಾಜೀ ಹಾಲಿನಲ್ಲಿ ತಾ. ೭ ಕ್ಕೆ ಬೆಳಿಗ್ಗೆ ನೆರವೇರಿತು.

ಮದ್ರಾಸದ ಕೊನೆಯ ಆಂಗ್ಲ ಗವರ್ನರರಾದ ಸರ ಆರ್ಚಿಬಾಲ್ಡ ನೈ ಅವರು ತಾ ೭ ಕ್ಕೆ ವಿಶೇಷ ವಿಮಾನದಿಂದ ಮುಂಬಯಿಗೆ ಹೋಗಿ ಅಲ್ಲಿಂದ ಕೆಲದಿನಗಳಲ್ಲಿ ಇಂಗ್ಲಂಡಿಗೆ ತೆರಳುವರೆಂದು ತಿಳಿಯುತ್ತದೆ.

ಹೈದರಾಬಾದ ಸಂಸ್ಥಾನದಲ್ಲಿದ್ದ ಎಲ್ಲ ಮೋಟಾರು, ಕಾರು, ಟ್ರಕ್ಕು ಮೊದಲಾದವನ್ನು ಇದೇ ಸಪ್ಟಂಬರ ೧೫ ರ ಒಳಗಾಗಿ ಸರಕಾರಕ್ಕೆ ಒಪ್ಪಿಸಬೇಕೆಂದು ಹೈದರಾಬಾದ ಸರಕಾರದ ಆಜ್ಞೆ ಹೊರಟಿದೆ.

ಕರ್ನೂಲದಿಂದ ೧೫ ಮೈಲು ಅಂತರದಲ್ಲಿದ್ದ ನಿಜಾಮ ಸಂಸ್ಥಾನದ ಸುಲ್ತಾನಪುರಂ, ಜಿಲ್ಲೇಲಪಾದ, ಕೀಲಂಪಾದ ಈ ೩ ಹಳ್ಳಿಗಳು ತಾ ೯ ಕ್ಕೆ ಸ್ವಾತಂತ್ರ್ಯ ಸಾರಿದವು. ಇಲ್ಲಿಯ ಹಿಂದೂ ಮುಸಲ್ಮಾನರೆಲ್ಲರೂ ಸೇರಿ ಹಿಂದೀ ಒಕ್ಕೂಟದ ಧ್ವಜ ಹಾರಿಸಿದ ವರದಿ ಬಂದಿದೆ.

ಪಾಕಿಸ್ತಾನ ಮತ್ತು ಹೈದರಾಬಾದಗಳ ಬಗ್ಗೆ ಸಹಾನುಭೂತಿಯುಳ್ಳ ಕೆಲ ನೌಕರರು ಪ್ರಾಂತಿಕ ಸರಕಾರಗಳಲ್ಲಿದ್ದಾರೆಂದು ಪಂ. ಜವಾಹರಲಾಲರು ಹೇಳಿದ್ದು ನಿಜವೆಂದೂ ಆ ಬಗ್ಗೆ ಯೋಗ್ಯ ಕ್ರಮ ಕೈಕೊಳ್ಳಲಾಗುವದೆಂದೂ ಮದ್ರಾಸದ ಮಂತ್ರಿ ಶ್ರೀ ಬಿ. ಗೋಪಾಲರೆಡ್ಡಿಯವರು ಮದ್ರಾಸ ಶಾಸನ ಸಭೆಯಲ್ಲಿ ತಿಳಿಸಿದರು.

ಹೈದರಾಬಾದ ವಕೀಲರ ಪ್ರತಿಭಟನಾಸಮಿತಿಯ ಅಧ್ಯಕ್ಷರಾದ ಡಾ. ವಿನಾಯಕರಾಯರು ನಿಜಾಮರ ಮುಖ್ಯಮಂತ್ರಿ ಮೀರಲಾಯಕ ಅಲಿ ಅವರಿಗೆ ಪತ್ರ ಬರೆದು, ಅವರು ಹೈದರಾಬಾದದಲ್ಲಿ ಶಾಂತಪರಿಸ್ಥಿತಿಯುಂಟೆಂದು ಶಾಸನ ಸಭೆಯಲ್ಲಿ ಸಾರಿದ್ದು ಲೋಕದ ಕಣ್ಣಲ್ಲಿ ಮಣ್ಣೆರಚುವಂತಹದೆಂದೂ ಸುಳ್ಳಿನ ಕಂತೆಯೆಂದೂ ಸಂಸ್ಥಾನದ ಅಮಾನುಷ ಅರಾಜಕತೆಗೂ ಅತ್ಯಾಚಾರಕ್ಕೂ ಮಿತಿಯೇ ಇಲ್ಲವೆಂದೂ ಅಧಿಕೃತ ಅಂಕಿ ಸಂಖ್ಯೆಗಳನ್ನು ಕೊಟ್ಟಿದ್ದಾರೆ.

ಹೈದರಾಬಾದದಲ್ಲಿ ಶಾಂತಿ ನೆಲೆಸಿದೆ ಎಂದು ನಿಜಾಮರ ಮುಖ್ಯ ಮಂತ್ರಿ ಹೇಳಿದ್ದನ್ನು ಖಂಡಿಸಿದ್ದಕ್ಕೆ ವಕೀಲರ ಪ್ರತಿಭಟನಾ ಸಮಿತಿಯ ಅಧ್ಯಕ್ಷರಾದ ಡಾ. ವಿನಾಯಕರಾಯರನ್ನು ನಿಜಾಮ ಪೋಲೀಸರು ತಾ ೧೧ ರಂದು ಬಂಧಿಸಿದರು.

ಮದ್ರಾಸ ಹೈದರಾಬಾದದ ೪೦೦ ಮೈಲುಗಳ ಗಡಿಯುದ್ದಕ್ಕೂ ಸಂರಕ್ಷಣೆಯ ಬಗ್ಗೆ ಯೋಗ್ಯ ವ್ಯವಸ್ಥೆ ಮಾಡಲಾಗಿದೆಯೆಂದು ವರದಿ ಬಂದಿದೆ. ಇದರಿಂದ ಗಡಿಯಿಂದ ಬರುವ ಜನರ ನಿರಾಶ್ರಿತರ ಸಂಖ್ಯೆ ಕಡಮೆಯಾಗಿದೆಯೆಂದೂ ತಿಳಿಯುತ್ತದೆ.

ಹಿಂದೂ ಜನರ ದ್ವಿಪತ್ನೀ ನಿರೋಧ ಮಸೂದೆಯು ತಾ ೧೦ ರಂದು ಮದ್ರಾಸ ಶಾಸನ ಸಭೆಯಲ್ಲಿ ಸ್ವೀಕೃತವಾಯಿತು.

ಪಶ್ಚಿಮ ಬಂಗಾಲ

ಹಿಂದೀ ಒಕ್ಕೂಟ ಸೈನ್ಯವು ಸಂಪೂರ್ಣ ಬಲದೊಂದಿಗೆ ಬಿಜವಾಡ, ಸೊಲ್ಲಾಪೂರದಿಂದ ಹೈದರಾಬಾದದ ಮೇಲೆ ಬೇಗ ದಂಡೆತ್ತಿ ಹೋಗಬೇಕೆಂದು ಐ. ಆಯ. ಸಿ. ಸಿ. ಮತ್ತು ಅ. ಭಾ. ಮುಸ್ಲಿಂಲೀಗ ಕೌನ್ಸಿಲ ಸಭಾಸದರಾಗಿದ್ದ ಪ್ರೊ. ಅಬ್ದುರ ರಹೀಮರು ತಾ ೧೧ ಕ್ಕೆ ಪಂ. ಜವಾಹರಲಾಲರಿಗೆ ಪತ್ರ ಬರೆದಿದ್ದಾರೆ.

ಹೊಸದಾಗಿ ಘಟಿತವಾದ ಪ. ಬಂಗಾಲ ಕಾಂ. ಕಮೀಟಿಯ ಕಾರ್ಯಕಾರೀ ಮಂಡಲದವರು ತಾ. ೧೧ ಕ್ಕೆ ಸಭೆಸೇರಿ 'ವಂದೇ ಮಾತರಂ' ಇದೇ ಭಾರತದ ರಾಷ್ಟ್ರಗೀತೆಯಾಗಬೇಕೆಂದು ನಿರ್ಣಯಿಸಿದರು.

ಮಧ್ಯಪ್ರಾಂತ

ಮಹಾತ್ಮಾ ಗಾಂಧಿಯವರ ರಚನಾತ್ಮಕ ಕಾರ್ಯಕ್ರಮವನ್ನು ಕಾರ್ಯರೂಪಕ್ಕೆ ತರಲು ಮಧ್ಯಪ್ರಾಂತದ ಕಾಂಗ್ರೆಸ ಕಾರ್ಯಕರ್ತರಿಗೆ ೩ ವಾರಗಳ ಶಿಕ್ಷಣ ಕೊಡುವ ವ್ಯವಸ್ಥೆಯಾಗಿದೆ.

ಹೈದರಾಬಾದಕ್ಕೆ ಹೊಂದಿದ ಮಧ್ಯಪ್ರಾಂತದ ಗಡಿಯಲ್ಲಿ ಉಗ್ರವಾದ ಸೈನ್ಯವ್ಯವಸ್ಥೆ ಇಡಲಾಗಿದ್ದು ಗಡಿ ಪ್ರದೇಶದ ಮೇಲೆ ಹೈದರಾಬಾದ ದೇಶದಿಂದ ದಾಳಿ ಸಂಭವಿಸಿದರೆ ಅದನ್ನು ಪ್ರತಿಭಟಿಸುವ ಸಿದ್ಧತೆಯಾಗಿದೆ.

ಸಂಯುಕ್ತಪ್ರಾಂತ

ತಾ. ೮ ಕ್ಕೆ ಕಾಶಿಯ ಹತ್ತರ ಗಂಗಾನದಿಯು ಗಂಡಾಂತರದ ಪಾತಳಿಗಿಂತ ೧೨ ಫೂಟು ೩ ಇಂಚು ಹೆಚ್ಚಿಗೆ ಏರಿತೆಂದು ಯುಕ್ತಪ್ರಾಂತದ ಪ್ರಕಟನೆ ಹೊರಟಿದೆ.

ಬನಾರಸದ ಹತ್ತರ ಪ್ಯಾಸೆಂಜರ ಬಂಡಿಯ ೫ ಡಬ್ಬಿಗಳು ಹಳಿ ತಪ್ಪಿ ೩ ಡಬ್ಬಿ ಹೊರಳಿದವೆಂದೂ ಅನೇಕರಿಗೆ ಗಾಯಗಳಾದವೆಂದೂ ವರದಿ ಬಂದಿದೆ.

ಲಾಭಬಡಕತನಕ್ಕೆ ೭ ವರ್ಷ ಸಶ್ರಮ ಶಿಕ್ಷೆ

ಮುಂಬಯಿ ಪ್ರಾಂತದ ನ್ಯಾಯಾಧೀಶರು ಮಿನೂ ಬಿ. ವಾಚ್ಛಾ ಎಂಬ ವ್ಯಾಪಾರಸ್ಥನಿಗೆ ನೂಲಿನ ವ್ಯಾಪಾರದಲ್ಲಿ ಲಾಭಬಡಕತನ ಮಾಡಿದನೆಂದು ೨ ವರ್ಷ ಸಶ್ರಮ ಶಿಕ್ಷೆ ಹಾಗೂ ೪ ಸಾವಿರ ರೂಪಾಯಿ ದಂಡ ತಪ್ಪಿದರೆ ಮತ್ತೆ ೧೬ ತಿಂಗಳ ಶಿಕ್ಷೆ ವಿಧಿಸಿದರು.

ನ್ಯಾಯಾಧೀಶರು ತಮ್ಮ ತೀರ್ಪಿನಲ್ಲಿ ದೇಶವು ಸಂಕಟದಲ್ಲಿ ಸಿಲುಕಿದಾಗ ಹೀಗೆ ಲಾಭಬಡಕತನ ನಡೆಸುವ ಈ ಜನರನ್ನು ದೇಶದ್ರೋಹಿಗಳೆಂದು ಗಣಿಸಬೇಕಲ್ಲದೆ ಅವರ ಸ್ವಾತಂತ್ರ್ಯವನ್ನೂ ಅವರು ವಾಮಮಾರ್ಗದಿಂದ ಗಳಿಸಿದ ಸಂಪತ್ತನ್ನೂ ಕಸಿದುಕೊಳ್ಳಬೇಕೆಂದು ಹೇಳಿದ್ದಾರೆ.

ಗಾಂಧೀ ಸ್ಮಾರಕಕ್ಕೆ ೧೪ ಲಕ್ಷ ರೂ.

ಗುಜರಾಥ ರಾಷ್ಟ್ರೀಯ ಮಜದೂರ ಸಂಘದವರು ಮಹಾತ್ಮಾ ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿಗೆ ೧೪ ಲಕ್ಷ ರೂ. ಕೂಡಿಸಿ ಕೊಟ್ಟಿರುವರು. ಈ ಸಂಘದಲ್ಲಿ ೩೫ ಕೂಲಿಕಾರ ಸಂಘಗಳು ಸಮಾವಿಷ್ಟವಾಗಿದ್ದು ಒಟ್ಟು ೧॥ ಲಕ್ಷ ಸಭಾಸದರಿರುವರು. ಈ ೧೪ ಲಕ್ಷ ರೂ. ಗಳಲ್ಲಿ ಅಹಮ್ಮದಾಬಾದದ ಜವಳಿ ಕೂಲಿಕಾರ ಸಂಘದವರೇ ೧೧ ಲಕ್ಷ ರೂ. ಕೂಡಿಸಿದ್ದಾರೆ.

ನಿಜಾಮರನ್ನು ಪಟ್ಟದಿಂದ ತಳ್ಳಬೇಕು

ಹೈ. ಸಂ. ಕಾಂ. ಕ್ರಿಯಾ ಸಮಿತಿಯ ನಿರ್ಣಯ

ಹೈದರಾಬಾದ ಸಂಸ್ಥಾನದ ಕ್ರಿಯಾ ಸಮಿತಿಯವರು ಸಭೆ ಸೇರಿ ನಿಜಾಮರನ್ನು ಪಟ್ಟದಿಂದ ತಳ್ಳಿ ಸಂಸ್ಥಾನದಲ್ಲಿ ಸಂಪೂರ್ಣ ಪ್ರಜಾಪ್ರಭುತ್ವವನ್ನು ಪ್ರಸ್ಥಾಪಿಸಬೇಕೆಂದು ಒಂದು ನಿರ್ಣಯ ಮಾಡಿ ಹಾಗೆ ಹಿಂದುಸ್ತಾನ ಸರಕಾರಕ್ಕೆ ಕೇಳಿಕೊಂಡಿದ್ದಾರೆ.

ನಿಜಾಮರ ಅಸ್ತಿತ್ವವು ಜಾತ್ಯತೀತ ರಾಷ್ಟ್ರ ನಿರ್ಮಾಣಕ್ಕೂ ಪ್ರಜಾಪ್ರಭುತ್ವಕ್ಕೂ ಗಂಡಾಂತರಪ್ರಾಯವಾಗಿರುವದೆಂದು ಕ್ರಿಯಾ ಸಮಿತಿಯ ಸ್ಪಷ್ಟಾಭಿಪ್ರಾಯವಿರುವದೆಂದು ಆ ಗೊತ್ತುವಳಿಯಲ್ಲಿ ಹೇಳಲಾಗಿದೆ.

ಕಲ್ಯಾಣದಲ್ಲಿ ನಿರಾಶ್ರಿತರಿಗಾಗಿ ಸಣ್ಣ ಪ್ರಮಾಣದ ಉದ್ಯೋಗ ಹಾಗು ತರಬೇತಿ ಕೇಂದ್ರ ತೆರೆಯುವದನ್ನು ಸರಕಾರದವರು ಮಾನ್ಯ ಮಾಡಿ ಬಂಡವಲಿಗಾಗಿ ೫೦ ಸಾವಿರ ರೂ. ಮಂಜೂರ ಮಾಡಿದ್ದಾರೆ.

ನಾರದ ಭವಿಷ್ಯ

ಜೋತಿಷಿ— ಕೃಷ್ಣಶಾಸ್ತ್ರಿ ಭಿಡೆ, ಭವಿಷ್ಯ ಕಥನ ಆಫೀಸ ಖಡೇಬಝಾರ, ಬೆಳಗಾವಿ.

ಸಪ್ಟಂಬರ ೨೦ ರಿಂದ ೨೬ ರ ವರೆಗೆ

ಮೇಷ

ಅತಿ ಉಷ್ಣ ಪದಾರ್ಥಗಳ ಸೇವನೆಯಿಂದ ವೈಯಲ್ಲಿ ಕಾವು. ಹೆಂಡತಿಯ ಹಾಗೂ ಮಕ್ಕಳ ಪ್ರಕೃತಿಯು ಬಹಳ ಉತ್ತಮ. ಪ್ರಾಪಂಚಿಕ ಸುಖವೂ ಮನಸ್ಸಿನಂತೆ. ಉದ್ಯೋಗದಲ್ಲಿ ಪ್ರಗತಿಯೂ ಪ್ರತಿಷ್ಠೆಯೂ ಸಾಧಾರಣವೇ. ಆದರೆ ಧನಲಾಭ ಚೆನ್ನಾಗಿದೆ. ಕೆಲವು ಮೋಹಕ ಮತ್ತು ವಿಲಾಸದ ವಸ್ತುಗಳನ್ನು ಕೊಳ್ಳುವ ಯೋಗ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಒಳ್ಳೆ ಯಶಸ್ಸು. ಆದರೆ ಪ್ರತಿಸ್ಪರ್ಧಿಗಳೊಡನೆ ಕೀಳು ವರ್ತನೆಯಾಗುವದರಿಂದ ಸ್ವಕೀಯರಲ್ಲಿ ಸಹ ನಿಮ್ಮ ಬಗ್ಗೆ ಅಪ್ರೀತಿಯುಂಟಾಗುತ್ತದೆ. ಮಿತ್ರ ಸುಖ ನೆಟ್ಟಗೆ. ಪ್ರವಾಸದಲ್ಲಿ ಸಂಕಟ. ಭೆಟ್ಟಿಯ ಉದ್ದೇಶವು ವಿಫಲವಾಗುವದು. ಆದರೆ ಪತ್ರವ್ಯವಹಾರ ಅನುಕೂಲ. ಅಶ್ವಿನಿಯ ಕೊನೆಯ ೨ ಮತ್ತು ಭರಣಿಯ ಮೊದಲಿನ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೨೨, ೨೩, ೨೪, ೨೫ ಅನುಕೂಲ.

ವೃಷಭ

ನಿಮ್ಮ ಪ್ರಕೃತಿ ಉತ್ತಮ. ಆದರೆ ಹೆಂಡರು ಮಕ್ಕಳದು ಕೆಡುವದು. ಉಳಿದ ವಿಷಯಗಳಲ್ಲಿಯೂ ಪ್ರಾಪಂಚಿಕ ತ್ರಾಸ ಬಹಳ. ಉದ್ಯೋಗದಲ್ಲಿ ಪ್ರಗತಿ ಸಾಧಾರಣ ಆದರೆ ಪ್ರತಿಷ್ಠೆಯೂ ಲಾಭವೂ ಉತ್ತಮ. ಸ್ಥಾವರದಲ್ಲಿ ಬಹಳ ತೊಂದರೆಯಾದಾದರೂ ಅನುಕೂಲ ಪಲ್ಲಟ. ಮಿತ್ರ ಸುಖ ಉತ್ತಮ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ದೊರೆವ ಯಶಸ್ಸು ಕೆಲಸಕ್ಕೆ ಬಾರದ್ದು. ಪ್ರಮಾಣ ಮೀರಿ ವೆಚ್ಚ. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ನೆಟ್ಟಗೆ. ಕೃತ್ತಿಕೆಯ ಕೊನೆಯ ೨ ಮತ್ತು ರೋಹಿಣಿಯ ಮೊದಲಿನ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೨೦, ೨೪, ೨೫, ೨೬ ಇವು ನೆಟ್ಟಗೆ.

ಮಿಥುನ

ನಿಮ್ಮ ಪ್ರಕೃತಿ ನೆಟ್ಟಗೆ ಆದರೆ ಹೆಂಡತಿಗೂ ಮಕ್ಕಳಿಗೂ ತುಸು ತೊಂದರೆ; ಉಳಿದ ಸಂಗತಿಗಳಲ್ಲಿ ಪ್ರಾಪಂಚಿಕ ಸುಖವು ಬಹಳ ಉತ್ತಮ. ಸ್ಥಾವರದಲ್ಲಿ ಒಂದು ದೊಡ್ಡ ಅನುಕೂಲ ಘಟನೆಯು ಅನಿರೀಕ್ಷಿತವಾಗಿ ಸಂಭವಿಸುವ ಯೋಗ. ಉದ್ಯೋಗದಲ್ಲಿ ತುಂಬ ಪ್ರಗತಿ ಹಾಗೂ ತುಂಬ ಲಾಭ. ಆದರೆ ಪ್ರತಿಷ್ಠಾಭಂಗವನ್ನು ತಡೆಯಲು ಪರಕೀಯರ ಬಾಲ ಬಡಿಯುವ ಪ್ರಸಂಗ. ಮಿತ್ರತ್ವದಲ್ಲಿ ವಿಷಮತೆಯನ್ನುಂಟು ಮಾಡಲು ಶತ್ರುಗಳು ಬಹಳ ಹವಣಿಸುವರು. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಹಿಮ್ಮೆಟ್ಟಿ ನಡೆದರೇ ಭಾವೀ ಹಿತವಿದೆ. ಪ್ರವಾಸವೂ ಪತ್ರವ್ಯವಹಾರವೂ ಭೆಟ್ಟಿಗಿಂತ ನೆಟ್ಟಗೆ. ಆರ್ದ್ರಾದ ಕೊನೆಯ ೨ ಮತ್ತು ಪುನರ್ವಸುವಿನ ಮೊದಲಿನ ೨ ಚರಣಗಳಿಗೆ ತೊಂದರೆಯಿಂದಲೇ ಯಶ. ತಾ. ೨೦, ೨೧, ೨೨, ೨೬ ಇವು ನೆಟ್ಟಗೆ.

ಕರ್ಕ

ಪ್ರಕೃತಿ ಉತ್ತಮ. ಉಳಿದವರದೂ ನೆಟ್ಟಗೆ. ಆದರೆ ಹೆಂಡರು ಮಕ್ಕಳು ನಿಮ್ಮ ಮಾನಭಂಗ ಮಾಡಲು ಬುದ್ಧಿ ಪೂರ್ವಕವಾಗಿಯೇ ಕೆಲವು ಕೃತಿಗಳನ್ನು ಎಸಗುವರು. ನೆರೆ ಹೊರೆಯವರಿಂದ ಮತ್ತು ನೌಕರ ಚಾಕರರಿಂದ ಜಗಳಾಡುವಂತಹ ವರ್ತನೆ. ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ ಮತ್ತು ಲಾಭ ಅತಿ ಉತ್ತಮ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಅನುಕೂಲತೆ. ಪ್ರವಾಸಾದಿ ಕೆಲಸಗಳು ಹಿತಾವಹ. ಪುಷ್ಯದ ಕೊನೆಯ ೨ ಮತ್ತು ಆಶ್ಲೇಷಾದ ಮೊದಲಿನ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೨೦, ೨೨, ೨೩, ೨೪ ಇವು ಚೆನ್ನಾಗಿವೆ.

ಸಿಂಹ

ಪ್ರಕೃತಿಯೂ ಪ್ರಾಪಂಚಿಕ ಸುಖವೂ ನೆಟ್ಟಗಿದ್ದರೂ ಸ್ತ್ರೀ ಸುಖದಲ್ಲಿ ತುಸು ವಿರಸ. ಉದ್ಯೋಗದಲ್ಲಿ ಪ್ರಗತಿಯೂ ಲಾಭವೂ ಬಹಳ ಉತ್ತಮ. ಆದರೆ ಪ್ರತಿಷ್ಠೆಯು ಮಾತ್ರ ಅನ್ಯರ ಮನೋಲಹರಿಯನ್ನು ಅವಲಂಬಿಸಿರುವ ಸಂಭವವಿರುವ ಕಾರಣ ವಿವಂಚನೆ ಉಂಟಾಗುವದು. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಒಳ್ಳೆ ಯಶ. ಆದರೆ ಪ್ರತಿಪಕ್ಷದವರು ಮೋಹಜಾಲವನ್ನು ಒಡ್ಡುವ ಪ್ರಯತ್ನ ಮಾಡುವರು. ಪ್ರವಾಸವೂ ಪತ್ರವ್ಯವಹಾರವೂ ಭೆಟ್ಟಿಗಿಂತ ನೆಟ್ಟಗೆ. ಮಘಾದ ಕೊನೆಯ ೨ ಮತ್ತು ಪೂರ್ವಾದ ಮೊದಲಿನ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೨೧, ೨೨, ೨೫, ೨೬ ಇವು ಚೆನ್ನಾಗಿವೆ.

ಕನ್ಯಾ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ನೆಟ್ಟಗೆ ಆದರೆ ಪರಸ್ಪರರಲ್ಲಿ ಮೇಲಿಂದ ಮೇಲೆ ಮತಭೇದ. ಮಕ್ಕಳು ಹೊರಗೆ ಹೌದೆನ್ನುವಂತೆ ನಡೆದುಕೊಂಡರೂ ಮನೆಯಲ್ಲಿ ತದ್ವಿರುದ್ಧವಾಗಿ ವರ್ತಿಸುವರು. ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ, ಲಾಭ ಎಲ್ಲವೂ ಬಹಳ ನೆಟ್ಟಗೆ. ಆದರೆ ವೆಚ್ಚವು ಮಾತ್ರ ಮೇರೆಯನ್ನು ಮೀರುವದು. ಸರಕಾರೀ ನೌಕರರು ಇಲ್ಲದ ವಿಚಾರಣೆ ಮಾಡುವ ಸಂಭವವಿರುವ ಕಾರಣ ಮನಸ್ಸಿಗೆ ಸಮಾಧಾನವಿಲ್ಲ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಉಭಯ ಪಕ್ಷಕ್ಕೂ ಸಮಾನ ಸ್ಥಿತಿ. ಪ್ರವಾಸಾದಿ ಕೆಲಸಗಳು ಹಿತಾವಹ. ಉತ್ತರಾದ ಕೊನೆಯ ೨ ಮತ್ತು ಹಸ್ತಾದ ಮೊದಲಿನ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೨೦, ೨೩, ೨೪, ೨೫ ಇವು ಒಳ್ಳೆಯವು.

ತುಲಾ

ಎಲ್ಲರ ಪ್ರಕೃತಿಯೂ ಉತ್ತಮ. ಆದರೆ ಹೆಂಡತಿಯು ಪ್ರತಿಯೊಂದು ಕೆಲಸದಲ್ಲಿಯೂ ವಿರೋಧ ತೋರುವಳು. ಸ್ಥಾವರದಲ್ಲಿ ಹಿತಾವಹವಾದ ಪಲ್ಲಟವಾಗುವದು. ಮಕ್ಕಳಿಗೆ ಊರ್ಜಿತ. ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ, ಲಾಭ ಇವೂ ಉತ್ತಮ. ಆದರೆ ತುಸು ಪರಾವಲಂಬಿಯಾಗಿರುವ ಪ್ರಸಂಗವಿದೆ. ವೆಚ್ಚವು ನಿರೀಕ್ಷೆಗಿಂತ ಹೆಚ್ಚಾಗುವದು. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಸಾಕಷ್ಟು ಯಶಸ್ಸು. ಆದರೆ ಸರಕಾರೀ ಜನರು ಪ್ರತಿಪಕ್ಷಿಯ ಪಕ್ಷಪಾತಿಗಳಾಗಿರುತ್ತಾರೆ. ಪ್ರವಾಸವೂ ಪತ್ರವ್ಯವಹಾರವೂ ಬೆಟ್ಟಿಗಿಂತ ನೆಟ್ಟಗೆ. ಸ್ವಾತಿಯ ಕೊನೆಯ ೨ ಮತ್ತು ವಿಶಾಖಾದ ಮೊದಲಿನ ೨ ಚರಣಗಳಿಗೆ ತೊಂದರೆಯಿಂದಲೇ ಯಶ. ತಾ. ೨೨, ೨೫, ೨೬ ಇವು ಉತ್ತಮ.

ವೃಶ್ಚಿಕ

ನಿಮ್ಮ ಪ್ರಕೃತಿ ಅಷ್ಟಕ್ಕಷ್ಟೇ; ಆದರೆ ಹೆಂಡತಿಯದು ಮಕ್ಕಳದು ಉತ್ತಮ. ಉಳಿದ ಸಂಗತಿಗಳಲ್ಲಿ ಪ್ರಾಪಂಚಿಕ ಸುಖವು ಸಾಧಾರಣ. ಉದ್ಯೋಗದಲ್ಲಿ ಪ್ರತಿಷ್ಠೆ ಲಾಭ ಎಲ್ಲವೂ ಅತ್ಯುತ್ತಮ. ಆದರೆ ವೆಚ್ಚವು ತಲೆಭಾರದ್ದು. ಸಣ್ಣ ಕಾರಣಕ್ಕಾಗಿ ಮಿತ್ರತ್ವದಲ್ಲಿ ಇಲ್ಲದ ತಿಕ್ಕಾಟ; ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಗೆಲವು. ಆದರೆ ನಿಮ್ಮ ಅತಿ ಚಿಕಿತ್ಸಕತೆಯ ಮೂಲಕ ಯಶಸ್ಸಿನ ಫಲಪ್ರಾಪ್ತಿಗೆ ವಿಲಂಬ. ಪ್ರವಾಸವೂ ಭೆಟ್ಟಿಯೂ ಪತ್ರವ್ಯವಹಾರಕ್ಕಿಂತ ಹೆಚ್ಚು ಅನುಕೂಲ. ಅನುರಾಧಾ ನಕ್ಷತ್ರದ ಕೊನೆಯ ೨ ಮತ್ತು ಜ್ಯೇಷ್ಠಾ ನಕ್ಷತ್ರದ ಮೊದಲಿನ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೨೦, ೨೩, ೨೪ ಇವು ಉತ್ತಮ.

ಧನು

ನಿಮ್ಮ ಪ್ರಕೃತಿಯು ಸಾಧಾರಣವಿದ್ದರೂ ಹೆಂಡರುಮಕ್ಕಳದು ಉತ್ತಮ. ನಿಮ್ಮ ನಿಮ್ಮಲ್ಲಿ ಮೇಲಿಂದ ಮೇಲೆ ಮತಭೇದವಾಗುವದರಿಂದ ಮನಸ್ಸಿಗೆ ಅಸಮಾಧಾನವೆನಿಸುವದು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖವು ಉತ್ತಮ. ತುಸುಮಟ್ಟಿಗೆ ಅನಿರೀಕ್ಷಿತ ಲಾಭವಾಗುವ ಸಂಭವ. ಪೂಜ್ಯ ವ್ಯಕ್ತಿಗಳ ಭೆಟ್ಟಿ ಮತ್ತು ಸಹವಾಸ ಯೋಗವಿದೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಲಾಭ ಉತ್ತಮ. ಆದರೆ ವೆಚ್ಚವು ಪ್ರಮಾಣ ಮೀರಿ ಆಗುವದು. ಧಾರ್ಮಿಕ ಅಥವಾ ಮಂಗಲ ಕಾರ್ಯ ಘಟಿಸುವ ಯೋಗವಿದೆ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಉಭಯ ಪಕ್ಷಕ್ಕೆ ಸಮಾನ ಸ್ಥಿತಿ. ಪ್ರವಾಸಾದಿ ಕೆಲಸಗಳು ಹಿತಕಾರಕ. ಮೂಲಾ ನಕ್ಷತ್ರದ ಕೊನೆಯ ೨ ಮತ್ತು ಪೂರ್ವಾಷಾಢ ನಕ್ಷತ್ರದ ಮೊದಲಿನ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೨೧, ೨೨, ೨೬ ಇವು ಉತ್ತಮ.

ಮಕರ

ನಿಮ್ಮ ಪ್ರಕೃತಿ ಸಾಧಾರಣವಾದರೂ ಹೆಂಡರು ಮಕ್ಕಳದು ಉತ್ತಮ. ಉದ್ಯೋಗದಲ್ಲಿ ಪ್ರತಿಷ್ಠೆ ಲಾಭ ಎಲ್ಲವೂ ಬಹಳ ನೆಟ್ಟಗೆ. ಆಪ್ತರ, ನೆರೆಹೊರೆಯವರ ಹಾಗೂ ಮಿತ್ರರ ಜೊತೆಗೆ ಬಹಳ ವಿರೋಧವುಂಟಾಗುವದು. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಒಳ್ಳೆ ಅನುಕೂಲತೆಯುಂಟು. ದಾಯಾದಿಗಳಲ್ಲಿ ಉನ್ನತಿಯಾಗುವದು. ಮಕ್ಕಳು ಲೋಕಗೌರವದ ಕೃತಿಗಳನ್ನು ಮಾಡುವರು. ಪ್ರವಾಸವು ದೂರದ್ದು ತೊಂದರೆಯದೂ ಆಗುವದು. ಭೆಟ್ಟಿ ಪತ್ರವ್ಯವಹಾರಗಳು ಅಷ್ಟು ಅನುಕೂಲವಾಗಿಲ್ಲ. ಉತ್ತರಾಷಾಢ ನಕ್ಷತ್ರದ ಕೊನೆಯ ೨ ಚರಣಗಳಿಗೆ ಮತ್ತು ಶ್ರವಣಾ ನಕ್ಷತ್ರದ ಮೊದಲಿನ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೨೦, ೨೩, ೨೪ ಇವು ಉತ್ತಮವಾಗಿವೆ.

ಕುಂಭ

ನಿಮ್ಮ ಪ್ರಕೃತಿ ನೆಟ್ಟಗೆ. ಆದರೆ ಹೆಂಡತಿಗೆ ಒಂದು ಅಪಘಾತದ ಮೂಲಕ ಕಷ್ಟವಾಗುವ ಭಯವಿದೆ. ಅಲ್ಲದೆ ಇಬ್ಬರಲ್ಲಿಯೂ ಕ್ಷುಲ್ಲಕ ಮಾತುಗಳಲ್ಲಿಯೂ ಸಹ ಮತಭೇದವಾಗುವದು. ಆಪ್ತರಾದ ಸ್ತ್ರೀಯರು ನಿಮ್ಮ ಕುಚೇಷ್ಟೆಯನ್ನೂ ನಿಂದೆಯನ್ನೂ ಮಾಡುವರು. ಮಕ್ಕಳಿಗೆ ಊರ್ಜಿತವಿದೆ. ಉದ್ಯೋಗದಲ್ಲಿ ಪ್ರಗತಿ ಕಡಿಮೆಯಿದ್ದರೂ ಈ ವಾರದಿಂದ ಲಾಭವೂ ಪ್ರತಿಷ್ಠೆಯೂ ಹೆಚ್ಚು. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಮಧ್ಯಮಸ್ಥಿತಿ. ಮಿತ್ರತ್ವದಲ್ಲಿ ವಿರೋಧ. ಪ್ರವಾಸವು ತೊಂದರೆಯದು. ಭೆಟ್ಟಿ ಮಧ್ಯಮವಾದರೂ ಪತ್ರವ್ಯವಹಾರ ಉತ್ತಮ. ಶತತಾರಕೆಯ ಕೊನೆಯ ೨ ಮತ್ತು ಪೂರ್ವಾಭಾದ್ರಪದದ ಮೊದಲಿನ ೨ ಚರಣಗಳಿಗೆ ತೊಂದರೆ ಹೆಚ್ಚು. ತಾ. ೨೦, ೨೨, ೨೬ ಉತ್ತಮ.

ಮೀನ

ನಿಮ್ಮ ಮತ್ತು ಮಕ್ಕಳ ಪ್ರಕೃತಿಯು ನೆಟ್ಟಗೆ ಆದರೆ ಹೆಂಡತಿಯದು ಸಾಧಾರಣ. ಉದ್ಯೋಗದಲ್ಲಿ ಪ್ರಗತಿ ಕಡಮೆ. ಲಾಭವೂ ಸಾಧಾರಣ ಆದರೆ ಪ್ರತಿಷ್ಠೆ ಚೆಟ್ಟಗೆ. ಮಿತ್ರತ್ವದಲ್ಲಿ ವಿರೋಧ. ವೈರೀ ಕೃತಿಯ ಒಂದೆರಡು ಘಟನೆಗಳು ಅನುಭವಕ್ಕೆ ಬರುವ ಯೋಗವಿದೆ. ತುಸು ಅನಿರೀಕ್ಷಿತ ಲಾಭ ಸಂಭವ. ಮಕ್ಕಳಲ್ಲಿ ಉನ್ನತಿ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಬಹಳ ಅನುಕೂಲ. ಪ್ರವಾಸ ಪತ್ರವ್ಯವಹಾರಕ್ಕಿಂತ ಭೆಟ್ಟಿ ನೆಟ್ಟಗೆ. ಉತ್ತರಾಭಾದ್ರಪದದ ಕೊನೆಯ ೨ ಮತ್ತು ರೇವತಿಯ ಮೊದಲಿನ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೨೦, ೨೨, ೨೩, ೨೪ ಇವು ಉತ್ತಮ.

ಹರಟೆ

ವಧುವಿನ ಕೈಹಿಡಿಯುತ್ತ

ಲೇ:— ಶ್ರೀ ಆರ್. ಬಿ. ಕುಲಕರ್ಣಿ, ಬಿ. ಎ.

ನ್ಯಾಯ, ಸಮತೆ, ಸಾಮಾಜಿಕ ಅನ್ಯಾಯ ದೂರ ಮಾಡುವದು, ಮೊದಲಾದ ದೊಡ್ಡ ದೊಡ್ಡ ತತ್ವಗಳನ್ನು ನಮ್ಮ ಕೇಂದ್ರ ಹಾಗೂ ಪ್ರಾಂತಿಕ ಮಂತ್ರಿಗಳು ಬೇಕಾದಷ್ಟು ಮಾತನಾಡುವರು. ಆದರೆ ವ್ಯವಹಾರದಲ್ಲಿ—ಅದೂ ಹೆಣ್ಣು ಮಕ್ಕಳಿಗೆ—ಈ ತತ್ವಗಳಂತೆ—ಅಧಿಕಾರ ಕೊಡುವ ಪ್ರಶ್ನೆ ಬಂದಾಗ ಅದೇಕೋ ಅವರು ಅವುಗಳನ್ನು ಮರೆತು ಬಿಡುವರೆಂದು ನನ್ನ ಭಾವನೆ. ಹೆಣ್ಣುಮಕ್ಕಳನ್ನು ಲಗ್ನವಾಗಲಿಚ್ಛಿಸುವ ವರನು ನಾನಾ ರೀತಿಯಲ್ಲಿ ಪರೀಕ್ಷೆ ಮಾಡಿ ನೋಡುವ ರೂಢಿ ಕಾಂಗ್ರೆಸ ಸರಕಾರದ ಕಾಲದಲ್ಲಿ ಇನ್ನೂ ಊರ್ಜಿತದಲ್ಲಿರುವದೇ ಒಂದು ಉದಾಹರಣೆ ಎಂದು ನಾನು ಎತ್ತಿ ತೋರಿಸಬಲ್ಲೆ.

ಜಗತ್ತಿನ ವ್ಯವಹಾರದಲ್ಲಿ ಹಣ ಕೊಟ್ಟು ಕೊಳ್ಳುವವನು ತಾನು ಕೊಳ್ಳುವ ವಸ್ತುವಿನ ಪರೀಕ್ಷೆ ಮಾಡುವದು ನ್ಯಾಯ. ಮಾರಾಟಕ್ಕೆ ಇಡಲ್ಪಟ್ಟ ವಸ್ತುವಿಗೆ ತನ್ನನ್ನು ಕೊಳ್ಳುವವರ ಪರೀಕ್ಷೆಯ ಅಧಿಕಾರವಿದೆಯೇ?

ಹಿಂಡುವ ಎಮ್ಮೆಯನ್ನು ಕೊಳ್ಳುವ ಗೌಳಿಗನು ತಾನು ಕೊಡುವ ಹಣಕ್ಕೆ ಎಮ್ಮೆಯು ಯೋಗ್ಯವಿದೆಯೇ? ಅದು ಎಷ್ಟು ಹಿಂಡಬಹುದು!, ಅದು ಮುಪ್ಪಿನದೇ? ಮುಂದೆ ಎಷ್ಟು ಕಾಲ ಹೈನಮಾಡಬಹುದು—ಇದನ್ನೆಲ್ಲ ಪರೀಕ್ಷೆ ಮಾಡಲು ಅದರ ಹಲ್ಲು ನೋಡಿ, ಅದನ್ನು ಹಿಂಡಿ ನೋಡಿ, ಅದರ ಪೂರ್ವಾಪರ ಸಂಗತಿ ಕೇಳಿ ಕೊಂಡುಕೊಳ್ಳುವನು. ಎಮ್ಮೆಗೆ ತನ್ನನ್ನು ಕೊಳ್ಳುವ ಗೌಳಿಗನು ಯೋಗ್ಯನೋ ಮೇವು ಮಿಡಚಿ, ಹತ್ತಿಕಾಳು, ಗುಗ್ಗರಿ, ಹಾಕುವ ಯೋಗ್ಯತೆ ಇರುವದೋ ಇಲ್ಲವೋ ಎಂಬ ವಿಷಯದ ಪರೀಕ್ಷೆ ಮಾಡುವ ಅಧಿಕಾರವೇ ಇಲ್ಲ. ಹಾಗೆಯೇ ಈಗ ಸರಕಾರದ ದೃಷ್ಟಿಗೆ ಬಿದ್ದ ಕನ್ಯಾಪಿತನು ಹಣ ಕೊಟ್ಟು ಖರೀದಿಗೆ ವರನನ್ನು ಕೊಳ್ಳುವವನು, ವರನು ಹಣಕ್ಕಾಗಿ ಕನ್ಯಾಪಿತರ ಪೇಟೆಯಲ್ಲಿ ಮಾರಾಟಕ್ಕೆ ಇಡಲ್ಪಟ್ಟ ಪ್ರಾಣಿ. ಅವನಿಗೆ ಕನ್ಯೆಯ ಪರೀಕ್ಷೆ ಮಾಡುವ ಅಧಿಕಾರವೇ ನ್ಯಾಯವಾಗಿ ಇರತಕ್ಕದ್ದಲ್ಲ. ಹಣದ ಮೋಹದಿಂದ ಕನ್ಯಾಪಿತನಿಗೆ ತನ್ನನ್ನು ತಾನೇ ಮಾರಿಕೊಳ್ಳುವ ಈ ವರನೆಂಬ ಪ್ರಾಣಿಗೆ ಕನ್ಯಾ ಪರೀಕ್ಷೆಯ ಅಧಿಕಾರವನ್ನು ವ್ಯವಹಾರ ಜ್ಞಾನವಿದ್ದವರ ಯಾರೂ ಕೊಡಕೂಡದು. ಕೊಟ್ಟಿದ್ದು ಒಂದು ಸಾಮಾಜಿಕ ಅನ್ಯಾಯವೇ ಸೈ!

ಇನ್ನೂ ಒಂದು ದೃಷ್ಟಿಯಿಂದ ಈ ಕನ್ಯಾ ಪರೀಕ್ಷೆಯ ಚದುರ ಚಂದ್ರಾಮರಾದ ವರಗಳು ನಡೆದುಕೊಳ್ಳುವ ರೀತಿ ನೀತಿಯನ್ನು ನೋಡಿ ಪರೆ ನ್ಯಾಯ, ಸಮತೆ, ಸಾಮಾಜಿಕ ನ್ಯಾಯ ವ್ಯಕ್ತಿಸ್ವಾತಂತ್ರ್ಯ [illegible] ಕನ್ಯೆಯಾಗಿ ಹುಟ್ಟಿದ ತಪ್ಪು! ಈ ಬಗೆ ಪ್ರಶ್ನೆಯು ಎದುರಾಗಬೇಕಾಗಿದ್ದಿತ್ತೆಂದು ಹೇಳಬೇಕಾಗುವದು. ನಾನು ಬಹಳ ದಿನ ಖರ್ಚಿನಿಂದ ಓದಿಸಿದವಳೆಂದೂ [illegible] ಕಲಿಸಿದವಳೆಂದೂ ಸಂಗೀತದ ಶಿಕ್ಷಣದಿಂದೂ ಆರೋಗ್ಯವಂತಳೆಂದೂ [illegible] ಮುಖಭಂಗದೊಡನೆ [illegible] ಪರರಾಗಿ ಬಂದವರೆಂದೂ [illegible] ಅಧಿಕಾರದಿಂದ 'ಮುಗ್ಧ' ಕನ್ಯೆಯನ್ನು ಓದಿಸುವದು, ಹಾಡಿಸುವದು, [illegible] ಅನೇಕ ಕ್ಷುಲ್ಲಕ ಶಾಸ್ತ್ರೀಯ ಪ್ರಶ್ನೆ ಕೇಳುವದು ಮೊದಲಾದ ರೀತಿಯಲ್ಲಿ ನಾನೂ ತನ್ನ ಗೆಳೆಯರೂ ತನ್ನ ಹಿರಿಯರೆಂದು ಹೇಳಿಕೊಳ್ಳುವ ಬಳಗದ್ದವರೂ ಕೂಡಿಯೇ ಪರೀಕ್ಷೆಗೆ ಗುರಿಪಡಿಸುವದೆಲ್ಲಿಯ ನ್ಯಾಯ? ಕನ್ಯೆಯು ಸುಶಿಕ್ಷಿತಳೂ ಸಂಗೀತವಿಶಾರದಳೂ ವಿಶ್ವವಿದ್ಯಾಲಯದ ಪ್ರಶಸ್ತಿ ಪತ್ರ ಪಡೆದವಳೂ ಎಂದು ಗೌರವಸ್ಥನಂತೆ 'ನಂಬಿ' ಸುಮ್ಮನಿರುವುದನ್ನು ಬಿಟ್ಟು ಈ ವರಪಕ್ಷದ ಪರೀಕ್ಷಕರು ತಮ್ಮ ವಧೂ ಪರೀಕ್ಷೆಯೆಂಬ ಕುಚೇಷ್ಟೆಯಲ್ಲಿ ನಿರತರಾಗುತ್ತಿರುವದು ಕನ್ಯಾಪಿತನಿಗೂ ಕನ್ಯೆಗೂ ಒಂದು ದೊಡ್ಡ ಅನ್ಯಾಯವಲ್ಲವೆ? ಇದೂ ಹೋಗಲಿ; ಇಷ್ಟು ಸಾಲದೆ ವರನ ಸಂಗಡ ಬಂದ ಸ್ತ್ರೀಯರು ತಮ್ಮ ಸ್ತ್ರೀ ಸಹಜವಾದ ರೀತಿಯಲ್ಲಿ ಸೂಕ್ಷ್ಮ ರೀತಿಯಲ್ಲಿ ಪರೀಕ್ಷೆ ನಡೆಸುವದೂ ಉಂಟು! ಆದರೆ ಕನ್ಯಾ ಪಕ್ಷದವರಿಗಾಗಲೀ ಕನ್ಯೆಗಾಗಲೀ ವರನ ಪರೀಕ್ಷೆ ಮಾಡುವ ಅಧಿಕಾರವೇ ಇಲ್ಲ! ಅವನು ತುಂಟ ಮಕ್ಕಳನ್ನು ಕೊಟ್ಟಾನೋ ತುಡುಗ ಮಕ್ಕಳನ್ನು ದಯಪಾಲಿಸಿಯಾನೋ, ಸುಖ ಕಂಟಕಗಳನ್ನು ತೆಗೆಯುವವನೋ, ಇಂಟ್ರ ವಿಟ್ಟುಕೊಂಡವನೋ ಬರೆದು ಓದಿ 'ಬೆಸ್ಟ್' ಆದವನೋ, ವಸ್ತ್ರಾಭರಣವನ್ನು ಉಳಿದವರಿಗಿಂತ ಹೆಚ್ಚಾಗಿ 'ಪೂರಯಿಸು'ವವನೋ ಎಂಬುದನ್ನು ನೋಡಬೇಕಾದ ಈ ೨೦ನೇ ಶತಮಾನದಲ್ಲಿ ಈ ಹಾಡು! ಇನ್ಸುರನ್ಸ ಕಂಪನಿಯವರು ಒಂದು ಸಾವಿರ ರೂಪಾಯಿಗಳ ವಿಮೆಯ ಪಾಲಿಸಿ ಸ್ವೀಕರಿಸಬೇಕಾದರೆ ವಿಮೆ ಇಳಿಸುವ ವ್ಯಕ್ತಿಯ ಆರೋಗ್ಯದ ಪರೀಕ್ಷೆಯನ್ನು ತಮ್ಮ ಡಾಕ್ಟರರಿಂದ ಪರೀಕ್ಷಿಸಿ ಆಮೇಲೆ ಪಾಲಿಸಿ ಸ್ವೀಕರಿಸುವದು ಎಲ್ಲರೂ ಬಲ್ಲರು. ಹೀಗಿದ್ದರೂ ಯಾವ ಕನ್ಯೆ ತನ್ನ ಇಡೀ ಆಯುಷ್ಯವನ್ನೇ ಲಗ್ನದಿಂದ 'ಗಂಡಾಂತರ'ಕ್ಕೀಡು ಮಾಡುವಳೋ ಅವಳಿಗೆ ಉಳಿದ ವಿಷಯ ಹೋಗಲಿ. ಆದರೆ ಅತ್ಯಂತ ಮಹತ್ವದ ವಿ[illegible]


—೧೬ನೆಯ ಪುಟಕ್ಕೆ

Reg. No. B. 3148

LICENCE No. 3
Licensed to Post without Prepayment

KARMAVEER 20-9-48

ಪುಸ್ತಕ ಪರಿಚಯ


[ನಮಗೆ ಬಂದ ಎಲ್ಲ ಪುಸ್ತಕಗಳನ್ನು ಸಾಭಾರದಿಂದ ಸ್ವೀಕರಿಸಿ ಉಲ್ಲೇಖ ಮಾಡುವೆವಾದರೂ ಆ ಎಲ್ಲವುಗಳ ವಿಮರ್ಶೆ ಮಾಡಲಾಗುವದಿಲ್ಲವೆಂದು ಕ್ಷಮಿಸಬೇಕಾಗಿ ಈ ಮೂಲಕ ತಿಳಿಸಬಯಸುತ್ತೇವೆ. -ಸಂ.]

ಏಶಿಯ ಜನಾಂಗಗಳ ಪ್ರಾಚೀನ ನಾಗರಿಕತೆಗಳು

ಲೆಖಕರು– ಶ್ರೀ ಎನ್. ಅನಂತಾಚಾರ್ಯ ಬಿ. ಎ. (ಆನರ್ಸ) ಧಾರವಾಡ ಮಿಂಚಿನ ಬಳ್ಳಿಯು ೧೨ ನೇ ವರ್ಷದ ೪ ನೇ ಕುಡಿ. ಕ್ರೌನ ಅಷ್ಟಪತ್ರ್ರದ ೧೦೪ ಪುಟಗಳು. ಬೆಲೆ ೧-೪-೦.

ಇದು ಏಶಿಯದಲ್ಲಿ ಪ್ರಾಚೀನ ಜನಾಂಗದ ನಾಗರಿಕತೆ, ಅದರ ವ್ಯಾಪ್ತಿ, ಜಾಗತಿಕ ನಾಗರಿಕತೆಗಾಗಿ ಅದು ಮಾಡಿದ ಸೇವೆ ಮುಂತಾದ್ದನ್ನು ಕನ್ನಡ ಬಲ್ಲವರಿಗೆ ತಿಳಿಸುವ ಮೊದಲ ಪುಸ್ತಕ ಎಂದು ಹೇಳಬಹುದು. ಈ ಸಂಬಂಧದ ತುಣಕು ಲೇಖಗಳು ಅಲ್ಲಲ್ಲಿ ಪ್ರಸಿದ್ಧವಾದುದುಂಟು. ಆದರೆ ಎಲ್ಲವನ್ನೂ ಸಂಗ್ರಹಿಸಿ ಪುಸ್ತಕರೂಪವಾಗಿ ಪ್ರಕಟಿಸಿದುದು ಇದೇ ಮೊದಲ ಸಲವೆಂದು ಹೇಳಬಹುದು. ಮಧ್ಯ ಏಶಿಯದಿಂದ ಆರ್ಯರು ಹೊರಟು ಹಿಂದುಸ್ತಾನದಲ್ಲಿ ಮತ್ತು ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ತಳವೂರಿ ತಮ್ಮ ಸಂಸ್ಕೃತಿ ನಾಗರಿಕತೆಗಳನ್ನು ಹಬ್ಬಿಸಿದ್ದಲ್ಲದೆ ಅಲ್ಲಲ್ಲಿಯ ಜನಾಂಗದ ಮೇಲೆ ತಮ್ಮ ವರ್ಚಸ್ಸು ಕೂಡಿಸಿದರೆಂಬುದು ಇತಿಹಾಸಜ್ಞರ ಅಭಿಪ್ರಾಯವಾಗಿದೆ. ಪಂಡಿತರಲ್ಲಿ ಕೆಲಮಟ್ಟಿಗೆ ಈ ಬಗ್ಗೆ ಮತಭೇದವಿದ್ದರೂ ಪಾಶ್ಚಾತ್ಯ ಗ್ರಂಥಗಳನ್ನು ಓದಿ ಆ ದೃಷ್ಟಿಯಿಂದಲೆ ವಿಚಾರ ಮಾಡುವವರೆಲ್ಲ ಮೇಲಿನ ಅಭಿಪ್ರಾಯವನ್ನು ಒಪ್ಪಲಿರುವರು. ಬಳ್ಳಿಯ ಸಂಪಾದಕರಾದ ಶ್ರೀ ಬುರ್ಲಿ ಬಿಂದು ಮಾಧವರು ಮುನ್ನುಡಿಯಲ್ಲಿ ಬರೆದಂತೆ ಆರ್ಯ ಸಂಸ್ಕೃತಿ ಅದರ ವ್ಯಾಪ್ತಿ ವೇದ ಪುರಾಣಗಳಲ್ಲಿ ಅಡಗಿರುವ ಅವರ ಸಂಸ್ಕೃತಿ ಮುಂತಾದದ್ದೆಲ್ಲ ಭಾರತೀಯ ದೃಷ್ಟಿಯಿಂದಲೆ ಅಭ್ಯಸಿಸಿ ಜಗತ್ತಿಗೆ ಹೊಸ ಬೆಳಕನ್ನು ಕೊಡುವತ್ತ ವಿದ್ವಾಂಸರು ಪ್ರಯತ್ನಿಸುವದು ಅವಶ್ಯವಾಗಿದೆ. ಪ್ರಾಚೀನ ನಾಗರಿಕತೆ, ಸಂಸ್ಕೃತಿ ಅವು ಎಂತು ಹಬ್ಬಿದವು, ಅವು ನಾಶವಾಗಲಿಕ್ಕೆ ಕಾರಣಗಳೇನು ಮುಂತಾದ್ದನ್ನು ಅಭ್ಯಸಿಸುವದು ನಮ್ಮ ಭವಿಷ್ಯತ್ತನ್ನು ಉಜ್ವಲಗೊಳಿಸಲಿಕ್ಕೆ ಸಹಾಯಕ ಮತ್ತು ಅವಶ್ಯಕವಾಗಿದೆ. ಆದುದರಿಂದ ಕನ್ನಡ ಬಲ್ಲವರೆಲ್ಲ ಈ ಪುಸ್ತಕವನ್ನು ಓದಿ ಹಿಂದಿನ ಹಿರಿಮೆಯನ್ನು ತಿಳಿದುಕೊಂಡು ಮುಂದಡಿಯಿಡಬೇಕು.

ಸ್ವತಂತ್ರ ಭಾರತದ ಅಶೋಕ ಚಕ್ರ ಧ್ವಜ

ಲೇ ಶ್ರೀ ಜಿ. ಪಿ ರಾಜರತ್ನಂ. ಹಿಂದ ಕಿತಾಬ ಲಿಮಿಟೆಡ್ ಮುಂಬಯಿ ಮತ್ತು ಬೆಂಗಳೂರು. ಕ್ರೌನ ಅಷ್ಟಪತ್ರ್ರದ ೧೨೦ ಪುಟಗಳು, ಬೆಲೆ ಒಂದು ರೂಪಾಯಿ.

ಕರ್ನಾಟಕದ ಪ್ರಸಿದ್ಧ ವಿದ್ವಾಂಸರೂ ಜೈನ ಬೌದ್ಧ ಸಾಹಿತ್ಯವನ್ನು ಅಭ್ಯಸಿಸಿದವರೂ ಆದ ಶ್ರೀ ರಾಜರತ್ನಂ ಇವರು ನಮ್ಮ ಹೊಸ ರಾಷ್ಟ್ರಧ್ವಜದ "ಅರ್ಥಸಂಪತ್ತಿ"ಯನ್ನು ಒಳ್ಳೆ ಹೃದಯಂಗಮವಾಗಿ ಮತ್ತು ಸಾರವತ್ತಾಗಿ ವಿವರಿಸಿದ್ದಾರೆ. ಪ್ರತಿಯೊಂದು ರಾಷ್ಟ್ರಕ್ಕೂ ಧ್ವಜದ ಅವಶ್ಯಕತೆ ಇರುವಂತೆ ಪರದಾಸ್ಯದಲ್ಲಿದ್ದ ಭಾರತವೂ ತನ್ನ ರಾಷ್ಟ್ರ ಧ್ವಜದ ಬಗ್ಗೆ ಎಂತು ವಿಚಾರ ಪ್ರಾರಂಭಿಸಿತು, ಯಾವ ರೀತಿ ಹಿಂದೀ ಧ್ವಜಗಳಲ್ಲಿ ಮಾರ್ಪಾಟಾಯಿತು, ಸದ್ಯದ ಅಶೋಕ ಚಕ್ರ ಧ್ವಜವು ಸ್ವತಂತ್ರ ಭಾರತದ ಅಧಿಕೃತ ಧ್ವಜ ಹೇಗಾಯಿತು, ಇದರ ರಹಸ್ಯವೇನು ಮುಂತಾದ್ದನ್ನೆಲ್ಲ ಇದರಲ್ಲಿ ವರ್ಣಿಸಿದೆ. ಹೊಸ ಧ್ವಜದಲ್ಲಿರುವ ಅಶೋಕ ಚಕ್ರದ ಮಹತ್ವವನ್ನು ಅರಿತು ಅದನ್ನೇ ಸ್ವತಂತ್ರಹಿಂದುಸ್ತಾನ ಸರಕಾರದವರು ಸ್ವೀಕರಿಸಿದ್ದು ಹೇಗೆ ಉಚಿತವಾಗಿದೆ ಮುಂತಾದ್ದನ್ನು ತಿಳಿಸಲಿಕ್ಕೆ ಲೇಖಕರು, ಸಾರನಾಥದಲ್ಲಿಯ ಧರ್ಮ ಚಕ್ರ, ಅದರ ಪರಿವಾರ, ಅಶೋಕ ಭಾರತ ಮುಂತಾದ್ದರ ಸಂಬಂಧದಲ್ಲಿ ಮಹತ್ವದ ವಿಷಯವನ್ನು ಬರೆದು ಬಹಳ ಉಪಕಾರ ಮಾಡಿದ್ದಾರೆ. ಆಯಾ ವಿಷಯನಿರೂಪಣೆಗೆ ಅವಶ್ಯವಾದ ಚಿತ್ರಗಳನ್ನು ಕೊಟ್ಟದ್ದರಿಂದ ಪುಸ್ತಕ ಮತ್ತಷ್ಟು ಸಂಗ್ರಾಹ್ಯವಾಗಿದೆ.

ಅವರು ಮತ್ತು ದೇವಕ್ಕ

ಬರೆದವರು– ಶ್ರೀ ಐರಣಿ ಶ್ರೀನಿವಾಸ. ಪ್ರಕಾಶಕರು– ಪರ್ಣಕುಟಿ ಗ್ರಂಥಮಾಲೆ, ಗೋಕರ್ಣ. ಪುಟ ಸಂಖ್ಯೆ ೯೦, ಬೆಲೆ ರೂ. ೧॥.

"ಅವರು ಮತ್ತು ದೇವಕ್ಕ" ಎರಡು ನೀಳ್ಗತೆಗಳು. "ಅವರು" ಎಂಬ ಕತೆ ಸ್ವಾರಸ್ಯವಾಗಿದೆ. ಅದರಲ್ಲಿಯ ವರದರಾಜ ಅಥವಾ ರಾಜಣ್ಣ ಎಂಬವನ ಧೈರ್ಯ ವ್ಯಕ್ತಿತ್ವ ಇವು ಶ್ಲಾಘ್ಯವೆನಿಸಿವೆ. "ದೇವಕ್ಕ" ಏನೋ ಚೆನ್ನಾಗಿದ್ದಾಳೆ; ಕಥಾ ತಂತ್ರವೂ ಹದಗೆಟ್ಟಿಲ್ಲ; ಆದರೆ ಕಥೆಯ ಓಟ ಕ್ರಮೇಣ ಕಡಿಮೆಯಾಗಿ ಶಿಥಿಲವೆನಿಸಿ ನಮ್ಮ ಆಸಕ್ತಿಯ ಕಾವು ಇಳಿಯುವುದು. ಉತ್ತಮ ಕತೆಗಾರಿಕೆಯ ಲಕ್ಷಣಗಳು ಅಲ್ಲಲ್ಲಿ ಕಂಡು ಬಂದರೂ ಮೊದಲಿನ ಕತೆಯಷ್ಟು ಆಸಕ್ತಿಯನ್ನು ಇದು ಹುಟ್ಟಿಸದು.

ಜೀವನ ಚಿತ್ರಗಳು

ಬರೆದವರು– ಶ್ರೀ ವಿ ಜಿ. ಭಟ್ಟ, ಎಂ. ಎ. ಪ್ರಕಾಶಕರು ಶ್ರೀ ಬೆಳಗಾವಿ ರಾಮಚಂದ್ರರಾಯರು, ಮನೋರಂಜನ ಪ್ರಕಾಶನ ಸಮಿತಿ, ಧಾರವಾಡ. ಪುಟ ೧೦೬ ಬೆಲೆ ರೂ. ೧॥.

ಶ್ರೀ ವಿ. ಜಿ. ಭಟ್ಟರು ಓದುಗರಿಗೆ ಹೊಸಬರಲ್ಲ. ಈ "ಉತ್ತರ ಕನ್ನಡದ ಜೀವನ ಚಿತ್ರಗಳ"ಲ್ಲಿ ೨೪ ಚಿಕ್ಕ ಚಿಕ್ಕ "ಸಂಗತಿ"ಗಳಿವೆ. ಅವನ್ನು ಹರಟೆಯ ಶೈಲಿಯಲ್ಲಿ ಕತೆಯಂತೆ ಬರೆಯಲಾಗಿದೆ. Light Reading ಲಘು ವಾಚನಕ್ಕೆ ಅವು ಬಹಳ ಯೋಗ್ಯವೆನಿಸಿವೆ, ರಸವತ್ತಾಗಿವೆ. ಬಲ್ಲಿದನ ಬಲ್ಮೆಯಿಂದ ತಮ್ಮ ಕಡೆಯ ವ್ಯಕ್ತಿಗಳ ನಡೆನುಡಿಗಳಲ್ಲಿಯ ಕುರೂಪ ಸುರೂಪಗಳನ್ನು ಭಟ್ಟರಲ್ಲಿ ಚಿಕ್ಕ ಸಂಗತಿಗಳಲ್ಲಿ ಹುಸಿನಗೆಯ ಹಾಸ್ಯದ ಮೂಲಕ ಹೊರಗೆಡಹಿದ್ದಾರೆ. ಬಣ್ಣದ ಚಿತ್ರ ಪುಸ್ತಕದ ಮುಖವನ್ನು ಅಲಂಕರಿಸಿದ್ದೇ ಅದರ ಬೆಲೆ ೧॥ ಆಗಲು ಕಾರಣವೆಂದು ತೋರುತ್ತದೆ.

ತಕಲಿಯಿಂದ ನೂಲುವದೆಂತು ?

ಮೂಲ ಲೇಖಕರು, ಸತ್ಯನ್. ಅನುವಾದಕರು, ಶ್ರೀ ರಾ. ಸಾವಕಾರ. ಪ್ರಕಾಶಕರು, ರಾ. ವೆ ವಡವಿ. ಮಂತ್ರಿ ಕರ್ನಾಟಕ ಚರಕಾ ಸಂಘ, ಹುಬ್ಬಳ್ಳಿ– ಪುಟಗಳು ೩೬, ಬೆಲೆ ೬ ಆಣೆ.

ತಕಲಿಯಿಂದ ನೂಲನ್ನು ಹೇಗೆ ತೆಗೆಯಬೇಕೆಂಬುದನ್ನು ಈ ಸಣ್ಣ ಪುಸ್ತಕದಲ್ಲಿ ತಿಳಿ ತಿಳಿಯಾಗಿ ಹೇಳಿ ಕೊಡಲಾಗಿದೆ. ನಿರೂಪಣೆಯನ್ನು ಸ್ಪಷ್ಟಪಡಿಸಲು ೬ ರೇಖಾಚಿತ್ರಗಳುಂಟು. ಎಳೆ ಹರಿದರೆ ಹೇಗೆ ಜೋಡಿಸಬೇಕು ಎಳೆ ಎಲ್ಲಿ ಹರಿಯುವದು ಎಂಬುದನ್ನು ಮೊದಲು ಮಾಡಿ ಜಿನುಗು ನೂಲು ಹೇಗೆ ತೆಗೆಯಬೇಕು ಎಂಬ ವರೆಗೂ ತಿಳಿಸಿ ಹೇಳಿ ಕೊನೆಗೆ ನೂಲಿನ ನಂಬರು ಗೊತ್ತು ಹಚ್ಚುವ ವಿಧಾನ, ಈ ಬಗ್ಗೆ ಉಪಯುಕ್ತ ಕೋಷ್ಟಕ ಇತ್ಯಾದಿ ಕೊಡಲಾಗಿದೆ. ಇದು ನೂಲು ತೆಗೆವವರ ಹತ್ತರ ಅವಶ್ಯ ಇರಬೇಕಾದ ಪುಸ್ತಕ.

ಪ್ರತಿಭಾ (ಮಾಸಪತ್ರಿಕೆ)

ಸಂಪಾದಕರು ಮತ್ತು ಪ್ರಕಾಶಕರು ಬಿ. ಪುಟ್ಟಸ್ವಾಮಯ್ಯ, ೧೭೮, ಬಳೇಪೇಟೆ, ಬೆಂಗಳೂರು ೨. ಬಿಡಿ ಸಂಚಿಕೆ ೨ ಆಣೆ. ವಾರ್ಷಿಕ ಚಂದಾ ೨ ರೂ.

ರಾಜಕೀಯ ಸಾಮಾಜಿಕ ಸಾಂಸ್ಕೃತಿಕ, ರಂಗಗಳಲ್ಲಿ ಅಳಿಲು ಸೇವೆ ಸಲ್ಲಿಸಲು ಜನ್ಮ ತಾಳಿದ ಹೊಸ ಪತ್ರಿಕೆಯಿದು. ಮೊದಲ ಸಂಚಿಕೆಯಲ್ಲಿ ಅನೇಕ ರೇಖಾಚಿತ್ರಗಳನ್ನು ಹಾಕಲಾಗಿದೆ. ಇದಕ್ಕಿಟ್ಟ ಬೆಲೆಯು ಚಂದಾ ಹಣವೂ ಬಹಳ ಸುಲಭ.

ಪ್ರತಿಭೆಯು ಎಲ್ಲೆಲ್ಲಿಯೂ ತನ್ನ ಪ್ರಭಾವ ಬೀರಲೆಂದು ಹಾರೈಸುತ್ತೇವೆ.

ವಧುವಿನ ಕೈಫಿಯತ್ತು

(೧೫ನೆಯ ಪುಟದಿಂದ)

ಯವಾದ ವರನ ಆರೋಗ್ಯದ ಬಗ್ಗೆ ಇನ್ನೂ ರನ್ನ ಕಂಪನಿಗಿದ್ದಷ್ಟು ಸಹ ಅಧಿಕಾರವಿರಬಾರದೆಂದರೆ! ವರನು 'ಸಾದಾ' ಬೂಟು ಸೂಟಿನಲ್ಲಿ ತಳಕು ಬೆಳಕಾಗಿ ಕಂಡರೂ ಅವನ ಆರೋಗ್ಯ ಸರಿಯಾಗಿರುವದೆಂಬ ಭರವಸೆ ಏನು? ಅವನು ಗುಪ್ತ ರೋಗದಿಂದ ನರಳುತ್ತಿರಬಹುದು. ದೃಷ್ಟಿ ಮಂದವಿರಬಹುದು; ಕಿವಿ ಕಿವುಡಾಗಿರಬಹುದು; ಹೃದಯ ಸರಿಯಾಗಿ ಕೆಲಸ ಮಾಡದೇ ಇರಬಹುದು; ದಾಂಪತ್ಯ ಜೀವನವನ್ನು ಸುಖಮಯ ಮಾಡುವ ಶಕ್ತಿ ಸಂಪನ್ನನೂ ಆಗಿರದೆ ಇರಬಹುದು. ಇವೆಲ್ಲವುಗಳ ಬಗ್ಗೆ ಯೋಗ್ಯ ವೈದ್ಯರಿಂದ ವರನ ಪರೀಕ್ಷೆ ಮಾಡಿಸುವ ಅಧಿಕಾರ ಕನ್ಯೆಯ ಪಕ್ಷದವರಿಗಿರುವದು ನ್ಯಾಯವಲ್ಲವೆ? ಇಂಥ ಹಕ್ಕನ್ನು ವರ ಪಕ್ಷದವರು ಬೇಡಿದರೆ ಸಿಗಲಾರದು. ಏಕೆಂದರೆ "ಕುಟುಂಬದ ಅವನತಿಯಾದರೆ ಅದು ಗಂಡಿನಿಂದ, ಉನ್ನತಿಯಾದರೆ ಅದು ಹೆಣ್ಣಿನಿಂದ" ಎಂಬುದು ಇಂದಿನ ನಮ್ಮ ಸ್ತ್ರೀವಾದಿಗಳ ಸಿದ್ಧಾಂತವಾಗಿದೆ. ವರನು ಹಣಕ್ಕಾಗಿ ತನ್ನನ್ನು ತಾನೇ ಮಾರಿಕೊಳ್ಳಲು ಸಿದ್ಧವಾದವನು; ವಧು ಕೇವಲ ಒಡವೆವಸ್ತ್ರಗಳಿಗಾಗಿ ಮಾತ್ರ. ಅವನಿಗೆ ಕನ್ಯಾ ಪರೀಕ್ಷೆಯ ಅಧಿಕಾರವೇ ಇಲ್ಲವೆಂದು ಮೇಲೆಯೆ ಹೇಳಿದೆ. ಆದರೆ ವರದಕ್ಷಿಣೆಯ ಆಸೆ ಹಿಡಿಯದೆ ಜೀವನದ ಒಡನಾಡಿ ಎಂದು ಕನ್ಯೆಯನ್ನು ಸ್ವೀಕರಿಸಲು ಇಚ್ಛಿಸುತ್ತಿದ್ದರೆ ತನಗೆ ಅವಳನ್ನು ತನ್ನ ಗೆಳತಿಯರೊಡನೆ ಬಂದು ಪರೀಕ್ಷೆ ಮಾಡುವ ಅಧಿಕಾರವಿದ್ದಂತೆ ಅವಳಿಗೂ ಪರೀಕ್ಷೆ ಮಾಡುವ ಅಧಿಕಾರವಿದೆ ಎಂದು ಒಪ್ಪಿಕೊಂಡು ಕನ್ಯೆಯು ತನ್ನ ಸಖಿ ಸಮೇತಳಾಗಿ ಬಂದು ವರನ ಪರೀಕ್ಷೆಮಾಡಲು ಸಂಗೀತ, ಸಾಹಿತ್ಯ, ರಾಜಕಾರಣ, ವ್ಯವಹಾರ ಜ್ಞಾನ, ದಾಂಪತ್ಯ ವಿಜ್ಞಾನ ಇತ್ಯಾದಿ ವಿಷಯಗಳ ಬಗ್ಗೆ ಇವನ ವಿಚಾರಗಳನ್ನು ಅರಿತುಕೊಳ್ಳಲು ಅನೇಕ ಪ್ರಶ್ನೆ ಮಾಡುವದಕ್ಕೆ ಅವಕಾಶ ಒದಗಿಸಿಕೊಡಬೇಕು!

ಇದು ಸಾಮಾಜಿಕ ರೂಢಿ. ಇದರಲ್ಲಿ ಬದಲಾವಣೆಯಾಗುವಂತೆ ಮಾಡುವದು ಸರಕಾರದ ಕರ್ತವ್ಯವಲ್ಲವೆಂದು ಕಾಂಗ್ರೆಸ ಮಂತ್ರಿಗಳು ತಮ್ಮ ಹೊಣೆ ಹಾರಿಸಿಕೊಳ್ಳಲು ಪ್ರಯತ್ನಿಸುವರೆಂದು ನನ್ನ ಬಲವಾದ ಭೀತಿ ಇದೆ. ಆದರೆ ಸರಕಾರವು ಸಮಾಜ ಸುಧಾರಣೆಗಾಗಿ ಸಮಾಜದಲ್ಲಿ ರೂಢವಾಗಿದ್ದ ದುಷ್ಟ ರೂಢಿಗಳನ್ನು ಹತ್ತಿಕ್ಕಿ ನ್ಯಾಯ, ಸಮತೆ ಪ್ರಗತಿ, ಸಮಾಜ ಸ್ವಾಸ್ಥ್ಯ ಈ ದೃಷ್ಟಿಯಿಂದ ಕಾನೂನು ಮಾಡುವದು ತನ್ನ ಕರ್ತವ್ಯವೆಂದು ಒಪ್ಪಿಕೊಂಡಿದೆ. ಅದರಂತೆ ಏಕಪತ್ನೀವ್ರತದ ಕಾನೂನು ಮಾಡಿದೆ. ಈ ಕಾನೂನಿನಿಂದ ಗಂಡಂದಿರು ಸಿಟ್ಟಿಗೆದ್ದು ಸೋಡಚೀಟಿ ಹಾಕಿ ಮತ್ತೊಬ್ಬಳನ್ನು ನೋಡಿಕೊಳ್ಳುವುದನ್ನು ತಪ್ಪಿಸಲು ಹೆಂಡಂದಿರು ಅಂಥ ಸಂದರ್ಭದಲ್ಲಿ ಸಂಗು ಹೂಡಬೇಕು. ವರದಕ್ಷಿಣೆ ನಿರೋಧದ ಮಸೂದೆ ಮಾಡಲಿದೆ. ವರದಕ್ಷಿಣೆ ಸಿಗಲಿಲ್ಲವೆಂದು ನಿರಾಶನಾಗಿ ಗಂಡ ವಸ್ತ್ರಾಭರಣ ಸಿನೆಮಾದಿಗಳಿಗಾಗಿ ದುಡಿದು ತಂದು ಹಾಕದಿದ್ದರೆ ಆಗಲೂ ಹೆಂಡಂದಿರು ಸತ್ಯಾಗ್ರಹ ಹಿಡಿಯಬೇಕು. ಆದರೆ ತನ್ನ ಭಾವೀ ಪತಿಯ ಪರೀಕ್ಷೆ ಮಾಡುವ ಅಧಿಕಾರವು ಕನ್ಯೆಗೆ ಕಾನೂನಿನಿಂದ ದೊರೆಯದಿದ್ದರೆ ಈ ಎಲ್ಲ ಕಾನೂನುಗಳೂ ನಿಷ್ಪ್ರಯೋಜನವೆಂದು ಹೇಳದಿರಲಾರೆ. ಕನ್ಯೆಗೆ ಈ ಅಧಿಕಾರ ಕಾನೂನಿನಿಂದೇ ಕೊಡಬೇಕು. ಅವಳಿಗೆ ತಾನು ತನ್ನ ಮನಸ್ಸಿಗೆ ಬಂದವನನ್ನು ಮನಸ್ಸು ಬಂದಂತೆ ಲಗ್ನವಾಗುವ ಜನ್ಮಸಿದ್ಧ ಹಕ್ಕು ಇದ್ದೇ ಇದೆಯಲ್ಲ ಎಂದು ಹೇಳಬಹುದು. ಆದರೆ ರೂಢಿಗೂ ಶಾಸ್ತ್ರಕ್ಕೂ ಮಹದಂತರವಿದೆ. ಎಂಬುದನ್ನು ಮರೆಯಲಾಗದು. ಸ್ತ್ರೀಯರು ಇನ್ನೂ ಶಿಕ್ಷಿತರಾಗಿಲ್ಲ. ಆದುದರಿಂದ ಅವರಿಗೆ ತಮ್ಮ ಹಕ್ಕುಗಳ ಜ್ಞಾನವಿರುವದೂ ಕಡಿಮೆ. ಇದ್ದವರು ಅದನ್ನು ಉಪಯೋಗಿಸಲು ರೂಢಿ ಅಡ್ಡ ಬರುವದುಂಟು. ಆದುದರಿಂದ ಸರಕಾರವು ಲಗ್ನವಾಗುವ ಮುನ್ನ ಪ್ರತಿಯೊಬ್ಬ ಮನುಷ್ಯನೂ ಕನ್ಯಾಪಕ್ಷದವರು ಸೂಚಿಸಿದ ವೈದ್ಯರ ಪರೀಕ್ಷೆಗೊಳಗಾಗಿ ತಾನು ಲಗ್ನವಾಗಲು ಯೋಗ್ಯವಾದ ಆರೋಗ್ಯ ಸಂಪತ್ತಿಯುಳ್ಳವನೆಂದು ಪ್ರಶಸ್ತಿ ಪತ್ರಿಕೆ ಪಡೆಯತಕ್ಕದ್ದು; ವಿದ್ಯಾಪ್ರದರ್ಶನವನ್ನು ಕನ್ಯೆಯೆದುರು ಮಾಡತಕ್ಕದ್ದು. ಆದರೆ ಕನ್ಯೆಯನ್ನು ಮಾತ್ರ ಅಂಥ ವೈದ್ಯ ಪರೀಕ್ಷೆಗೆ ಗುರಿ ಪಡಿಸಬಾರದು; ವಿದ್ಯಾಪರೀಕ್ಷೆಯನ್ನಂತೂ ಮಾಡಲೇ ಬಾರದು! ಹಾಗೆಮಾಡುವುದು ವಿಧಿಬಾಹಿರ ಎಂದು ಸಾರಬೇಕು ಅಲ್ಲದೆ ಲಗ್ನವಾಗುವವನ ಮೇಲೆ ಸರಕಾರವು ಯೋಗ್ಯ ಕ್ರಮ ಕೈಕೊಳ್ಳುವದು ಎಂದು ಕಾನೂನು ಮಾಡಬೇಕೆಂದು ನನ್ನ ಸೂಚನೆ. ಇಂಥ ಕಾನೂನಾದರೆ ಅನೇಕ ಹೆಣ್ಣುಮಕ್ಕಳು ಗಂಡನ ಹೊರಥಳಕು ಬೆಳಕು ಒನಪು ಒಯ್ಯಾರಗಳಿಗೆ ಮರುಳಾಗಿ ಲಗ್ನವಾಗಿ ಮುಂದೆ ದಾಂಪತ್ಯ ಜೀವನದಲ್ಲಿ ಅಸ್ವಾರಸ್ಯವನ್ನು, ಅವಿಧೇಯತೆಯನ್ನು ಕಾಣುವದು ಇಲ್ಲವೆ ರೋಗಪೀಡಿತ ಮಕ್ಕಳನ್ನು ಹಡೆದು ಸಮಾಜದ ಭಾವೀ ಪೀಳಿಗೆಯನ್ನೇ ಕೆಡಿಸುವದು ತಪ್ಪುವದು ಇದು. ಕನ್ಯೆಯರ ಆಯುಷ್ಯದಲ್ಲಿಯ ಮಹತ್ವದ ಭಾಗದಲ್ಲಿ ಅವರು ಉಪಯೋಗಿಸಬೇಕಾದ ಹಕ್ಕಿನ ಪ್ರಶ್ನೆಯುಳ್ಳದ್ದು ರಾಷ್ಟ್ರದ ಪೀಳಿಗೆ, ಸುಧಾರಿಸುವ ದೃಷ್ಟಿಯಿಂದಲೂ ಅಗತ್ಯವೆಂದು ಹೇಳದಿರಲಾರೆ. ಕಾಂಗ್ರೆಸ ಶಾಸನ ಸಭೆಗಳಲ್ಲಿಯ ಸದಸ್ಯರು ಪುರುಷರ ಅಧಿಕಾರ, ಮರ್ಯಾದೆ ಇವುಗಳಿಗೆ ಭಂಗ ತರುವದೆಂದು ಈ ತರದ ಕಾನೂನು ಮಾಡಲು ಹಿಂದೆ ಮುಂದೆ ನೋಡದೆ ಸಮಾಜದ ಭಾವೀ ಪೀಳಿಗೆಯ ಸುಧಾರಣೆ, ದಾಂಪತ್ಯಜೀವನದಲ್ಲಿ ಸ್ವಾಸ್ಥ್ಯ, ಸ್ತ್ರೀಯರಿಗೆ ಹೆಚ್ಚು ಹಕ್ಕು ಕೊಡುವ ಔದಾರ್ಯ, ಈ ದೃಷ್ಟಿಯಿಂದ ಇಂಥ ಕಾನೂನು ಮಾಡಲು ಮುಂದೆ ಬರಬೇಕು. ಇಲ್ಲವಾದರೆ ಮುಂದಿನ ಚುನಾವಣೆಯಲ್ಲಿ ನೂರಕ್ಕೆ ೩೦ ರಷ್ಟು ಮತದಾರರಿರುವ ಸ್ತ್ರೀಯರು ಸ್ತ್ರೀ ಪ್ರತಿನಿಧಿಗಳನ್ನೇ ತಮ್ಮ ಹಕ್ಕುಗಳ ಪ್ರಸ್ಥಾಪನೆಗಾಗಿ ಆರಿಸಿ ಕಳಿಸಬೇಕಾದೀತು, ಜೋಕೆ !

ಇನ್ನು ಸ್ತ್ರೀಯರಾದರೂ ತಮ್ಮ ಸಮಾಜದ ಗೌರವಕ್ಕೇ ಕುಂದು ತರುವ ಕನ್ಯಾ ಪರೀಕ್ಷೆಗೆ ತಲೆಬಾಗಿ ಮೊಳಕಾಲ ಸಂದಿಯಲ್ಲಿ ತಲೆ ಇಟ್ಟು ಕುಳಿತುಕೊಳ್ಳದೆ, ತನ್ನನ್ನು ಪರೀಕ್ಷಿಸುವ ವಿದ್ವಾಂಸನಿಗೆ ಅಂಥ ಹಕ್ಕಿಲ್ಲವೆಂದೂ ತನಗೆ ಮಾತ್ರ ಅಗಿದೆಯೆಂದೂ ತಿಳಿದುಕೊಂಡು ಅವನ ಪರೀಕ್ಷೆ ತೆಗೆದುಕೊಳ್ಳಲು ಮುಂದೆ ಬರಬೇಕು. ಒಬ್ಬ ವರನು ನೂರಾರು ಕನ್ಯೆಯರನ್ನು ಪರೀಕ್ಷಿಸುತ್ತಿರುವದೂ ಒಬ್ಬ ಕನ್ಯೆ ವರಗಳಿಂದು ತನ್ನನ್ನು ನೋಡಲು ಬರುವ ನೂರಾರು ಜನರ ಮುಂದೆ ನಿಂತು ನಾಯಕಿಣಿಯಂತೆ ಹಾಡುವದೂ ಓದುವದೂ ತಪ್ಪುವಂತೆ. ಶ್ರೇಷ್ಠೋಹಂಬುದ್ಧಿಯಿಂದ ವರ್ತಿಸುವ ಧೈರ್ಯ ತಾಳಬೇಕು. ಪುರುಷರು ಸ್ತ್ರೀ ವರ್ಗದ ಅವಹೇಲನ ಮಾಡುವ ಈ ದುಷ್ಟ ಕನ್ಯಾಪರೀಕ್ಷೆಯ ರೂಢಿಯನ್ನು ಒದ್ದು ಒದ್ದು ನಾಮಶೇಷ ಮಾಡಬೇಕು. ಕನ್ಯೆಯೇ ವರನ ಪರಿಚಯ ಮಾಡಿಕೊಳ್ಳುವದು. ಸಹಜ ರೀತಿಯಲ್ಲಿ ನಡೆಯುವ ಒಂದು ಘಟನೆಯಾಗುವಂತೆ ಸ್ವಶಕ್ತಿ ಇಲ್ಲದುದರಿಂದ ಅವಳಿಗೆ ಸಂಬಂಧಿಸಿದವರು ನೋಡಿಕೊಳ್ಳಬೇಕು ಈ ಸಂಬಂಧದಲ್ಲಿ ವಿಶೇಷ ಮಾಹಿತಿ ಬೇಕಾದವರು ಶ್ರೀ ನಾ. ಕಸ್ತೂರಿಯವರು ಬರೆದ "ವರಪರೀಕ್ಷೆ" ಎಂಬ ಪ್ರಹಸನವನ್ನು ಪಠ್ಯ ಪುಸ್ತಕವನ್ನಾಗಿ ತೆಗೆದುಕೊಂಡು ಅಭ್ಯಸಿಸಬೇಕು.

ವಧುವಿಗೆ ಹುಟ್ಟುವಾಗಲೇ ವಿದ್ಯಬುದ್ಧಿ ಸಂಸ್ಕಾರಗಳನ್ನು ದೇವರು ಕೊಟ್ಟಿರುತ್ತಾನೆ; ವರನಿಗೆ ಅವನ್ನು ಸ್ವಶ್ರಮದಿಂದ ಗಳಿಸಿಕೊಳ್ಳಬೇಕಾಗುತ್ತದೆ ಎಂಬುದು ನಮ್ಮ ಹೊಸ ಮಾನಸಶಾಸ್ತ್ರದ ಸಿದ್ಧಾಂತ !

ಈ ಪತ್ರಿಕೆಯು ಹುಬ್ಬಳ್ಳಿ, ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಮೊಹರೆಯವರು ಮುದ್ರಿಸಿ ಪ್ರಕಟಿಸಿದರು.